ದೆಹಲಿ ಕರ್ನಾಟಕ ಸಂಘದ

# ಅಭಿಮತ

ಮಾರ್ಚ್ 2012
ಬೆಲೆ ರೂ. 1



## ಯುಗಾದಿ ತರಲಿದೆ ನಂದನ : ನಾಡಾಗಲಿ ನಂದನ ವನ

# ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರಿಗೆ ಅಭಿನಂದನೆ




2011ರ ಸಾಲಿನ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕೃತರಾದ ಖ್ಯಾತ ಲೇಖಕ ಬಿ. ಗೋಪಾಲಕೃಷ್ಣ ಪೈ, ಕೊಂಕಣಿ ಕವಿ ಮೆಲ್ವಿನ್ ರೊಡ್ರಿಗಸ್ ಹಾಗೂ ಉರ್ದು ಕವಿ ಖಲೀಲ್ ಉರ್ ರೆಹಮಾನ್ ಅವರುಗಳನ್ನು ಫೆಬ್ರವರಿ 15ರಂದು ದೆಹಲಿ ಕರ್ನಾಟಕ ಸಂಘದಲ್ಲಿ ಆತ್ಮೀಯವಾಗಿ ಅಭಿನಂದಿಸಲಾಯಿತು. ದೆಹಲಿಯ ಹಿರಿಯ ಕನ್ನಡಿಗ, ಮಾಜಿ ಅಧ್ಯಕ್ಷರಾದ ಐ. ರಾಮಮೋಹನ ರಾವ್ ಹಾಗೂ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಪುರಸ್ಕೃತರನ್ನು ಶಾಲು ಹೊದಿಸಿ, ಸ್ಮರಣಿಕೆ ನೀಡಿ ಸನ್ಮಾನಿಸಿದರು. ಕೊಂಕಣಿ ಸಮುದಾಯದ ಹಿರಿಮೆಗೆ ಗರಿ ಮೂಡಿಸಿದ ಐತಿಹಾಸಿಕ ಕಾದಂಬರಿ 'ಸ್ವಪ್ನ ಸಾರಸ್ವತ' ಕೃತಿ ರಚನಕಾರ ಗೋಪಾಲಕೃಷ್ಣ ಪೈ ಅವರನ್ನು ಆಪ್ತ ಗೆಳೆಯ ಲಕ್ಷ್ಮಣ ಮಲ್ಯ ಅವರು ಪರಿಚಯಿಸಿದರು. ಕಾಲೇಜು ದಿನದಿಂದಲೇ ಸಾಹಿತ್ಯದ ಗೀಳು ಇದ್ದ ಪೈ ಅವರು ಮುಂದೆ ಕೆನರಾ ಬ್ಯಾಂಕಿನ ತಮ್ಮ ಸಹೋದ್ಯೋಗಿಯಾಗಿ, ಆನಂತರ ಸಾಹಿತಿಯಾಗಿ ಬೆಳೆದು ಬಂದ ಬಗೆಯನ್ನು ಲಕ್ಷ್ಮಣ ಮಲ್ಯ ಅವರು ಆಪ್ತವಾಗಿ ವಿವರಿಸಿದರು. 'ಸ್ವಪ್ನ ಸಾರಸ್ವತ' ಕೃತಿ ಕುರಿತಂತೆ ರೇಣುಕಾ ನಿಡಗುಂದಿ ಅವರು ಸಂಕ್ಷಿಪ್ತವಾಗಿ ಮಾತನಾಡಿದರು. ಅಭಿನಂದನೆ ಸ್ವೀಕರಿಸಿದ ಬಿ.ಜಿ. ಪೈ ಅವರು "ಅವರಿವರ ಕತೆಯನ್ನು ಬರೆಯುವುದರ ಬದಲು ಗುಳೇ ಹೊರಟ ಸಾರಸ್ವತರ ಕತೆಯನ್ನು ಬರೆಯಲು ನಿರ್ಧರಿಸಿದೆ. ಐತಿಹಾಸಿಕ ದಾಖಲೆಗಳನ್ನು ಸಂಶೋಧಿಸುವ ಸಲುವಾಗಿ ಸತತ 15 ವರ್ಷಗಳ ಹುಡುಕಾಟ, ಅಲೆದಾಟದಲ್ಲಿ ಕೇವಲ ಇತಿಹಾಸವಲ್ಲದೇ ಎಲ್ಲವನ್ನೂ ಅಧ್ಯಯನ ಮಾಡಿದೆ. ಸಣ್ಣದಾಗಿ ಪ್ರಾರಂಭಿಸಿದ ಕತೆ ಬೃಹತ್ ಕಾದಂಬರಿಯಾಗಿ ಇಡೀ ಸಾರಸ್ವತ ಜಗತ್ತೇ ತೆರೆಯಿತು. 2000 ಪುಟಗಳ ಟಿಪ್ಪಣಿಯನ್ನು 470 ಪುಟಗಳಲ್ಲಿ ಹಿಡಿದಿಡಲು ಪಟ್ಟ ಶ್ರಮ ವರ್ಣನಾತೀತ" ಎಂದು ತಮ್ಮ ಸುದೀರ್ಘ ಅನುಭವವನ್ನು ಹಂಚಿಕೊಳ್ಳುತ್ತಾ ಆತಂಕದಿಂದ ಪ್ರಕಟಿಸಿದ ಕೃತಿಗೆ ಅಕಾಡೆಮಿ ಪ್ರಶಸ್ತಿ ಸಂದಿರುವುದು ಅತೀವ ಸಂತಸ ತಂದಿದೆ ಹಾಗೂ ಧನ್ಯತೆ ಮೂಡಿಸಿದೆ ಎಂದು ತಮ್ಮ ಸಂತಸವನ್ನು ವ್ಯಕ್ತಪಡಿಸಿದರು.

'ಮಮ್ನೂನ್' ಕಾವ್ಯನಾಮದಿಂದ ಪರಿಚಿತರಾದ ಉರ್ದು ಕವಿ ಖಲೀಲ್ ಉರ್ ರೆಹಮಾನ್ ಅವರ ಕವನ ಸಂಕಲನ "ಆಕಾಫ್ ಕಿ ತರಫ್" ಕರ್ನಾಟಕದ ಮೊಟ್ಟಮೊದಲ ಅಕಾಡೆಮಿ ಪುರಸ್ಕೃತ ಉರ್ದು ಕೃತಿ ಎಂಬ ಹೆಗ್ಗಳಿಕೆ ಪಡೆದಿದೆ. ವೃತ್ತಿಯಲ್ಲಿ ಕರ್ನಾಟಕ ಸರ್ಕಾರದ ಪೋಲಿಸ್ ಇನ್ಸ್‌ಪೆಕ್ಟರ್ ಜನರಲ್ ಆಗಿ ಸೇವೆ ಸಲ್ಲಿಸಿರುವ ಮಮ್ನೂನ್ ಅವರು ಪ್ರವೃತ್ತಿಯಲ್ಲಿ ಕವಿಯಾಗಿ 2004ರಲ್ಲಿ ಕರ್ನಾಟಕ ರಾಜ್ಯೋತ್ಸವ ಪ್ರಶಸ್ತಿ ಪಡೆದ ಮೊದಲ ಉರ್ದು ಕವಿ. "ಮನಸ್ಸಿನ ಅಭಿವ್ಯಕ್ತಿಯನ್ನು ಮುಕ್ತವಾಗಿ ಬಿಂಬಿಸುವ ಏಕೈಕ ಮಾಧ್ಯಮ ಕಾವ್ಯ ರಚನೆ. ಅನುಭವದ ಹಿನ್ನೆಲೆಯಲ್ಲಿ ರಚಿಸಿದ ಕಾವ್ಯ ಕೃಷಿ ಒತ್ತಡದ ಸೇವೆಯ ನಡುವೆಯೂ ತೃಪ್ತಿ ತಂದಿದೆ. ಎಲ್ಲವನ್ನೂ ಭಾಷೆಯಲ್ಲಿ ಹಿಡಿದಿಡಲು ಸಾಧ್ಯವಿಲ್ಲ" ಎಂದು ತಮ್ಮ ಅನುಭವವನ್ನು ವಿವರಿಸುತ್ತಾ ಅಭಿನಂದಿಸಿದ್ದಕ್ಕಾಗಿ ದೆಹಲಿ ಕರ್ನಾಟಕ ಸಂಘಕ್ಕೆ ವಂದನೆ ಸಲ್ಲಿಸಿದರು ಹಾಗೂ ಪುರಸ್ಕೃತ ಕೃತಿಯಿಂದ ಕವನವನ್ನು ವಾಚಿಸಿದರು.

ತಮ್ಮ ಕವನಗಳ ಮೂಲ ವಸ್ತುವಿನ ಮೂಲಕ ಜಾಗತಿಕ ಸಮಸ್ಯೆಗಳನ್ನು ವಿಶಾಲವಾದ ದೃಷ್ಟಿಕೋನದಿಂದ ಪರಾಮರ್ಶಿಸಿದ ಮಂಗಳೂರಿನ ಖ್ಯಾತ ಕೊಂಕಣಿ ಕವಿ ಮೆಲ್ವಿನ್ ರೊಡ್ರಿಗಸ್ ಅವರು ಅಕಾಡೆಮಿ ಪುರಸ್ಕೃತ ಕವನ ಸಂಕಲನ "ಪ್ರಕೃತಿ ಚೊ ಪಾಸ್" ಮೂಲಕ ಕೊಂಕಣಿ ಕವನ ಸಾಹಿತ್ಯವನ್ನು ಉನ್ನತ ಮಟ್ಟಕ್ಕೆ ಕೊಂಡೊಯ್ದಿದ್ದಾರೆ ಎಂದು ಅವರನ್ನು ನಂದಿನಿ ಮಲ್ಯ ಅವರು ಪರಿಚಯಿಸಿದರು. "ತನ್ನದೇ ಆದ ಲಿಪಿಯನ್ನು ಹೊಂದಿರದ ಕೊಂಕಣಿ ಭಾಷೆ ಬೇರೆ ಬೇರೆ ಪ್ರದೇಶಗಳನ್ನು ತಲುಪದೇ ಕೇವಲ ಸೀಮಿತ ವ್ಯಾಪ್ತಿಯುಳ್ಳ ಸಾಹಿತ್ಯವಾದರೂ ಶ್ರೀಮಂತವಾಗಿದೆ. ನನ್ನ ಬಾಲ್ಯದ ಘಟನೆಗಳು ನನ್ನ ಸಾಹಿತ್ಯದ ಮೇಲೆ ಗಾಢ ಪ್ರಭಾವವನ್ನು ಬೀರಿದೆ. ಭಾಷೆ ಬೇರೆ ಬೇರೆಯಾದರೂ ಸಾಹಿತ್ಯಕ್ಕೆ ಎಲ್ಲರನ್ನೂ ಒಗ್ಗೂಡಿಸುವ ಶಕ್ತಿ ಇದೆ" ಎಂದು ಹೇಳಿದ ರೊಡ್ರಿಗಸ್ ಅವರು ದುಬೈನಲ್ಲಿ ರಚಿಸಿದ ಕವನವನ್ನು ವಾಚಿಸಿದರು.

ಕೇಂದ್ರ ಸಾಹಿತ್ಯ ಅಕಾಡೆಮಿ ಕನ್ನಡ ಸಮಿತಿ ಸಂಚಾಲಕ ಹಾಗೂ ಖ್ಯಾತ ಸಾಹಿತಿ ಸಿದ್ದಲಿಂಗ ಪಟ್ಟಣ ಶೆಟ್ಟಿ ಅವರು ಈ ಬಾರಿ ಮೂರು ಅಕಾಡೆಮಿ ಪುರಸ್ಕಾರ ಸಂದಿರುವುದು ಕರ್ನಾಟಕಕ್ಕೆ ಸಂದ ಗೌರವ ಎಂದು ಹೇಳಿದರು. ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆ ಅವರು ಸಾಹಿತಿಗಳ ತ್ರಿವೇಣಿ ಸಂಗಮ ದೆಹಲಿ ಕನ್ನಡಿಗರಿಗೆ ಸಂತಸ ನೀಡಿದೆ ಎನ್ನುತ್ತಾ ಪುರಸ್ಕೃತರನ್ನು ಅಭಿನಂದಿಸಿದರು. ಸಂಘದ ಉಪಾಧ್ಯಕ್ಷೆ ಉಷಾ ಭರತಾದ್ರಿ ಕಾರ್ಯಕ್ರಮ ನಿರೂಪಿಸಿದರು.

● ಉಷಾ ಭರತಾದ್ರಿ

# 'ಔಟ್‌ಲುಕ್'ನ ಪ್ರಧಾನ ಸಂಪಾದಕರಾಗಿ ಕೃಷ್ಣ ಪ್ರಸಾದ್ ನೇಮಕ



ದೇಶದ ಪ್ರತಿಷ್ಠಿತ ಇಂಗ್ಲಿಷ್ ವಾರಪತ್ರಿಕೆ ಔಟ್‌ಲುಕ್‌ನ ಪ್ರಧಾನ ಸಂಪಾದಕರಾಗಿ (Editor in Chief) ಅಪ್ಪಟ ಕನ್ನಡಿಗ ನಮ್ಮ ನಿಮ್ಮೆಲ್ಲರ ನಲ್ಮೆಯ ಶ್ರೀ ಕೃಷ್ಣ ಪ್ರಸಾದ್ ನೇಮಕಗೊಂಡಿರುವುದು ಇಡೀ ಕನ್ನಡ ಸಮುದಾಯಕ್ಕೆ ಹೆಮ್ಮೆಯ ಸಂಗತಿ. ಈ ಮಹತ್ವದ ಸ್ಥಾನವನ್ನು ಪ್ರಸಿದ್ಧ ಪತ್ರಕರ್ತ ಶ್ರೀ ವಿನೋದ್ ಮೆಹ್ತಾ ಇದುವರೆವಿಗೂ ಅಲಂಕರಿಸಿದ್ದರು. ಮೈಸೂರಿನವರಾದ ಕೃಷ್ಣ ಪ್ರಸಾದ್ ಇಂಗ್ಲಿಷ್ ಸಾಹಿತ್ಯದಲ್ಲಿ ಸ್ನಾತಕೋತ್ತರ ಪದವೀಧರರು. ಟೈಮ್ಸ್ ಆಫ್ ಇಂಡಿಯಾ ದೈನಿಕದಲ್ಲಿ ಸೇವೆ ಸಲ್ಲಿಸಿದ ನಂತರ ಔಟ್‌ಲುಕ್ ಪತ್ರಿಕೆಯ ಸಂಸ್ಥಾಪಕ ಸದಸ್ಯರಾಗಿ 1995ರಲ್ಲಿಯೇ ಸೇರಿದ ಕೃಷ್ಣ ಪ್ರಸಾದ್ ಅವರು 1998ರಲ್ಲಿ ಸಂಪಾದಕರಾಗಿ ಭಡ್ತಿ ಪಡೆದರು. ಅನೇಕ ಸ್ಫೋಟಕ ವರದಿಗಳಿಂದ ಪಟ್ಟಭದ್ರ ಹಿತಾಸಕ್ತಿಗಳ ಜಂಘಾಬಲ ಅಡಗುವಂತೆ ಮಾಡಿದ ಕೀರ್ತಿ ಕೃಷ್ಣ ಪ್ರಸಾದ್ ಅವರಿಗೆ ಸಲ್ಲುತ್ತದೆ. ಅವರ ನೇರ, ನಿಷ್ಠುರ, ವಸ್ತುನಿಷ್ಠ ಹಾಗೂ ಸಂಶೋಧನಾತ್ಮಕ ಬರಹಗಳು ಅನೇಕ ಸತ್ಯಗಳನ್ನು ಬಯಲಿಗೆಳೆದವು. ಶ್ರೀ ಅನಿರುದ್ಧ್ ಬೆಹಲ್ ಅವರೊಡಗೂಡಿ ಕೃಷ್ಣ ಪ್ರಸಾದ್ ಪ್ರಕಟಿಸಿದ ಮ್ಯಾಚ್ ಫಿಕ್ಸಿಂಗ್ ಹಗರಣದ ಲೇಖನ (1999) ನಮ್ಮ ದೇಶದ ಕ್ರಿಕೆಟಿಗರನ್ನಷ್ಟೇ ಅಲ್ಲ ಇಡೀ ವಿಶ್ವದ ಕ್ರಿಕೆಟಿಗರು ಎಚ್ಚೆತ್ತುಕೊಳ್ಳುವಂತೆ, ಆಟದ ಘನತೆ ಹಾಗೂ ಪಾವಿತ್ರತೆ ಕಾಪಾಡಿಕೊಳ್ಳುವಂತೆ ಪ್ರೇರೇಪಿಸಿತು. ತಮ್ಮ ಅಪಾರ ಅನುಭವ ಹಾಗೂ ಜ್ಞಾನಗಳನ್ನು ಸದಾ ಕಿರಿಯ ಪತ್ರಕರ್ತರೊಡನೆ ಹಂಚಿಕೊಳ್ಳಲು ಅವರಿಗೆ ಅಪರಿಮಿತ ಆಸಕ್ತಿ. ಭಾರತ ಹಾಗೂ ಅಮೇರಿಕಗಳ ವಿಶ್ವವಿದ್ಯಾನಿಲಯಗಳ ಪತ್ರಿಕೋದ್ಯಮದ ವಿದ್ಯಾರ್ಥಿಗಳಿಗೆ ಬೋಧನೆ ಕೂಡಾ ನೀಡಿದ್ದಾರೆ. ಔಟ್‌ಲುಕ್‌ನ ಗುರುತರ ಜವಾಬ್ದಾರಿಯ ನಡುವೆ ದೇಶದ ಸುಪ್ರಸಿದ್ಧ 'ಚುರುಮುರಿ' ವೆಬ್‌ಸೈಟನ್ನು ಆಸ್ಥೆಯಿಂದ ನಿರ್ವಹಿಸುತ್ತಿದ್ದಾರೆ. ಅಲ್ಲದೆ ಮಾಧ್ಯಮ ಸಂಬಂಧಿತ 'sans serif' ಸೈಟ್ ಕೂಡಾ ಅವರ ನೇತೃತ್ವದ್ದು.

ಸ್ವತಃ ಲೀಗ್ ಕ್ರಿಕೆಟ್ ಪಂದ್ಯಗಳಲ್ಲಿ ಆಲ್‌ರೌಂಡರ್ ಆಗಿ ಕ್ರಿಕೆಟ್ ಆಡಿದ ಶ್ರೀಮಂತ ಅನುಭವವುಳ್ಳ ಕೃಷ್ಣ ಪ್ರಸಾದ್ ಈಗಲೂ ಬಿಡುವಿನ ವೇಳೆಯಲ್ಲಿ ಕ್ರಿಕೆಟ್ ಆಡುವ ಉತ್ಸಾಹಿಗಳು.

ತಮ್ಮ ಹೊಸ ಹೊಣೆಯಲ್ಲಿ ಪತ್ರಿಕೆಯ ಮೂಲಕ ಸತ್ಯ ಸಾಕ್ಷಾತ್ಕಾರವನ್ನು ಅವರು ಮತ್ತಷ್ಟು ಸಮರ್ಥವಾಗಿ ಮಾಡಲಿ, ಎಲ್ಲ ಯಶಸ್ಸೂ ಅವರಿಗೆ ಲಭಿಸಲಿ ಎಂಬುದು ನಮ್ಮ ಹೃತ್ಪೂರ್ವಕ ಹಾರೈಕೆ.

● ಉಷಾ ಭರತಾದ್ರಿ

**ಪ್ರಧಾನ ಸಂಪಾದಕರು**
ಉಷಾ ಭರತಾದ್ರಿ

**ಸಂಪಾದಕ ಮಂಡಳಿ**
ಚೆನ್ನು ಎಸ್. ಮಠದ
ರೇಣುಕಾ ಎಸ್. ನಿಡಗುಂದಿ
ಸಂತೋಷ್ ಕುಮಾರ್ ಉಪಾಧ್ಯಾಯ
ಚಂದ್ರಶೇಖರ ಎನ್.ಪಿ.

ದೆಹಲಿ ಕರ್ನಾಟಕ ಸಂಘದ
ಕಾರ್ಯಕಾರಿ ಸಮಿತಿ

**ಅಧ್ಯಕ್ಷರು**
ಡಾ. ವೆಂಕಟಾಚಲ ಜಿ. ಹೆಗಡೆ

**ಉಪಾಧ್ಯಕ್ಷರು**
ಉಷಾ ಭರತಾದ್ರಿ
ಬಿ.ಕೆ. ಬಸವರಾಜು

**ಪ್ರಧಾನ ಕಾರ್ಯದರ್ಶಿ**
ಸಿ.ಎಂ. ನಾಗರಾಜ

**ಖಜಾಂಚಿ**
ಕೆ.ಆರ್. ರಾಮಮೂರ್ತಿ

**ಜಂಟಿ ಕಾರ್ಯದರ್ಶಿಗಳು**
ಎನ್.ಆರ್. ಶ್ರೀನಾಥ್
ರೇಣುಕಾ ಎಸ್. ನಿಡಗುಂದಿ

**ಸಮಿತಿ ಸದಸ್ಯರು**
ಆಂಜನಿ ಗೌಡ
ಎಸ್.ಸಿ. ಹೇಮಲತ
ಟಿ.ಎಂ. ಮೈಲಾರಪ್ಪ
ಪಿ.ಸಿ. ಶ್ರೀನಿವಾಸ
ಸಿ.ಆರ್. ಶ್ರೀನಿವಾಸ
ಜಿ.ಬಿ. ಹೆಗಡೆ
ಆನಂದ ಈಶ್ವರಪ್ಪ ಮುರಗೋಡ
ಬಿ. ನಾರಾಯಣ
ಆರ್. ರೇಣುಕುಮಾರ್
ಎಸ್. ಕೃಷ್ಣ ಭಟ್
ಶಶಿಕಾಂತ್ ಪಾಟೀಲ್

**ಮುಖಪುಟ ಚಿತ್ರ**
ಬಸ್ತಿ ದಿನೇಶ್ ಶೆಣೈ



**DELHI KARNATAKA SANGHA**
Rao Tularam Marg, Sector-12, R K Puram,
New Delhi-110022.
Phone: 011-26109615. 011-65643615
email:dksangha@gmail.com
website : www.delhikarnatakasangha.com



ದೆಹಲಿ ಕರ್ನಾಟಕ ಸಂಘದ ಅಭಿಮತ

ಸಂಪುಟ 22 ಸಂಚಿಕೆ 6
ಮಾರ್ಚ್ 2012, ಬೆಲೆ ರೂ. 1


# ಮನದ ಮಾತು

ನಾನು ಅನೇಕ ಸುಸ್ಥಿತಿಯಲ್ಲಿರುವ ಮಹಿಳೆಯರನ್ನು ಪ್ರಶ್ನಿಸಿದ್ದೇನೆ–ನಿಮ್ಮದು ಅನ್ನುವುದು ಏನಿದೆ? ಬಹುತೇಕರು ಉತ್ತರಕ್ಕೆ ಪರದಾಡಿದ್ದಾರೆ. ಕೆಲವರು ಸೀರೆ, ಒಡವೆಗಳತ್ತ ಬೊಟ್ಟು ಮಾಡಿದರಷ್ಟೆ. ನಿಜಾಂಶ ಎಂದರೆ ಅವರ ಹೆಸರಿನಲ್ಲಿ ಬ್ಯಾಂಕ್ ಡಿಪಾಸಿಟ್ ಇರುವುದಿಲ್ಲ, ಮನೆ, ಜಮೀನು ಎಂಥದ್ದೂ ಇಲ್ಲ, ಆಸ್ತಿಪಾಸ್ತಿಯ ನೈಜ ಒಡೆಯರು ಅವರ ಗಂಡಂದಿರು ಅಥವ ಅವರ ಗಂಡು ಮಕ್ಕಳು. ದೆಹಲಿಯ Economic Research Foundation ನಡೆಸಿರುವ ಸಂಶೋಧನೆಯ ಪ್ರಕಾರ ಅನೇಕ ಸ್ತ್ರೀಯರು ಗಂಡನಿಂದ ಪ್ರತ್ಯೇಕವಾಗಿ ಡೈವೋರ್ಸ್ ಪಡೆದಾಗ ಅಕ್ಷರಶಃ ನಿರ್ಗತಿಕರಾಗಿ ನಿಲ್ಲುತ್ತಾರೆ. ಏಕೆಂದರೆ ಕಾನೂನಿನ ಪ್ರಕಾರ ಅವರಿಗೆ ದಕ್ಕುವುದು ಜೀವನಾಂಶವೇ ಹೊರತು ಗಂಡನ ಹೆಸರಿನಲ್ಲಿರುವ ಆಸ್ತಿಯಲ್ಲ. ಬೆಂಗಳೂರಿನ ಇಂಡಿಯನ್ ಇನ್ಸಿಟ್ಯೂಟ್ ಆಫ್ ಮ್ಯಾನೇಜ್‌ಮೆಂಟ್‌ನ ವರದಿಯ ಪ್ರಕಾರ ಆಸ್ತಿಯ ಮಾಲೀಕತ್ವ ಹೊಂದಿರುವ ಮಹಿಳೆಯರು ತೀರಾ ವಿರಳ, ಬೆರಳೆಣಿಕೆ ಅನ್ನಿಸುವಷ್ಟು. ಹನ್ನೆರಡನೇ ಪಂಚವಾರ್ಷಿಕ ಯೋಜನೆಗೆ ಸಲ್ಲಿಸಲ್ಪಟ್ಟ ಮಾಹಿತಿಯಂತೆ ಬ್ಯಾಂಕ್‌ಗಳ ಒಟ್ಟು ಡಿಪಾಸಿಟ್‌ಗಳ ಕೇವಲ ಶೇಕಡ 20.8ರಷ್ಟು ಮಾತ್ರ ಮಹಿಳೆಯರಿಗೆ ಸೇರಿದ್ದು. ಹೀಗಾಗಿ ಭಾರತದ ವಿವಾಹಿತ ಮಹಿಳೆ ಗಂಡನಿಂದ ಅಥವ ಮಕ್ಕಳಿಂದ ತಿರಸ್ಕೃತಳಾದಳೆಂದರೆ ಬೀದಿಪಾಲು. ಕಾನೂನು, ಸರ್ಕಾರ ಹಾಗೂ ನಿಯಮಾವಳಿಗಳ ಕರ್ತರು ಗೃಹಿಣಿಯ ಗೃಹಕೃತ್ಯವನ್ನು 'ಉದ್ಯೋಗ' ಎಂದು ಪರಿಗಣಿಸುವುದಿಲ್ಲ ಎಂಬುದು ದುರಂತದ ಸಂಗತಿ. ಆಕಸ್ಮಾತ್ ಮಹಿಳೆಯೂ ದುಡಿಯುತ್ತಿದ್ದರೆ ಅವಳ ಗಳಿಕೆ ದಿನನಿತ್ಯದ ಖರ್ಚಿಗೆ, ಗಂಡನ ಗಳಿಕೆ ಚಿರಂತನ ಆಸ್ತಿಪಾಸ್ತಿಗೆ ಎಂಬ ಅಲಿಖಿತ ಶಾಸನವೂ ಇದೆ! 2005ರ Hindu Succession Actನ ತಿದ್ದುಪಡಿಯಂತೆ ಹೆಣ್ಣುಮಕ್ಕಳಿಗೂ ತಂದೆಯ ಆಸ್ತಿಯಲ್ಲಿ ಸಮಪಾಲು ಇದೆ. ಆದರೂ ಲಭ್ಯಮಾಹಿತಿಯಂತೆ ಹೆಣ್ಣುಮಕ್ಕಳು ಸೋದರರ ಸಲುವಾಗಿ ತಮ್ಮ ಕಾನೂನು ಬದ್ಧ ಹಕ್ಕನ್ನು ಒತ್ತಾಯಪೂರ್ವಕವಾಗಿ ಕೈಚೆಲ್ಲಿ ಕೂರುವಂತಹ ಸಾಮಾಜಿಕ ವ್ಯವಸ್ಥೆ ಇನ್ನೂ ಮುಂದುವರಿಯುತ್ತಿದೆ. 'ಇದಾವ ನ್ಯಾಯ, ಏನನ್ಯಾಯ' ಎಂದು ನೀವು ನಾನು ಕೇಳುವಂತಹ ಕಾನೂನು ಇದೆ! ಒಬ್ಬ ಮಹಿಳೆ ಗಳಿಸಿದ ಆಸ್ತಿ ಅವಳ ಮಕ್ಕಳಿಲ್ಲದಿದ್ದರೆ, ಗಂಡನೂ ಇಲ್ಲದಿದ್ದರೆ, ಸೇರುವುದು ಅವಳ ಅತ್ತೆಮಾವಂದಿರಿಗೆ! ಅವಳ ತಾಯಿ ತಂದೆಯರಿಗೆ ಅಲ್ಲಿ ಅಧಿಕಾರವೇ ಇಲ್ಲ. ಇತ್ತೀಚಿನ ಸುಪ್ರೀಂಕೋರ್ಟಿನ ಆದೇಶದಂತೆ ಈ ಕಾನೂನಿಗೆ 'ಮಾನವೀಯ' ದೃಷ್ಟಿಯಿಂದ ಸರ್ಜರಿ ಮಾಡಬೇಕಿದೆ. ಮಹಿಳೆಯ ಹಿತದೃಷ್ಟಿಯಿಂದ ಈಗಿರುವ ಪುರುಷರ ಕಾನೂನುಗಳಿಗೆ ತಿದ್ದುಪಡಿಗಳ ಅವಶ್ಯಕತೆ ಇದೆ. ಮಹಿಳೆ ಪುರುಷನಿಗೆ ಸಮಾನ ಎಂಬ ಭಾವನೆ ಮೂಡಬೇಕಿದೆ. ಆದರೆ ಕಾನೂನು ತಿದ್ದುಪಡಿಗಳೂ ಮಹಿಳೆಯನ್ನು ಕಾಪಾಡಲಾರವು ಎಂಬ ಆತಂಕ ಇದೆ. ನಿರಂತರ ಲೈಂಗಿಕ ದೌರ್ಜನ್ಯಕ್ಕೀಡಾಗುವ ಮಹಿಳೆ ಒಟ್ಟು ಸಮಾಜ ಆರೋಗ್ಯಕರ ದೃಷ್ಟಿಕೋನ ಬೆಳೆಸಿಕೊಂಡು ಪ್ರೀತಿಯ ನೆಲೆಯಲ್ಲಿ ಮೌಲ್ಯಗಳನ್ನು ರೂಪಿಸಿಕೊಂಡಾಗ ಮಾತ್ರ ತನ್ನೆಲ್ಲ ನೋವಿನಿಂದ ಮುಕ್ತಳಾಗಬಲ್ಲಳು. ಈ ಸುವರ್ಣ ದಿನಗಳು ಶೀಘ್ರದಲ್ಲಿ ಬರಲಿ ಎಂಬುದು ನಮ್ಮ ಹಾರೈಕೆ.

ಇತ್ತೀಚೆಗೆ ತಾನೆ ದಿಲ್ಲಿಗೆ ಹೊಂದಿಕೊಂಡಂತಿರುವ ಉತ್ತರಪ್ರದೇಶ, ಹತ್ತಿರದ ಉತ್ತರಕಾಂಡ್ ಹಾಗೂ ಗೋವಾ, ಮಣಿಪುರ, ಪಂಜಾಬ್‌ಗಳಲ್ಲಿ ವಿಧಾನಸಭೆಯ ಚುನಾವಣೆಗಳು ನಡೆದವು. ಇಲ್ಲಿ ಯಾರು ಅಧಿಕಾರಕ್ಕೆ ಬಂದರು ಅಥವ ಯಾರು ಬರಲಿಲ್ಲ ಎಂಬುದು ಅಪ್ರಸ್ತುತ. ಪ್ರಜಾಪ್ರಭುತ್ವ ವ್ಯವಸ್ಥೆಯಲ್ಲಿ ಚುನಾವಣೆ ಸರ್ಕಾರದ ಆಯ್ಕೆಯಲ್ಲಿ ಅನಿವಾರ್ಯ. ಇಲ್ಲಿ ಸಮಸ್ಯೆ ಅದಲ್ಲ. ಇದು ಅಲ್ಲಿ ಹರಿದಿರುವ ಕಪ್ಪು ಹಣದ ಹೊಳೆ. ಅಧಿಕೃತವಾಗಿ ಚುನಾವಣಾ ಆಯೋಗ ವಶಪಡಿಸಿಕೊಂಡಿರುವ ವಾರಸುದಾರರಿಲ್ಲದ ಹಣ 120ಕೋಟಿ ರೂಗಳು, ಅಷ್ಟೇ ಅಲ್ಲ, 20,23,000 ಲೀಟರ್ ಮದ್ಯ ಕೂಡ ವಶವಾಗಿದೆ. ನಾವೆಲ್ಲರೂ ಬೆಚ್ಚಿ ಬೀಳಿಸುವಂತಹ ಸಂಗತಿಯೆಂದರೆ ಸುಮಾರು ನಾಲ್ಕು ಸಾವಿರ ಪಿಸ್ತೂಲುಗಳನ್ನು ಜಪ್ತಿ ಮಾಡಲಾಗಿದೆ. ಚುನಾವಣೆಗಳನ್ನು ಹಣ, ಹೆಂಡ, ಪಿಸ್ತೂಲುಗಳಿಲ್ಲದೆ ನಡೆಸಲು ಸಾಧ್ಯವೇ ಇಲ್ಲವೆ? ಈ ಬಗ್ಗೆ ಚರ್ಚೆ ನಡೆಯಬೇಕು, ಪರಿಹಾರ ಮಾರ್ಗ ಕಂಡುಕೊಳ್ಳಲೇಬೇಕು. ಇಲ್ಲದಿದ್ದರೆ ನಮ್ಮ ನಿಮ್ಮೆಲ್ಲರ ಭವಿಷ್ಯ ಕರಾಳವಾಗುವುದು ಖಚಿತ.

ನಮ್ಮ ಬೆಂಗಳೂರು ಕೋರ್ಟ್ ಆವರಣದಲ್ಲಿ ಕೆಲವು ಲಾಯರ್‌ಗಳು ಪತ್ರಕರ್ತರ ಮೇಲೆ ನಡೆಸಿದ ಹಲ್ಲೆ ನಿಜಕ್ಕೂ ದುರದೃಷ್ಟಕರ. ಲಾಯರ್‌ಗಳು ಸಮಾಜದ ಅನ್ಯಾಯಗಳಿಗೆ ಕೊನೆ ಹೇಳಬಲ್ಲಂತಹ ಸಮರ್ಥರು. ನೋವಿನಿಂದ ಬಳಲುವವರ ಕಣ್ಣ ಹನಿ ಒರೆಸಬಲ್ಲ ಶಕ್ತಿ ಉಳ್ಳವರು. ಮಾಧ್ಯಮದವರು ಸಮಾಜದ ಹುಳುಕುಗಳನ್ನು ಸಾರ್ವಜನಿಕಗೊಳಿಸಬಲ್ಲ ತನ್ಮೂಲಕ ಎಲ್ಲರ ಕಣ್ಣನ್ನೂ ತೆರೆಸಬಲ್ಲಂತಹ ಶಕ್ತರು. ಈ ಎರಡು ಸಮುದಾಯಗಳು ಜನರ ಅದರಲ್ಲೂ ಸಂತ್ರಸ್ತರ ಎರಡು ಕಣ್ಣುಗಳಿದ್ದಂತೆ. ಇವರಿಬ್ಬರ ಸಂಘರ್ಷ ಸಮಾಜದ ಹಿತದೃಷ್ಟಿಯಿಂದ ಖಂಡಿತ ಒಳ್ಳೆಯದಲ್ಲ. ಏಕೆಂದರೆ ಇದರ ದುರ್ಲಾಭವನ್ನು– ಈ ಎರಡು ಬಲಿಷ್ಠ ಸಮುದಾಯಗಳಿಗೆ ಇತ್ತೀಚಿನವರೆವಿಗೂ ಹೆದರಿದ್ದ ದುಷ್ಟಶಕ್ತಿಗಳು ಪಡೆಯುವ ಸಾಧ್ಯತೆ ಇದೆ. ಅತ್ಯಂತ ಕ್ಷಿಪ್ರ ಅವಧಿಯಲ್ಲಿ ನ್ಯಾಯವಾದಿಗಳು ಹಾಗೂ ಮಾಧ್ಯಮ ಬಂಧುಗಳ ವಿರಸ ತಣ್ಣಗಾಗಲಿ ಎಂಬುದು ನಮ್ಮ ಸದಾಶಯ.

**ಮಹಿಳಾ ದಿನಾಚರಣೆ, ಹೋಳಿ ಹಬ್ಬದ ಶುಭಾಶಯಗಳು. 'ನಂದನ' ನಾಮ ಸಂವತ್ಸರ ಎಲ್ಲರ ಬಾಳನ್ನು ನಂದನ ವನವಾಗಿಸಲಿ ಎಂದು ಹಾರೈಸುತ್ತೇವೆ.**

● ಉಷಾ ಭರತಾದ್ರಿ

# ಪುಸ್ತಕ ಮೇಳದಲ್ಲಿ ಶೇಕ್ ಸಾಹೇಬರು

ಈ ಬಾರಿಯ ವಿಶ್ವ ಪುಸ್ತಕ ಮೇಳದಲ್ಲಿ ಕನ್ನಡದ ಮೂರು ಮಳಿಗೆಗಳು ಬಂದಿದ್ದವು. ಮನೋಹರ ಗ್ರಂಥಮಾಲೆಯ ಶ್ರೀ ರಮಾಕಾಂತ ಜೋಶಿಯವರು ದೂರವಾಣಿಯಿಂದ ಮೊದಲೆ ಬರುವುದಾಗಿ ತಿಳಿಸಿದ್ದರು. ನಂತರದಲ್ಲಿ ನವಕರ್ನಾಟಕದ ಶ್ರೀ ರಾಮಚಂದ್ರರವರು ಪುಸ್ತಕ ಮೇಳಕ್ಕೆ ಬಂದ ಸುದ್ದಿಯನ್ನು ತಿಳಿಸಿದ್ದರು. ಇವರಲ್ಲದೆ ಕರ್ನಾಟಕದ ಪುಸ್ತಕ ಪ್ರಕಾಶನ ಸಂಘದ ಪರವಾಗಿಯೂ ಪುಸ್ತಕದ ಮಳಿಗೆಯೊಂದಿತ್ತು. ದೆಹಲಿಯ ಕನ್ನಡಿಗರೆಲ್ಲರಿಗೂ ನಾವು ದೆಹಲಿ ಕರ್ನಾಟಕ ಸಂಘದ ಪರವಾಗಿ ಈ ಕನ್ನಡ ಪುಸ್ತಕಗಳ ಮಳಿಗೆಗಳ ಕುರಿತಾಗಿ ವಿವರಗಳನ್ನು ಕಳುಹಿಸಿದ್ದೆವು. ವಿಶ್ವ ಪುಸ್ತಕ ಮೇಳಕ್ಕೆ ಹೋಗುವ ಕನ್ನಡಿಗರು ಈ ಕನ್ನಡದ ಮಳಿಗೆಗಳನ್ನು ಒಲೈಸಲಿ ಎಂಬುದೇ ನಮ್ಮ ಆಶಯವಾಗಿತ್ತು.

ದೆಹಲಿ ಕರ್ನಾಟಕ ಸಂಘದ ಪರವಾಗಿ ಪುಸ್ತಕಗಳನ್ನು ಖರೀದಿಸಬೇಕೆಂಬ ಆಶಯ ನನ್ನದಾಗಿತ್ತು. ಹಲವಾರು ವರುಷಗಳಿಂದ ಪ್ರತಿಯೊಂದು ವಿಶ್ವ ಪುಸ್ತಕ ಮೇಳದಲ್ಲೂ ನಾಲ್ಕಾರು ಕನ್ನಡ ಪುಸ್ತಕಗಳನ್ನು ಖರೀದಿಸುವ ಪರಿಪಾಠ ನನ್ನದಾಗಿತ್ತು. ಈ ಬಾರಿಯೂ ಸಹ ಅದೇ ಆಶಯದೊಂದಿಗೆ ನಾನು ನಮ್ಮ ದೆಹಲಿ ಕರ್ನಾಟಕ ಸಂಘದ ಬಾಲಚಂದ್ರರವರೊಂದಿಗೆ ಪುಸ್ತಕ ಮೇಳಕ್ಕೆ ಹೋಗುವುದೆಂದು ಯೋಜನೆ ಹಾಕಿಕೊಂಡಿದ್ದೆವು. ಸಂಘದ ಶೇಖರ ಹಾಗೂ ದೇವಯ್ಯನವರೂ ಸಹ ಈ ಯೋಜನೆಯಲ್ಲಿ ಸಹಕಾರಿಯಾಗಿದ್ದರು. ಕೊನೆಯಲ್ಲಿ ಬಾಲಚಂದ್ರರವರು ನೇರವಾಗಿ ವಿಶ್ವ ಕನ್ನಡ ಸಮ್ಮೇಳನದ 10ನೆಯ ಮಳಿಗೆಯಲ್ಲಿರುವ 27, 28 ಹಾಗೂ 29ರಲ್ಲಿದ್ದ ಕನ್ನಡದ ಪುಸ್ತಕಗಳ ಸಾಲನ್ನು ತಲುಪಿದ್ದರು. ನಾನು ನನ್ನ ದಿನದ ನಾಲ್ಕಾರು ಕೆಲಸಗಳನ್ನು ಮುಗಿಸಿಕೊಂಡು ಸುಮಾರು ಮಧ್ಯಾಹ್ನ ಒಂದು ಗಂಟೆಯ ಹೊತ್ತಿಗೆ ಕನ್ನಡ ಪುಸ್ತಕಗಳ ಮಳಿಗೆಯನ್ನು ತಲುಪಿದ್ದೆ. ರಮಾಕಾಂತ ಜೋಶಿಯವರು, ರಾಮಚಂದ್ರರವರು ಹಾಗೂ ಪುಟ್ಟ ಗದ್ದದ ತುಂಬ ಗಡ್ಡ ಬಿಟ್ಟುಕೊಂಡು, ತಲೆಯ ಮೇಲೆ ಧಾರವಾಡದ ಬದಿಯ ಕಪ್ಪು ಟೋಪಿಯನ್ನು ಇಟ್ಟುಕೊಂಡ ಸಾಹೇಬರನ್ನು ಕಂಡದ್ದಾಯಿತು.

ದೆಹಲಿ ಕರ್ನಾಟಕ ಸಂಘದ ಪರವಾಗಿ ಬಂದ ಈ ಎಲ್ಲ ಅತಿಥಿಗಳಿಗೆ ಪುಷ್ಪಗುಚ್ಛವನ್ನು ನೀಡಿದ್ದಾಯಿತು. ಜೊತೆಗೆ ಹತ್ತಾರು ಚಿತ್ರಗಳನ್ನು ತೆಗೆದುಕೊಂಡಿದ್ದಾಯಿತು. ಈ ತನ್ಮಧ್ಯೆ ಪುಸ್ತಕಗಳನ್ನು ಖರೀದಿಸುವ ಕೆಲಸವನ್ನು ನಾವು ಪ್ರಾರಂಭಿಸಿದೆವು. ಒಂದೆರಡು ದಿನಗಳ ಮೊದಲು ಜಯಪ್ರಕಾಶ ಬೆಂಗೇರಿಯವರು ಬಂದು ಕೆಲ ಉತ್ತಮ ಪುಸ್ತಕಗಳನ್ನು ಆರಿಸಿಟ್ಟು ಹೋಗಿದ್ದು ನಮಗೆ ಅನುಕೂಲವೇ ಆಯಿತು. ಪುಸ್ತಕವನ್ನು ಆರಿಸಿಟ್ಟ ಬೆಂಗೇರಿಯವರು ಫೋನು ಕೂಡ ಮಾಡಿ ಕನ್ನಡ ಪುಸ್ತಕಗಳನ್ನು ಆರಿಸಿಟ್ಟ ವಿಚಾರವನ್ನು ತಿಳಿಸಿದ್ದರು. ನಾನು ಈ ಪುಸ್ತಕಗಳನ್ನು ಮತ್ತೊಮ್ಮೆ ಪರಿಶೀಲಿಸುತ್ತ, ನಮ್ಮ ಗ್ರಂಥ ಭಂಡಾರ ಸಮಿತಿಯ ಅಧ್ಯಕ್ಷರಾದ ಸೋಮನಾಥ ಬಿರಾದಾರರವರಿಗೆ ಫೋನು ಮಾಡಿದೆ. ಅವರು ಪುಸ್ತಕ ಮೇಳದಲ್ಲೇ ಮತ್ತೆಲ್ಲೊ ಪುಸ್ತಕಗಳನ್ನು ಆರಿಸುವುದರಲ್ಲಿ ನಿರತರಾಗಿದ್ದರು. ನಮ್ಮ ಈ ದೂರವಾಣಿ ಕರೆಗೆ ಓಗೊಟ್ಟು ಅವರೂ ಸಹ ಕನ್ನಡದ ಮಳಿಗೆಗಳ ಬಳಿ ಬಂದು ಈ ಪುಸ್ತಕಗಳನ್ನು ಆರಿಸುವುದರಲ್ಲಿ ಸಲಹೆ ನೀಡಿದರು.

ಅಂತೂ ಆರೇಳು ಸಾವಿರ ರೂಪಾಯಿಗಳಷ್ಟು ಮೊತ್ತದ ಕನ್ನಡ ಪುಸ್ತಕಗಳನ್ನು ಸಂಘಕ್ಕೆ ಖರೀದಿಸಿದ್ದಾಯಿತು. ಅವುಗಳನ್ನು ಅಂದೇ ತೆಗೆದುಕೊಂಡು ಸಂಘಕ್ಕೆ ಹೊರಡಲು ನಾವು ಅಣಿಯಾದೆವು. ಬಾಲಚಂದ್ರರವರು ಹಾಗೂ ನಾನು ಈ ಪುಸ್ತಕಗಳನ್ನು ಹೊರಲು ತಯಾರಾದರೆ, ರಮಾಕಾಂತ ಜೋಶಿಯವರು 'ತಮ್ಮ ಈ ಸಹಾಯಕ ಬರುತ್ತಾನೆ' ಎಂದು ಒತ್ತಾಸೆ ಮಾಡಿದರು. ನಾವು ಆಯಿತು ಎಂದುಕೊಂಡು ಹೊರಟೆವು. ಈ ಚೂಪುಮುಖದ, ಕರಿಟೊಪ್ಪಿಯ ಹಿರಿಯ ಸಾಹೇಬರು ಎರಡೂ ಕೈಗಳಲ್ಲೂ ಪುಸ್ತಕದ ಚೀಲಗಳನ್ನು ಹಿಡಿದುಕೊಂಡು ಎಷ್ಟೋ ವರುಷಗಳ ಸ್ನೇಹಿತರಂತೆ ನಮ್ಮೊಂದಿಗೆ ಹೊರಟು ಬಿಟ್ಟರು.

ನಾನು, ಬಾಲಚಂದ್ರ ಹಾಗೂ ಸಾಹೇಬರು ಈ ಪ್ರಗತಿ ಮೈದಾನದ 10ನೆಯ ಮಳಿಗೆಯಿಂದ ಹೊರಟವರು ಹೊರಗಿನ ಮುಖ್ಯದ್ವಾರವನ್ನು ತಲುಪಲು ಸುಮಾರು ಹತ್ತಾರು ನಿಮಿಷಗಳೇ ಹಿಡಿದಿರಬೇಕು. ನಮ್ಮೊಂದಿಗೆ ನಿಧಾನವಾಗಿ ಹೆಜ್ಜೆಯಿಡುತ್ತ, ಸಂತಸದಿಂದ ಬರುತ್ತಿದ್ದ ಸಾಹೇಬರನ್ನು ತಾವು ಯಾರು–ಎತ್ತ? ಎಂದು ಕೇಳುತ್ತ ಸಾಗಿದ್ದೆವು. ಈ ಸಾಹೇಬರು ಒಂದೊಂದಾಗಿ ಬುತ್ತಿಯನ್ನು ಬಿಚ್ಚಿಡುವಂತೆ ತಮ್ಮ ಬದುಕಿನ ಸಂತಸಗಳ ಕ್ಷಣಗಳನ್ನು ಹಂಚಿಕೊಂಡರು. ಮೊದಲಲ್ಲಿ ಪ್ರಾರಂಭವಾದದ್ದು–ಮನೋಹರ ಗ್ರಂಥಮಾಲೆಯಲ್ಲಿ ಪುಸ್ತಕಗಳನ್ನು ಜೋಡಿಸುವ–ತಯಾರಿಸುವ–ಬೈಂಡ್ ಮಾಡುವ ಕೆಲಸವನ್ನು ಮೂವತ್ತೈದು ವರುಷಗಳಿಗೂ ಮೀರಿ ಮಾಡಿಕೊಂಡು ಬಂದಿದ್ದೇನೆ–ಎಂದು ಸಾಹೇಬರು ಹೇಳುತ್ತಾ. . . "ನೀವು ಕೇಳಿರಬೇಕಲ್ಲ ಶ್ರೀ ಜಿ.ಬಿ. ಜೋಶಿಯವರು, ನಮ್ಮ ರಮಾಕಾಂತರವರ ಅಪ್ಪ" ಅವರೊಂದಿಗೆ ಇದ್ದವನು. ಪುಸ್ತಕವನ್ನು ತಯಾರಿಸಿ, ಬೈಂಡ್ ಮಾಡಿಸಿ, ಎಲ್ಲಾ ಚಂದಾದಾರರಿಗೆ ಕಳುಹಿಸುವುದೇ ನನ್ನ ಕೆಲಸ ನೋಡಿ" ಎಂದರು.

"ನೀವು ಬೇರೆ ಕೆಲಸದ ಬಗ್ಗೆ ಯೋಚನೆಯನ್ನೇ ಮಾಡಲಿಲ್ಲವೇ" ಎಂದು ಕೇಳಿದೆ. "ಇಲ್ಲವೇ ಇಲ್ಲ" ಎಂದು ತಲೆಯಾಡಿಸುತ್ತ "ಇದೇ ಕೆಲಸದಲ್ಲೇ ತೊಡಗಿಕೊಂಡು ಕೆಲಸ ಮಾಡುತ್ತ, ಮಾಡುತ್ತ, ಮೂವತ್ತೈದು ವರುಷಗಳೇ ಕಳೆದು ಹೋದವಲ್ಲ" ಎಂದು ಪ್ರೀತಿಯಿಂದ ನಕ್ಕರು. "ನೋಡಿ, ನಾವು ಕಳೆದ ಹತ್ತಾರು ಕನ್ನಡ ಸಾಹಿತ್ಯ ಸಮ್ಮೇಳನ ಅಂತ ತಿರುಗಿದ್ದೇನೆ" ಅಂದರು. "ನೀವು ಸಿರ್ಸಿಯವರಲ್ಲವೇ? ಸಿರ್ಸಿಯಲ್ಲೂ ಸಾಹಿತ್ಯ ಸಮ್ಮೇಳನವಾಯಿತೇ?" ನಾನು–"ಹೌದಲ್ಲ, 1982ರ ಕನ್ನಡ ಸಾಹಿತ್ಯ ಸಮ್ಮೇಳನ ಸಿರ್ಸಿಯಲ್ಲೆ ಆಯಿತು. ದಿ. ಶ್ರೀ ಗೊರೂರರವರ ಅಧ್ಯಕ್ಷತೆಯಲ್ಲಿ". "ಹೌದೌದು" ಎಂದು ಸಾಹೇಬರು ತಲೆಯಾಡಿಸಿದರು. "ನನಗೆ ಈಗ ನೆನಪಿಗೆ ಬಂತು ನೋಡ್ರಿ, ನಾನೂ ಸಿರ್ಸಿಗೆ ಹೋಗಬೇಕಾಗಿತ್ತು. ಆದರೆ ಈ ಪುಸ್ತಕದ ಕೆಲಸ ಮಾಡಿ ಸಾಕುಸಾಕಾಗಿ ಹೋಗಿತ್ತು. ಬರಾಕಾಗೋಲ್ಲ ಅಂದು ಬಿಟ್ಟೆ ನೋಡ್ರಿ" ಎಂದರು. "ಬಹಳಾ ತಿರುಗೇನ್ರಿ" ಎಂದರು. 'ಗ್ರಂಥಮಾಲೆ' ಎಂದರೆ ಮನೆ ತರಹ ಆಗೋಗಿದೆ" ಎಂದರು. "ಈ ನನ್ನ ತಲೆಮೇಲೆ ಇದೆಯಲ್ಲಾ ಈ ಕರಿಟೋಪಿ ಯಾರದ್ದು ಅಂದಕೊಂಡೀದಿರಿ? ಶ್ರೀ ಜಿ.ಬಿ. ಜೋಶಿಯವರದ್ದೇ. ಪ್ರತಿ ದೀಪಾವಳಿಗೂ ಪೂಜೆಗೆ ಕೂತಾಗ ಅವರಿಗೆ ಹೊಸ ಟೋಪಿ ಬೇಕ್ರಿ. ಅವರ ತಲೆಮೇಲಿದ್ದ ಹಳೆ ಟೋಪಿ ನನಗ ಕೊಟ್ಟು ಬಿಡುತ್ತಿದ್ದರು. ಈ ಟೋಪಿ ಇದೆಯಲ್ಲಾ, ಅವರೇ ಹಾಕ್ಕೊಂಡ ಟೋಪಿ ನೋಡ್ರಿ" ಎಂದರು.

ನಾನು ಬೆಕ್ಕಸ ಬೆರಗಾಗಿ ಈ ಸಾಹೇಬರ ತಲೆಯ ಮೇಲಿದ್ದ ಮಸುಕಾದ ಕರಿಯ ಟೋಪಿಯನ್ನೇ ನೋಡುತ್ತ ನಿಂತೆ. ವಿಶ್ವ ಪುಸ್ತಕ ಮೇಳಕ್ಕೆ ಬಂದಿದ್ದು ಸಾರ್ಥಕವಾದಂತೆ ಅನಿಸಿತು. ಅದರಲ್ಲೂ ಅಷ್ಟೊಂದು ಪ್ರೀತಿಯಿಂದ ನಾಲ್ಕು ದಶಕಗಳಿಗೂ ಮೀರಿ ತನ್ನದೇ ಆದ ರೀತಿಯಲ್ಲಿ ಕನ್ನಡದ ಕೆಲಸವನ್ನು ಮಾಡುತ್ತ ಬಂದ ಸಾಹೇಬರನ್ನು ನೋಡುವುದೇ ನನಗೆ ಏನೋ ಒಂದು ಬಗೆಯ ಸಾರ್ಥಕವೆನಿಸಿತು. ನಾವು ಹೀಗೆ ಮಾತನಾಡುತ್ತ ಮುಖ್ಯ ದ್ವಾರದ ಹೊರಗೆ ಬಂದು ಆಟೋರಿಕ್ಷಾಕ್ಕೆ ಕಾಯುತ್ತಿದ್ದೆವು. "ಸಾಹೇಬರೆ ತಮ್ಮ ಹೆಸರು ಕೇಳಬಹುದೇ?" ಎಂದೆ. "ನಾನ್ರಿ? ನಾನ್ರಿ? ಎಂದು ನಾಲ್ಕಾರು ಬಾರಿ ಉಲಿಯುತ್ತ ಸಾಹೇಬರು–"ಅಲ್ಲಾಬಕ್ಷ ಶೇಕ್" ಎಂದರು. ನಾನು ಮತ್ತೊಮ್ಮೆ "ಅಲ್ಲಾಬಕ್ಷ್ ಶೇಕ್" ಎಂದೆನ್ನುತ್ತ "ಅಲ್ಲಾಬಕ್ಷ ಶೇಕ್ ಅಲ್ಲವೇ?" ಎಂದು ಬಾರಿ ಬಾರಿ ಕೇಳಿದೆ. ಎಲ್ಲಿ ಮರೆತು ಬಿಡುವೇನೋ? ಎಂಬ ಭಯದಿಂದ ನಾಲ್ಕಾರು ಬಾರಿ "ಅಲ್ಲಾಭಕ್ಷ ಶೇಕ್" ಎಂದು ಕೊಂಡೆ.

ಬಾಲಚಂದ್ರ ಆಟೋದಲ್ಲಿ ಪುಸ್ತಕಗಳನ್ನು ಇರಿಸಿಕೊಂಡು ಕುಳಿತಿದ್ದರೆ, ಈ ನಮ್ಮ ಧಾರವಾಡದ ಅಲ್ಲಾಭಕ್ಷ್ ಶೇಕ್ ಸಾಹೇಬರು ಆಟೋದವನಿಗೆ ಮೀಟರ್ ಮೇಲೆ ಹೋಗುವಂತೆ ತಮ್ಮ ಉರ್ದುಮಿಶ್ರಿತ ಹಿಂದಿಯಲ್ಲಿ ಗದರಿಸುತ್ತಿದ್ದರು. ನಾನು ಒಂದು ಬಗೆಯ ವಿಸ್ಮಯದಿಂದ ಈ ನಮ್ಮ ಕನ್ನಡ ಲೋಕದ ಒಂದು ಮಿನುಗುವ ತಾರೆಯನ್ನು ನೋಡುವಂತೆ ನಮ್ಮ ಅಲ್ಲಾಭಕ್ಷ್ ಶೇಕ್ ಸಾಹೇಬರನ್ನು ನೋಡುತ್ತ ನಿಂತಿದ್ದೆ. ನಮ್ಮ ಹಿಂದೆ ಮುಖ್ಯ ದ್ವಾರದ ಮೇಲೆ "ವಿಶ್ವ ಪುಸ್ತಕ ಮೇಳ" ಎಂದು ದೊಡ್ಡದಾಗಿ ಬರೆದಿತ್ತು. ಶೇಕ್ ಸಾಹೇಬರು ನನಗೆ ವಿದಾಯ ಹೇಳುತ್ತ ಮತ್ತೆ ಒಳಗೆ ನಡೆದಿದ್ದರು. ನನಗೆ ಅವರಿಂದ ಆ ಶ್ರೀ ದಿ. ಜಿ.ಬಿ. ಜೋಶಿಯವರ ಕರಿಟೋಪಿಯನ್ನು ಕೇಳುವ ಮನಸ್ಸಾಗಿತ್ತು. ಕೇಳಲಿಲ್ಲ.

● ಡಾ. ವೆಂಕಟಾಚಲ ಹೆಗಡೆ



ಅಲ್ಲಾಭಕ್ಷ್ ಶೇಕ್ ಹಾಗೂ ರಮಾಕಾಂತ್ ಜೋಷಿ ಅವರೊಡನೆ ಡಾ. ವಿ.ಜಿ. ಹೆಗಡೆ

## ಮುನ್ನೋಟ

ಕರ್ನಾಟಕ ಸರ್ಕಾರ 2011ರ ಬಜೆಟ್ ನಲ್ಲಿ ದೆಹಲಿ ಕರ್ನಾಟಕ ಸಂಘಕ್ಕೆ ರೂ ಒಂದು ಕೋಟಿ ಅನುದಾನ ನೀಡಿರುವುದು ತಮಗೆಲ್ಲಾ ತಿಳಿದ ವಿಷಯ. ಅನುದಾನದಲ್ಲಿ 50 ಲಕ್ಷ ರೂಗಳನ್ನು ಕಳೆದ ಅಗಸ್ಟ್ ತಿಂಗಳಿನಲ್ಲಿಯೇ ಬಿಡುಗಡೆ ಮಾಡಿತ್ತು. ಈಗ ಉಳಿದ 50 ಲಕ್ಷ ರೂಗಳನ್ನು ಬಿಡುಗಡೆ ಮಾಡಿರುವುದರಿಂದ ಅನುದಾನದ ಪೂರ್ಣ ಮೊತ್ತ ಒಂದು ಕೋಟಿ ರೂಪಾಯಿ ದೆಹಲಿ ಕರ್ನಾಟಕ ಸಂಘಕ್ಕೆ ಬಂದಂತಾಗಿದೆ. ಸರ್ಕಾರ ಯಾವ ಕೆಲಸ ಕಾಮಗಾರಿಗಳಿಗೆ ಅನುದಾನದ ನೀಡಿದೆಯೋ ಅದೇ ಕೆಲಸ ಕಾಮಗಾರಿಗಳು ನಡೆಯುತ್ತಿವೆ. ಇದಕ್ಕಾಗಿ ಕರ್ನಾಟಕ ಸರ್ಕಾರಕ್ಕೆ, ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಕಾರ್ಯದರ್ಶಿಗಳಾದ ಶ್ರೀ ಬಸವರಾಜು, ಐ.ಎ.ಎಸ್. ಹಾಗೂ ಆಯುಕ್ತರಾದ ಶ್ರೀ ಮನುಬಳಿಗಾರ್, ಜಂಟೀ ಕಾರ್ಯದರ್ಶಿ ಶ್ರೀ ಸುಧಾಕರ ಶೆಟ್ಟಿ, ಸರ್ಕಾರದ ಅಧೀನ ಕಾರ್ಯದರ್ಶಿ ಶ್ರೀ ರಾಮಚಂದ್ರ ರಾವ್ ಅವರಿಗೆ ಹಾಗೂ ಸಂಬಂಧಿಸಿದ ಅಧಿಕಾರಿಗಳಿಗೆ ದೆಹಲಿ ಕನ್ನಡಿಗರ ಪರವಾಗಿ ಕೃತಜ್ಞತೆಗಳನ್ನು ಸಲ್ಲಿಸಬಯಸುತ್ತೇನೆ. ಹಾಗೂ ಸಹಕರಿಸಿದ ಕಾರ್ಯಕಾರಿ ಸಮಿತಿಯ ಪದಾಧಿಕಾರಿಗಳು ಹಾಗೂ ಸದಸ್ಯರಿಗೂ ನನ್ನ ಕೃತಜ್ಞತೆಗಳು.

ವಾರ್ಷಿಕ ಆಟೋಟ ಸ್ಪರ್ಧೆಗಳು ಹಾಗೂ ಅಂಬಿಕೇಶ್ ಮೆಮೋರಿಯಲ್ ಕ್ರಿಕೆಟ್ ಪಂದ್ಯಾವಳಿ ಮುಗಿದಿದೆ. ಬಹುಮಾನ ವಿತರಣಾ ಸಮಾರಂಭವನ್ನು ಮಾರ್ಚ್ 11ರಂದು ಆಯೋಜಿಸಲಾಗಿದೆ.

ಮಾರ್ಚ್ 11 ರ ಬೆಳಿಗ್ಗೆ 11ರಿಂದ ಸಂಜೆ 5 ಗಂಟೆಯವರಗೆ ರಕ್ತದಾನ ಶಿಬಿರವನ್ನು ಆಯೋಜಿಸಲಾಗಿದೆ. ಒಂದು ಜೀವ ಉಳಿಸುವ ಈ ಮಹತ್‌ಕಾರ್ಯದಲ್ಲಿ ತಾವು ಹೆಚ್ಚಿನ ಸಂಖ್ಯೆಯಲ್ಲಿ ಪಾಲ್ಗೊಂಡು ಕಾರ್ಯಕ್ರಮವನ್ನು ಯಶಸ್ವಿಯಾಗಿಸ ಬೇಕೆಂದು ಕೋರುತ್ತೇನೆ.

ಮಾರ್ಚ್ 10 ಮತ್ತು 11ರಂದು ಎರಡು ದಿನ ಮಂಡ್ಯ ರಮೇಶ್ ತಂಡದವರಿಂದ ಹಾಗೂ ಮಾರ್ಚ್ 31ರಂದು ಶ್ರೀ ನಾಗತಿಹಳ್ಳಿ ಚಂದ್ರಶೇಖರ್ ಅವರ ನೇತೃತ್ವದ ಅಭಿವ್ಯಕ್ತಿ ಮಹಿಳಾ ಸಂಘ ನಾಗತಿಹಳ್ಳಿ, ಮಂಡ್ಯ ಜಿಲ್ಲೆ ಅವರಿಂದ ನಾಟಕ ಪ್ರದರ್ಶನವನ್ನು ಆಯೋಜಿಸಲಾಗಿದೆ. ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಬೇಕೆಂದು ವಿನಂತಿ.

ಏಪ್ರಿಲ್ 1, 2012ರ ಭಾನುವಾರದಂದು ಸಂಘದ ಸರ್ವಸದಸ್ಯರ ಸಭೆಯನ್ನು ಕರೆಯಲಾಗಿದೆ. ದಯವಿಟ್ಟು ಪಾಲ್ಗೊಳ್ಳಿ.

● ಸಿ.ಎಂ.ನಾಗರಾಜ

# ದೆಹಲಿ ಕರ್ನಾಟಕ ಸಂಘ

## ಅಂತಾರಾಷ್ಟ್ರೀಯ ಮಹಿಳಾ ದಿನಾಚರಣೆ

**24 ಮಾರ್ಚ್ 2012ರ ಶನಿವಾರ**

**ಸಮಯ : ಸಂಜೆ 5.00ಗಂಟೆಗೆ**

**ಸ್ಥಳ : ಸಂಘದ ಸಭಾಂಗಣ**

**ದೆಹಲಿಯ ವಿವಿಧ ಸಂಘ-ಸಂಸ್ಥೆಗಳ ಮಹಿಳಾ ಕಲಾವಿದರಿಂದ ವೈವಿಧ್ಯಮಯ**

**ಸಾಂಸ್ಕೃತಿಕ ಕಾರ್ಯಕ್ರಮಗಳು**

**ತಮಗೆಲ್ಲರಿಗೂ ಆದರದ ಸ್ವಾಗತ**

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ

## "ಇಂದಿನುಷೆ ತಂದಿಹಳು ಸೌಂದರ್ಯ, ಸಂದೇಶ!"

ಅಭಿ**ನಂ**ದನೆಗಳು ನಿನಗೆ ನಂದನ ಯುಗಾದಿ
ಆನಂ**ದ**ದಿಂದ ಸ್ವಾಗತಿಸುವೆವು ನಿನ್ನ ಯುಗಾದಿ
ತನ**ನ**ತೋಂತನ ಎಂದು ಹಾಡು ತುಂಬು ಮನದಿ
**ನಾ**ಡೆಲ್ಲಾ ಹಾಡಲಿ ಹರ್ಷ ಭರಿತ ಮಧುರ ಗಾನ
**ಮ**ನವೆಲ್ಲ ಮುದಗೊಳಲಿ ಇಂದು: ಪ್ರತಿದಿನ
**ಸಂ**ತಸದಿ ಹಂಚೋಣ ಬೇವುಬೆಲ್ಲ ರಸಾಯನ
**ವ**ನದಲಿ ಮಾವು-ಬೇವು ಪಲ್ಲವಿಸುತಿರೆ
ನಿತ್ಯೋ**ತ್ಸ**ವದ ಪವನ ಗಾಳಿ ತಂಪೆಲರು ಬೀರುತಿರೆ
ರಮ್ಯ**ರ**ಮಣೀಯವಾಗಲಿ ಈ ಚೈತ್ರದಾಗಮನ
"ಜಗಕೊಂದು ಯುಗಕೊಂದು ಹೊಸ ಹೆಸರು ಬೇಕು
ನಗೆಗೊಂದು ಬಗೆಗೊಂದು ಹೊಸ ಕುಸುರು ಬೇಕು
ಹೊಸ ತನವೆ ಜೀವನದ ಪ್ರಗತಿಯ ರಹಸ್ಯ
ಹೊಸತನವೇ ಮನುಜತೆಯ ಮೈಸಿರಿಯ ಲಾಸ್ಯ"

(ಗೋಪಾಲ ಕೃಷ್ಣ ಅಡಿಗ)

ಎಂಬ ಕವಿವಾಣಿ ಸರ್ವಜೀವಿಗಳಿಗೆ ಹಿತ ವಚನವಾಗಲಿ; ಅದೇ ಚೈತ್ರದಾಗಮನದ ಸ್ವಾಗತ ಗಾನ!

● ಡಾ. ಅಹಲ್ಯಾಚಿಂತಾಮಣಿ

## ರಾಷ್ಟ್ರೀಯ ಕನ್ನಡ ಸಮ್ಮೇಳನ

ಏಪ್ರಿಲ್ 7 ಮತ್ತು 8ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ 29ನೇ ರಾಷ್ಟ್ರೀಯ ಕನ್ನಡ ಸಮ್ಮೇಳನ ನಡೆಯಲಿದೆ. "ದೆಹಲಿ ಕನ್ನಡಿಗ" ಪತ್ರಿಕೆ ಆಶ್ರಯದಲ್ಲಿ ನಡೆಯಲಿರುವ ಈ ಸಮ್ಮೇಳನವನ್ನು ಏಪ್ರಿಲ್ 7ರಂದು ಸಂಜೆ 4.00ಕ್ಕೆ ಕರ್ನಾಟಕ ರಾಜ್ಯ ಮಹಿಳಾ ವಿಶ್ವವಿದ್ಯಾಲಯದ ಮಾಜಿ ಕುಲಪತಿ ಡಾ. ಗೀತಾ ಬಾಲಿ ಅವರು ಉದ್ಘಾಟಿಸಲಿದ್ದು, ವಿದ್ವಾಂಸ, ಲಕ್ನೋದ ಅಂಬೇಡ್ಕರ್ ವಿಶ್ವವಿದ್ಯಾಲಯದ ಕುಲಪತಿ ಪ್ರೊ. ಬಿ. ಹನುಮಯ್ಯ ಅವರು ಅಧ್ಯಕ್ಷತೆ ವಹಿಸಲಿರುವರು. ದಾವಣಗೆರೆ ವಿಶ್ವವಿದ್ಯಾಲಯದ ಕುಲಪತಿ ಡಾ. ಎಸ್. ಇಂದುಮತಿ ಅವರು ಸ್ಮರಣ ಸಂಚಿಕೆ ಬಿಡುಗಡೆ ಮಾಡಲಿರುವರು. ಬೆಂಗಳೂರು ಕೃಷಿ ವಿಶ್ವವಿದ್ಯಾಲಯದ ಕುಲಪತಿ ಡಾ.ಕೆ. ನಾರಾಯಣ ಗೌಡ ಅವರು ಪುಸ್ತಕ ಮತ್ತು ಕಲಾಪ್ರದರ್ಶನ ಉದ್ಘಾಟಿಸಲಿರುವರು.

ಸಮ್ಮೇಳನದ ವಿವಿಧ ಕಾರ್ಯಕ್ರಮಗಳನ್ನು ಕನ್ನಡ ಮತ್ತು ಸಂಸ್ಕೃತಿ ಇಲಾಖೆಯ ಆಯುಕ್ತ ಮನು ಬಳಿಗಾರ್, ರಾಷ್ಟ್ರ ಪ್ರಶಸ್ತಿ ವಿಜೇತ ಗಾಯಕ ಶಿವಮೊಗ್ಗ ಸುಬ್ಬಣ್ಣ, ಭಾರತ ಸರಕಾರದ ಮಾಜಿ ಕಾರ್ಯದರ್ಶಿ ಡಾ. ಪಿ.ಡಿ. ಶೆಣೈ, ಕರ್ನಾಟಕ ಸರಕಾರದ ದಿಲ್ಲಿಯ ಹೆಚ್ಚುವರಿ ವಿಶೇಷ ಪ್ರತಿನಿಧಿ ಬೈಕೆರೆ ನಾಗೇಶ್, ಆಕಾಶವಾಣಿ ಉಪನಿರ್ದೇಶಕ ಡಾ. ಕೆ. ವಾಗೀಶ್, ಸಮಾಜ ಸೇವಕ ಜೀರಿಗೆ ಲೋಕೇಶ್ ಅವರು ಉದ್ಘಾಟಿಸಲಿರುವರು. ಸಮ್ಮೇಳನಕ್ಕೆ ಬಾ. ಸಾಮಗ ಅವರು ತಮ್ಮನ್ನೆಲ್ಲ ಆಹ್ವಾನಿಸಿದ್ದಾರೆ.



# ಹೋಳಿ ಹಬ್ಬ : ಬಾಲ್ಯದ ನೆನಪನ್ಯಾಗ

ಮಸಕು–ಮಸಕಾಗಿ ನೆನಪಿನಲ್ಲಿರೋ ನಾನು ಆಡಿದ ಮೊದಲ ಹೋಳಿ ಹುಣ್ಣಿವೆ ಅಂದರೆ, ಅಣ್ಣನ ಬೆನ್ನ ಮ್ಯಾಲೆ ನನ್ನಿಂದಾಗಿ ಅಮ್ಮ ಮೂಡಿಸಿದ ಕೆಂಪಾದ ಬಾಸುಂಡೆಗಳು. ನಿಜ, ಅಣ್ಣ ಆಗ ನನಗ ಯಾವ ಬಣ್ಣ ಹಾಕಿದ್ದ ಅನ್ನೋದು ನೆನಪಿಲ್ಲ, ಆದರ, ತೀರಾ ಸಣ್ಣವನಾಗಿದ್ದ ನನಗ ಅಣ್ಣ ಹಾಕಿದ ಬಣ್ಣ ಕಿರ್ರೋ ಅಂತ ಚೀರೋ ಹಾಂಗ ಮಾಡಿದ್ದು ನೆನಪಿದೆ, ನನ್ನ ಕೀರಲ ಧ್ವನಿ, ಅಮ್ಮ ಅಣ್ಣನ ಬೆನ್ನಿಗೆ ಕೆಂಪು–ಕರಿ ಬಾಸುಂಡೆ ಮೂಡಿಸೋ ಹಾಗೆ ಮಾಡಿದ್ದೂ ನೆನಪಿದೆ. ಮುಂದೆ ಕಾಲೇಜು ದಿನಗಳವರೆಗೆ ನಾನು–ಅಣ್ಣ ಆಡಿದ ಹೋಳಿ ಹುಣ್ಣಿಮೆಗಳು ಆಡಿದ ಆಟಗಳು, ಕದ್ದ ಕುಳ್ಳು–ಕಟ್ಟಿಗೆಗಳು, ಜನರಿಂದ ತಿಂದ ಬೈಗಳುಗಳು, ಹುಣ್ಣಿವೆ ದಿನ ಅಂದವಾಗಿ ಸಿಂಗರಿಸಿ ಕೂಡಿಸಿ ಪೂಜಿಸಿದ ನಮ್ಮ ಓಣಿಯ ಕಾಮಣ್ಣನನ್ನು ನೋಡಿದ ಜನರ ಹೊಗಳಿಕೆಯ ಮಾತುಗಳು ಈಗ ಬರೀ ನೆನಪು ಮಾತ್ರ.

"ಹೋಳಿ ಆಡದ ನಾಡು,
ನಾಳೆನದೇ ಕಾಡಾಯ್ತು, ದಿನದಿನಕೂ
ಪಿಡುಗೆದ್ದು ಹಾಳಾಯ್ತೋ"

ಬಾಲ್ಯದಲ್ಲಿ ಕೇಳಿದ ಈ ಹಾಡಿಗೆ ಅದೆಂಥ ಅದ್ಭುತ ಅರ್ಥ ಇದೆ ಅನ್ನೋದನ್ನ ನಾವೀಗ ಯೋಚಿಸಬೇಕಾಗಿದೆ. ಹೋಳಿ ಆಡುವುದು ಅಸಭ್ಯ ಜನರ, ಅನಾಗರೀಕರ ಹಬ್ಬ ಎಂದು ಹೇಳುವ ಒಂದು ಜನಾಂಗವೂ ಈಗ ಇದೆ. ಆದರೆ, ಹೋಳಿ ಹಲಿಗೆ ಬಡಿಯುತ್ತ, ಕುಣಿಯುತ್ತ, ಲಭ್–ಲಭೋ ಎಂದು ಬಾಯಿ ಬಡೆದುಕೊಂಡು ಹೋಯ್ಕೊಳ್ಳುತ್ತ,

"ಚೋಟುದ್ದ ಜಡೆಯೊಳೆ,
ಚೀಟ ಕುಪ್ಪುಸದೋಳೆ. . . .

. . . ಎಂದು ಯೌವನದ ಮಿತ್ರರೊಂದಿಗೆ ಅಸಭ್ಯ ಎನಿಸಿದರೂ ಹಬ್ಬದ ದಿನ ಮಾತ್ರ ಹಾಡಿ ಆನಂದಿಸಿದ ಆ ರಸಮಯ ಗಳಿಗೆಗಳ ಲೆಕ್ಕಹಾಕಿ ನೀವೇ ಹೆಳ್ರೆಲ್ಲಾ? ನಿಜ ಹೇಳಬೇಕಂದ್ರೆ, ಈಗ ನಾವು ಅಳವಡಿಸಿಕೊಂಡಿರೋ ನಮ್ಮ ಧಾಂಬಿಕ ನಾಗರೀಕತೆಯನ್ನು ಅವಲೋಕಿಸುತ್ತ ಕುಳಿತಾಗ ನನ್ನ ಮನಸ್ಸು ನನಗೇ ಛೀಮಾರಿ ಹಾಕಿ ಹೇಳುತ್ತದೆ. "ತಮ್ಮಾ ನೀನು ವಿಚಾರವಂತನಾಗಿ, ಸಭ್ಯ ಅಂತ ಅನಿಸಿಕೊಳ್ಳಾಕ ಕಷ್ಟಪಟ್ಟು, ಆಧುನಿಕತೆ–ನಾಗರೀಕತೆ ಅಳವಡಿಸಿಕೊಂಡು ಗಳಿಸಿಕೊಂಡಿರೋ ಆನಂದಮಯ–ರಸಮಯ ಗಳಿಗೆಗಳಿಗಿಂಥ ಕಳೆದುಕೊಂಡಿದ್ದೇ ಹೆಚ್ಚಿದೆ, ಸುಮ್ಮನೇ ಕುತ್ಕೋ ಢಿಂಗ ಬಡಿಬ್ಯಾಡ"

ಹೋಳಿ ಹುಣ್ಣಿವೆ ಸಮೀಪಿಸುತ್ತಿದ್ದಂತೆ, ವರ್ಷಕ್ಕೊಮ್ಮೆಯಾದರೂ ಅಪ್ಪ–ಅವ್ವ ಮತ್ತ, ಅಜ್ಜ–ಅಮ್ಮ (ಅಜ್ಜಿ)ಂದಿರಿಂದ ಶಿವನ ಮೂರನೇ ಕಣ್ಣಿನಿಂದ ಭಸ್ಮವಾದ ಕಾಮಣ್ಣನ ಕಥೆಯನ್ನೂ, ರತಿಯ ವಿಲಾಪವನ್ನು ಮುಂದೆ ಶಿವ ನೀಡಿದ ವರಸ್ವರೂಪದ ಹೋಳಿ ಆಚರಣೆಯ ಕಥೆಯನ್ನು ಇಲ್ಲವೇ, ಪ್ರಲ್ಹಾದನ ಸೋದರತ್ತೆ ಹೊಲಿಕಾಳಿಗೆ, ಪ್ರಲ್ಹಾದನನ್ನು ತೊಡೆಯಮೇಲಿರಿಸಿಕೊಂಡು ಬೆಂಕಿಯಲ್ಲಿ ಕೂರಲು ಹೇಳಿದ ಹಿರಣ್ಯಕಷಿಪುವಿನ ಆದೇಶಕ್ಕೆ ಮಾನ್ಯತೆ ನೀಡಿದ ಹೊಲಿಕಾ ಉರಿದು ಹೋದ ಕಥೆಯನ್ನು ಹಲವಾರು ಭಾರಿ ಕೇಳಿದ್ದರೂ ಪ್ರತಿ ವರ್ಷ ಹೊಸ ಉತ್ಸುಕತೆಯಿಂದ ಕೇಳಿ ಆನಂದಿಸುತ್ತಿದ್ದ ಆ ರೋಮಾಂಚಕ ರಸ ನಿಮಿಷಗಳಿಂದ ನಾವು ನಮ್ಮ ಮಕ್ಕಳನ್ನು ವಂಚಿತಗೊಳಿಸಿದ್ದೇವೆ ಎಂದು ನನಗನ್ನಿಸುತ್ತಿದೆ. ನಾವು ಅನುಭವಿಸಿದ ಜೀವಂತ ರಸ ನಿಮಿಷಗಳ ಬದಲಿಗೆ ಇಂದು ನಿರ್ಜೀವ ಟೆಲಿವಿಷನ್ ಸೆಟ್, ಕಂಪ್ಯೂಟರ್ ಇಂಟರ್‌ನೆಟ್, ಎಮ್.ಪಿ.3 ಇಲ್ಲವೇ ಎಮ್.ಪಿ.4. ನಿಂದ ಅಂದಿನಷ್ಟೇ ಅಸಭ್ಯ ಹಾಡುಗಳಾದ "ಬೀಗಿ ಚುನರವಾಲಿ, ರಂಗ ಬರಸೆ. . ." ಇಲ್ಲವೇ "ಖಾಯ್‌ಕೆ ಪಾನ್ ಬನಾರಸ್. . ." ಹಾಡನ್ನು ಪ್ರತಿವರ್ಷ ಹಾಕಿ ಎತ್ತೆತ್ತಲೋ ಕುಣಿಯಲು ಬಿಟ್ಟಿದ್ದೇವೆ ಅನ್ನಿಸುತ್ತಿದೆ. ಯಾವುದು ತಪ್ಪು–ಯಾವುದು ಸರಿ ಎನ್ನುವುದನ್ನು ನಿರ್ಧರಿಸುವುದು ಆಯಾ ಕಾಲಮಾನಕ್ಕೆ ಅವರವರಿಗೆ ಬಿಟ್ಟಿದ್ದು. ಆದರೆ ಹೆಚ್ಚು ಕಡಿಮೆ ಎರಡನ್ನೂ ಕಂಡು ಅನುಭವಿಸಿ ಆನಂದಿಸಿದ ನನಗೆ ಅಂದು ಹಬ್ಬ ಹರಿದಿನ ಆಚರಿಸುವಾಗ ಆನಂದಿಸಿದ ರಸನಿಮಿಷಗಳಲ್ಲಿದ್ದ ಸಂತಸ ಇಂದು ಉಳಿಸಿಕೊಂಡಿಲ್ಲ ಅಂತ ಅನಿಸುತ್ತಿದೆ. ಇತ್ತೀಚಿನ ಹೋಳಿ ಹಬ್ಬದಲ್ಲಿ ಬಂಧು–ಮಿತ್ರರೊಂದಿಗಿನ ಮಧುರ ಸಂಬಂಧಗಳ ಅನುಭವಿಸುವ ಇಲ್ಲವೇ ಸಂತಸದ ಅರಿವಾಗದಷ್ಟು ಮಾಧಕತೆಯಲ್ಲಿ ಅನೇಕರು ಮುಳುಗಿ ಬಿಡುತ್ತಾರೆಂಬುದು ಸತ್ಯ ಸಂಗತಿ.

ಆಗಷ್ಟೇ ಧಾರವಾಡ ನಗರ ನಗರೀಕರಣ ಹೊಂದುತ್ತ ಕಬಳಿಸಿದ ಎರಡು ಚಿಕ್ಕ ಗ್ರಾಮಗಳಾದ ಸೈದಾಪುರ–ಗುಲಗಂಜಿಕೊಪ್ಪ (ಕೊಪ್ಪ) ಆಚರಿಸುತ್ತಿದ್ದ ಹೋಳಿ ಹಬ್ಬದ ಆ ಮೆರಗು–ಅನುಭವಿಸಿದ ಆ ಆನಂದ 40 ವಸಂತಗಳ ನಂತರವೂ ನನ್ನ ಮನದಾಳದಲ್ಲಿ ಸ್ವಲ್ಪವೂ ಮಾಸದೇ ಉಳಿದಿದೆ. ಆಗಿನ ಎರಡೂ ಊರುಗಳ ಜನ ಊರ ಮುಂದಿನ ತುರಮಂದಿಗಳಲ್ಲಿ (ದಿನಂಪ್ರತಿ ದನಕರುಗಳನ್ನು ಮೇಯಿಸಲು ಕರೆದೊಯ್ಯುವ ಮೊದಲು ಒಂದುಕಡೆ ಒಟ್ಟುಗೂಡಿಸಲು ಬಿಟ್ಟುಕೊಂಡ ಊರ ಮುಂದಿನ ಬಯಲು ಜಾಗೆ) ಹುಣ್ಣಿಮೆಗೆ ಮೂರು ದಿನ ಮೊದಲು ಕಾಮ–ರತಿ–ಮೂರ್ತಿಗಳನ್ನು ಸ್ಥಾಪಿಸುತ್ತಿದ್ದರು. ಎರಡೂ ಊರುಗಳವರು ಸ್ಪರ್ಧಾತ್ಮಕ ರೀತಿಯಲ್ಲಿ ಮೂರ್ತಿಗಳನ್ನು ಸಿಂಗರಿಸುತ್ತಿದ್ದರು. ಊರಿನ ಹೆಣ್ಣು ಮಕ್ಕಳು ಸಂಜೆಗೆ ಸಿಹಿ ತಿಂಡಿ ತಂದು ನೈವೇದ್ಯ ಮಾಡುತ್ತಿದ್ದರು. ಪ್ರಸಾದ ವಿನಿಮಯವಾಗುತ್ತಿತ್ತು. ಹುಣ್ಣಿವೆಯ ಬೆಳದಿಂಗಳಲ್ಲಿ ಮಂಡಕ್ಕಿ–ಕಾರಾ ಮೆಣಸಿನಕಾಯಿ ಬಜಿ ಸವಿಯುತ್ತಿದ್ದೆವು. ಹುಣ್ಣಿಮೆಯ ಮರುದಿನ ಕಾಮದಹನ. ಹತ್ತು–ಹದಿನೈದು ದಿನಗಳಿಂದ ಊರ ಯುವಕರು ಸಂಗ್ರಹಿಸಿದ ಕುಳ್ಳು–ಕಟ್ಟಿಗೆಗಳ ಮಧ್ಯೆ ಕಾಮನಮೂರ್ತಿಯನ್ನು ಇಟ್ಟು ಊರ ಜನರೆಲ್ಲ ಜಾತಿ–ಅಂತಸ್ತುಗಳನ್ನು ಮರೆತು ಒಂದಾಗಿ ಕಾಮ ದಹನಗೈಯುತ್ತಿದ್ದರು. ನಂತರ ಬಣ್ಣಗಳ ಚಿತ್ತಾರಹೊತ್ತ ಹಲಿಗೆಗಳನ್ನು ಬಡಿಯುತ್ತ ಹಾಡುವುದು, ಕುಣಿಯುವುದು, ಬಣ್ಣ ಆಡುವುದು ಮಧ್ಯಾಹ್ನದವರೆಗೂ ನಡೆಯುತ್ತಿದ್ದವು. ವಿವಿಧ ಪಂದ್ಯಾವಳಿಗಳೂ, ಕುಸ್ತಿಗಳು ನಡೆಯುತ್ತಿದ್ದವು. ಈ ಸೈದಾಪುರ–ಗುಲಗಂಜಿಕೊಪ್ಪಗಳಲ್ಲಿ ವಾಸಿಸುತ್ತಿದ್ದ ಹೆಚ್ಚಿನ ಜನರು ಒಕ್ಕಲಿಗರು (ಜಾತಿಯಿಂದಲ್ಲ ಕೃಷಿ ಇವರ ಉದ್ಯೋಗ) ಹೆಚ್ಚಿನ ಮನೆಗಳಲ್ಲಿ ಜೋಡೆತ್ತಿನ ಗಾಡಿಗಳಿದ್ದವು. ಊರ ಜನರೆಲ್ಲ ಒಂದಾಗಿ ಎರಡೂ ಊರುಗಳಲ್ಲಿನ ಜೋಡೆತ್ತಿನ ಗಾಡಿಗಳಲ್ಲಿ ಹಂಡೆ, ಕೊಪ್ಪಳ, ಪಿಪಾಯಿಗಳನ್ನು ಕಟ್ಟಿ ಊರ ಮುಂದಿನ ಕೆರೆಗಳಿಂದ ನೀರು ತುಂಬಿ ವಿವಿಧ ಬಣ್ಣ ಬೆರೆಸಿ ತುಂಬಿಸಿಕೊಂಡು ಎರಡೂ ಊರುಗಳ ಮಧ್ಯ ಇದ್ದ ಬಯಲಿನಲ್ಲಿ ಸೇರುತ್ತಿದ್ದರು. ಸುಮಾರು ಎರಡರಿಂದ ಮೂರರವರೆಗೆ ಒಬ್ಬರ ಮೇಲೊಬ್ಬರು ಬಣ್ಣದ ಕುಡಿಕೆ, ಚೊಂಬು ಇಲ್ಲವೆ ಬಿದಿರನ್ನು ಕೊರೆದು ಮಾಡಿದ ಜೀಕಳಿಗಳಿಂದ ಬಣ್ಣ ಎಸೆಯುವ ಕಾಳಗ ನಡೆಸುತ್ತಿದ್ದರು. ಜೋಡೆತ್ತಿನ ಬಂಡಿಗಳು ಎದುರು–ಬದಿರಾಗಿ ಓಡಾಡುತ್ತಿದ್ದವು, ರಭಸದ ಬಣ್ಣದ ಎಸೆತ ಸಾಗಿರುತ್ತಿತ್ತು. ಈ ಕಾಳಗದಲ್ಲಿ ಊರ ಹಿರಿಯರು ಮುಂದಾಗಿ ಸಣ್ಣಪುಟ್ಟ ವ್ಯಾಜ್ಯಗಳಿಂದ ವೈರತ್ವದಲ್ಲಿದ್ದ ಯುವಕರ ಮನವೊಲಿಸಿ ವೈರತ್ವ ಮರೆಸಿ ಒಂದಾಗಿಸುತ್ತಿದ್ದರು. ಎಲ್ಲರೂ ಎಲ್ಲ ರೀತಿಯ ಅಂದರೆ ಬಡವ–ಬಲ್ಲಿದ, ಹಿರಿಯ–ಕಿರಿಯ, ಕುರುಡ–ಕುಂಟ ತಾರತಮ್ಯಗಳನ್ನು ಮರೆತು ಹೋಳಿ ಆಚರಿಸುತ್ತಿದ್ದರು. ಅವರೊಂದಿಗೆ ಆಡಬೇಡ–ಇವರೊಂದಿಗೆ ಕುಣಿಯಬೇಡ, ಅವರನ್ನು ಮುಟ್ಟಿಸಿಕೊಳ್ಳಬೇಡ ಎಂದೆಲ್ಲ ಬಂಧನದಲ್ಲಿ ಇಡುತ್ತಿದ್ದ ನನ್ನ ಹಿರಿಯರು ಅಂದು ನನಗೆ ಸ್ವಾತಂತ್ರ್ಯ ನೀಡುತ್ತಿದ್ದರು. ಅಂತೆಯೇ ನನಗೆ ಬಾಲ್ಯದಿಂದಲೂ ಈ ಹಬ್ಬದ ಬಗೆಗೆ ಹೆಚ್ಚಿನ ಪ್ರೀತಿ. ಈ ಹಬ್ಬ ನಾವು ಆಚರಿಸುತ್ತಿದ್ದ ಎಲ್ಲ ಹಬ್ಬಗಳಿಗಿಂತ ಶ್ರೇಷ್ಠ ಎನಿಸುತ್ತಿತ್ತು. ಯಾಕೆಂದರೆ ನನ್ನ ಬಾಲ್ಯದ ಬಡ ಮಿತ್ರ ಹೊಸ ಬಟ್ಟೆ ಹಬ್ಬಕ್ಕೆ ತಂದೆ ಕೊಡಿಸಲಿಲ್ಲ ಎಂದು ಅಳುತ್ತಿರಲಿಲ್ಲ. ನಾನೂ–ಅವನೂ ಸಮಾನ ಸಂತಸಪಟ್ಟು ಆಚರಿಸುತ್ತಿದ್ದ ಹಬ್ಬ ಇದೊಂದೇ ಆಗಿತ್ತು.

ಈಗ ಧಾರವಾಡದ ಸೈದಾಪುರ–ಗುಲಗಂಜಿಕೊಪ್ಪಗಳ ಮಧ್ಯದ ಬಯಲು ಹಾಗೂ ನೀರು ತುಂಬಿಕೊಂಡಿರುತ್ತಿದ್ದ ಕೆರೆಗಳು ಮಾಯವಾಗಿವೆ. ಬದಲಿಗೆ ಅಸಂಖ್ಯಾತ ಮಹಡಿ ಮನೆಗಳು ವಿವಿಧ ಮನಗಳು ವಾಸವಾಗತೊಡಗಿವೆ. ಜೋಡೆತ್ತಿನ ಬಂಡಿಗಳು ಮಾಯವಾಗಿ ಹೊಗೆ ಉಗುಳುವ ಕಬ್ಬಿಣದ ಟ್ರಾಕ್ಟರುಗಳು ಊರ ಬೀದಿಗಳನ್ನು ತುಂಬಿಕೊಂಡಿವೆ. ಹಿರಿಯರ ಮಾತಿಗೆ ಸಮ್ಮತಿಸಿ ವೈರತ್ವ ಮರೆಯುವ ಮುಗ್ಧ ಮನಗಳನ್ನು ಮಾದಕವಸ್ತುಗಳು, ಕಛೇರಿ ಕಾನೂನುಗಳು ಮಲಿನಗೊಳಿಸಿವೆ. ಬಣ್ಣ ಎಸೆದಾಡುತ್ತಿದ್ದ ಯುವಕೈಗಳಿಗೆ ಜೀಕಳಿಗಳ ಬದಲು ಚಾಕು–ಚೂರಿ, ಪಿಸ್ತೂಲುಗಳು ಬಂದದ್ದರಿಂದ ನನ್ನ ಬಾಲ್ಯದ ದಿನಗಳಲ್ಲಿ ನೋಡಿ ಆಚರಿಸಿದ, ಆನಂದಿಸಿದ ಧಾರವಾಡದ ಹೋಳಿ ಹಬ್ಬದ ಕಾಳಗ ನಡೆಸುವುದನ್ನು ಧಾರವಾಡ ಪೋಲಿಸ್ ಇಲಾಖೆಯವರು ನಿಷೇಧಿಸಿದ್ದಾರೆಂದು ಈ ಲೇಖನ ಬರೆಯುವಾಗ ದೂರವಾಣಿಯಲ್ಲಿ ಸಂಪರ್ಕಿಸಿದ ನನ್ನ ಮಿತ್ರ ಹೇಳಿದ. ಬಾಲ್ಯದಲ್ಲಿ ನನಸಾಗಿದ್ದ ನನ್ನ ನೆಚ್ಚಿನ ಹೋಳಿಹಬ್ಬ ಕನಸಾಗುತ್ತಿರುವುದನ್ನು ಕಂಡು ನನಗೆ ಕಸಿವಿಸಿಯಾಗುತ್ತಿದೆ, ಮಿತ್ರರೆ ! ಏನು ಮಾಡಲಿ?

● ಚೆನ್ನು ಎಸ್. ಮಠದ

# ಹೋಳಿ ಹುಣ್ಣಿವಿ ಅಂದರ...

ಮನಿಗೆ ಬಂದವರ್‍ಯಾರೊ ಬಸವಣ್ಣ
ಕಣ್ತಗದು ನೋಡೊ ಕಾಮಣ್ಣ
ಮುಸುಡಿಗೆ ಏನಿದು ಮಸಿಯಣ್ಣ
ಕನ್ನಡ್ಯಾಗ ನೋಡ್ಕೊ ತಿಮ್ಮಣ್ಣ...
ಅಬ್ ಅಬ್ ಅಬ್ ಅಬ್ ಅಬ್...

ಅಂತ ಲಬೋ ಲಬೋ ಹೊಯ್ಕೊತ ಓಣೋಣಿ ತಿರಿಗಿದ್ದು ನೆನ್ಸಿಗೊಂಡ್ರ ಎನಪಾ ಎಂಥ ಚೆಂದ ಇದ್ದವು ಆ ದಿನಗೊಳು ಅನ್ನಸ್ತದ. ಭೂಮಿ ಮ್ಯಾಲ ಒಬ್ಬ ಎಂಥ ದೊಡ್ಡ ಮನುಷ್ಯಾ ಅದಾನಂದ್ರು ಅವ್ನ ಬದುಕಿನಾಗ ಕಳೆದ ಸಣ್ಣಾಗಿನ ನೆನಪಿನಷ್ಟು ಮಧುರ ಮತ್ತೊಂದು ಇರ್‍ಲಿಕ್ಕಿಲ್ಲ ಬಿಡ್ರೀ. ಎಂಥ ಕಡು ಬಡತನದಾಗ ಹುಟ್ಟಿ ಬೆಳದಾರ ಅಂದ್ರು ಅವರವರಿಗೆ ದಕ್ಕಿದ ಬಾಲ್ಯ ಅವ್ರಗಾ ಚೆಂದ. ಇನ್ನು ಹಬ್ಬ ಅಂದಕೂಡ್ಲ ಮೊದ್ಲು ನೆನ್ಪಾಗೋದು ಸಿಹಿ ಊಟ ಮತ್ತ ಹೊಸ ಬಟ್ಟಿ. ನೋಡ್ರಿ ಮನ್ಯಾಗ ಎಷ್ಟೇ ತ್ರಾಸ್ ಐತಿ ಅಂದ್ರೂ ಕನಿಷ್ಠ ಹುಡ್ಗುರ್ಗಾದ್ರು ಹೊಸ ಬಟ್ಟಿ ಕೊಡ್ಸಿ ಅವ್ರು ತಮ್ಮ-ತಮ್ಮ ಗೆಳ್ಯಾರ ಗುಟ ಕೂಡಿ ನಲಿದಾಡೊದನ್ನ ಕಣ್ತುಂಬ ನೋಡ್ಬೇಕನಸ್ತದ. ಅಂದ್ಹಾಂಗ ಬಟ್ಟಿ ಅಂದಕೂಡ್ಲೆ ನೆಪ್ಪಾತು. ಎಲ್ಲ ಹಬ್ಬಕ್ಕು ಹೊಸ ಬಟ್ಟಿ ಕೊಡ್ಸೊ ರೂಢಿ ಇದ್ರ ಹೋಳಿ ಹುಣ್ಣಿವಿ ಗೆ ಮಾತ್ರ ಮಕ್ಳು ಏನಾರ ಸ್ವಲ್ಪ ಚೊಲೊ ಅದೂ ಬಿಳಿ ಬಟ್ಟಿ ಹಾಕ್ಕೊಂಡಿದ್ರಾ ಮೊದ್ಲು "ಏ ತಮ್ಮ ಯಾವಾರ ಹಳೆ ಬಟ್ಟೆ ಹಾಕ್ಕೊ" ಅಂತ ಗಂಟು ಬಿದ್ದಿರ್ತೀವಿ. ಯಾಕಂದ್ರ ಈ ಹಬ್ಬದ ಮಜಾನ ಬ್ಯಾರೆ.

ಆಚರಣೆ ಒಂದ ಆದ್ರು ನಮ್ಮ ನಾಡಿನ ಬ್ಯಾರೆ ಬ್ಯಾರೆ ಭಾಗದಾಗ ಹೋಳಿ ಹುಣ್ಣಿವಿನ ನಮು-ನಮೂನಿ ಆಚರಸ್ತಾರ. ರಾಯಚೂರು ಕಡಿಯಂವಾನಾದ ನಾನು ಉತ್ತರ ಕರ್ನಾಟಕದ ಊರುಗಳಲ್ಲಿ ಓದ್ಬೇಕಾದ ಪ್ರಸಂಗ ಬಂದು ಧಾರವಾಡದಲ್ಲೂ ಒಂದಷ್ಟು ವರ್ಷ ಇದ್ದೆ. ಆದ್ರೆ ನಾವ್ ಚಿಕ್ಕವರು ಇದ್ದಾಗ ನಮ್ ಊರಿನ ಹನ್ಮಪ್ಪನ ಗುಡಿ ಮುಂದ ಹುಣ್ಣಿವಿ ರಾತ್ರಿ ಕಾಮಣ್ಣನ ಗೊಂಬಿ ಮಾಡಿ ಅದ್ರ ಸುತ್ತ ಕಟ್ಟಿಗಿ ಕುಳ್ಳು ಸೇರಿಸಿ ಬಡಾನ ಬೆಂಕಿ ಹತ್ತಂಗಿಲ್ಲಂತ ಸೀಮೆಣ್ಣೆ ಸುರ್‍ದು ಉರಿ ಹಚ್ಚಿ ಅದರ ಸುತ್ತ ಲಬೋ ಲಬೋ ಅಂತ ಹೊಯ್ಕೊತ್ತಿದ್ದೀವಿ. ಹಂಗ ಕುಣಿದು ನಗಾಡಿ ಬೆಂಕಿ ಆರೊ ಮಟ್ಟ ಅಲ್ಲೆ ಇದ್ದು ಸಣ್ಣ ಹುಡ್ಗುರೆಲ್ಲ ಮನಿಗಿ ಹೋಗ್ತಿದ್ವಿ ದೊಡ್ಡೋರು ಹನ್ಮಪ್ಪನ ಕಟ್ಟೀಗೆ ಮಲ್ಗತಿದ್ರು. ಗಮ್ಮತ್ತು ನಡಿಯೋದೆ ಆವಾಗ. ಹಂಗ ಕಟ್ಟೀಗೆ ಮಲ್ಕೊಂಡೋರು ನಿದ್ದಿ ಮಬ್ಬಿನ್ಯಾಗ ಇರ್ಬೇಕಾದ್ರ ಅವರದೇ ವಾರಿಗೆಯವರು ಮಲ್ಕೊಂಡೋರ ಮಾರಿ ತುಂಬ ಮಸಿ ಬಳ್ದು ಇಲ್ಲ ತಲಿಗೆ, ಮೀಸಿಗೆಲ್ಲ ಬಿಳಿ ವಾರ್ನೀಸ್ (white paint varnish) ಹಚ್ಚಿ ಅಲ್ಲಿಂದ ಓಡ್ತಿದ್ರು. ಇನ್ನು ಬೆಳಿಗ್ಗೆ ಎದ್ದು "ರೂಪಾಂತರ" ಆದ ಆ ದೇಹ ಒಬ್ಬರನ್ನ ನೋಡಿ ಒಬ್ರು "ಲೇ ನಿನ್ ಮುಸುಡಿ ನೋಡು ಹೆಂಗೈತಿ" ಅಂದ್ರ ಮತ್ತೊಬ್ಬಾಂವ "ಹೌದ್ಲೇ...ಮುದುಕ ನಿನ್ ಮಾರಿ ನೋಡ್ಕ ಮಂಗ್ಯಾನ್ ಗತಿ ಐತಿ" ಅನ್ಕೋತಾ ನಗಾಡೋರು. ಇನ್ನು ಬೆಳಿಗಿನ ಹಬ್ಬ ಅಂತು ಹಳೇ ಬಟ್ಟಿ ಹಕ್ಕೊಂಡು ಹೆಚ್ಚಾಗಿ ಮಾಮ, ಅಳಿಯ ಅತ್ತಿ ಆಗೋರ ಮನೀಗೆ ಹೋಗಿ ಆದಷ್ಟು ಬಣ್ಣ ಹಚ್ಚಿ (ತಪ್ಪಿಸಿಗೊಂಡ್ರ ಗುದ್ದಾಡಿ) ಸುತ್ತ ಲಬೋ ಲಬೋ.. ಹೊಯ್ಕೊಂಡು ಬರೋರು. ಇನ್ನ ಅವತ್ತ ರೇಡಿಯೊದಾಗ...

ಬಣ್ಣಾ ನನ್ನ ಒಲವಿನ ಬಣ್ಣಾ
ನನ್ನ ಬದುಕಿನ ಬಣ್ಣಾ...
ನೀ ನಕ್ಕರೆ ಹಸಿರು ಉಲ್ಲಾಸದ ಉಸಿರು
ನೂರಾಸೆಯ ಚಿಲುಮೆಯ ಬಣ್ಣಾ ಬಣ್ಣಾ ಬಣ್ಣಾ...

ಅಂತ ಹಾಡು ತೇಲಬೇಕಾದರೆ ಅಲ್ಲಲ್ಲಿ ಬಾಗಿಲ ಸಂದಿಗೆ ನಿಂತ ಅದೆಷ್ಟೋ ಸುಹಾಸಿನಿಯರು ತಮ್ಮ ಮನದ ವಿಷ್ಣುವರ್ಧನಗಳತ್ತ ಬರಿ ಕಣ್ಣಷ್ಟ ಮಿಟುಕಿಸಿ ಮಾಯ ಆಗ್ತಿದ್ದು ನೆನಪೈತಿ.

ಇನ್ನು ಧಾರವಾಡದಾಗಂತು ದರವೊಂದು ಹೋಳಿ ಹುಣ್ಣಿವಿಗೆ ಎಷ್ಟು ಸಾಧ್ಯಾನೊ ಅಷ್ಟು ಉಡಾಳತನ ತೋರಿಸ್ತಿದ್ವಿ. ಯಾವನಾದ್ರು "ಏ ದೋಸ್ತ ನಂಗ ಈ ಹಬ್ಬ ಆಗಿ ಬರೊದಿಲ್ಲ ಬಣ್ಣ ಹಚ್ಚಬ್ಯಾಡ್ರ ಮತ್ತ" ಅಂದ್ರ ಮುದ್ದಾಂ ಅವನ್ನ ಹಿಡಿದು ಚೊಲೊ ಮೈ ತುಂಬ ಬಣ್ಣ ಹಚ್ಚ ಅಬ್ ಅಬ್ ಅಬ್ ಅಂತ ಹೊಯ್ಕೊಂಡು ಅಂತವರ್‍ನು ಜೊತಿಗಿ ಎಳ್ಕೊಂಡು ಹೋಗೋರು. ಕೆ.ಸಿ.ಡಿ ಕಾಲೇಜಿನ ಸುತ್ತ-ಮುತ್ತಲ ಮಿಚಿಗನ್ ಕಂಪೌಂಡ್, ಸಪ್ತಾಪೂರ ಬಾಂವಿ, ಆಕಾಶವಾಣಿ ಆಫೀಸ್ ಎದುರು, ಉದಯ ಹಾಸ್ಟೇಲ್ ಸರ್ಕಲ್, ಮಾಳಮಡ್ಡಿ, ಹಿಂದಿ ಪ್ರಚಾರ ಸಭಾ ಹಂಗ ಆಡಕೋತ ಹೋಗಿ ಹೆಡ್ ಪೋಸ್ಟಾಸಿನ ಎದುರು ಒಂದು ಗ್ರೂಪ್ ಫೋಟೊ ಇಳಿದು ಸಪ್ಪಗೆ ಮಾರಿ ಇಳಿಬಿಟ್ಟುಗೊಂಡು ಹಾಸ್ಟೇಲ್ಗೆ ವಾಪಾಸ ಆಗ್ತಿದ್ವಿ. ಬಣ್ಣ ಆಡೋ ಮಟ್ಟ ಆಡಿ ವಾಪಾಸ ಹಾಸ್ಟೇಲ್ ರೂಮಿಗೆ ಬಂದಾಗ ನೋಡ್ಬೇಕ್ರಿ ನಮ್ ಅವಸ್ತಾ ಬಟ್ಟಿಯೆಲ್ಲ ಹರ್‍ಕೊಂಡು, ಯಾವ್ದೋ ಅನ್ಯಗ್ರಹದ ಜೀವಿಗಳ್ಹಂಗ ತಯಾರಾಗಿಬಿಡ್ತಿದ್ವಿ. ಇನ್ನು ಹಚ್ಕೊಂಡ ಬಣ್ಣ ತೊಳಿಯೋದ ಮತ್ತೊಂದು ಮಜಾ. ತಾಸುಗಟ್ಟಲೆ ಬಾತ್ ರೂಮಿನ್ಯಾಗ ತಿಕ್ಕಿ ತಿಕ್ಕಿ ತೊಳ್ದ್ರು ಮಾರಿ ಮ್ಯಾಲೆ ಬಣ್ಣ ಹಂಗ ಉಳಿಯೋದು.

ಆದ್ರ ಹೆಚ್ಚಿಗಿ ಅಲ್ಲಿ ಮಂದಿ ಗುಟ ಬಣ್ಣ ಆಡಾಕ ಹೋಗ್ತಿದ್ದಿಲ್ಲ. ಆದರೆ ಬಣ್ಣ ಆಡಿದ ಅಷ್ಟು ವರ್ಷಾನು ತಪ್ಪಲಾರದ್ಹಂಗ ಕೆ.ಸಿ.ಡಿ ಕಾಲೇಜ್ ಪ್ರಿನ್ಸಿಪಾಲರ ಮನೆ ಎದುರಿಗಿನ ಕಾವೇರಿ ಹಾಸ್ಟೆಲ ಮುಂದ ಕನಿಷ್ಠ ಎರಡು-ಮೂರು ಸರ್ತಿ ಹಾಯೋದನ್ನ ತಪ್ಪಿಸಿದ್ದಿಲ್ಲ. ಒಳಗಿಂದ ಹುಡಗೀರು ನಮ್ಮ ಅವತಾರ ನೋಡಿ ಮುಸಿ ಮುಸಿ ನಕ್ಕಿದ್ದೆ ನಕ್ಕಿದ್ದು. ಮತ್ತೆ ಮಾರನೇಯ ದಿನ ಇಡೀ ಕ್ಲಾಸ್ ರೂಮಿನ್ಯಾಗ ಅದರದೇ ಚರ್ಚಾ ಆಗಿ ಕ್ಲಾಸಿಗೆ ಬಂದ ಮಾಸ್ತಾರರ ಮುಖದ ಮ್ಯಾಲ ಅಳಿಯದೇ ಉಳಿದ ಹಠ-ಮಾರಿ ಬಣ್ಣ ನೋಡಿ "ಹೆಂಗಾಯ್ತ್ರೀ ಸರಾ ಹಬ್ಬ..." ಅಂತ ನಾವು ಕೇಳಿದ್ರಾ "ನಮ್ದೇನ್ ಬಿಡ್ರೋ...ನಿಮ್ಮಷ್ಟು ಜೋರ ಅಗಿಲ್ಲ" ಅಂತ ಹುಡ್ಗಿರ ಹಾಸ್ಟೇಲ್ ಕಡೆ ಕೈ ಮಾಡಿ ತೋರ್‍ಸಿ ಚಾಷ್ಟಿ ಮಾಡೋರು. ಏನಾ ಅನ್ರೀ ಎಷ್ಟೇ ಹಬ್ಬ ಇದ್ರು ಹೋಳಿ ಹುಣ್ಣಿವಿ ಹಂಗ ಅಲ್ಲ ಬಿಡ್ರೀ... ಆದ್ರೆ ಇಗೀಗಂತು ತಲಿ ಮ್ಯಾಲ ತತ್ತಿ ಹೊಡಿಯೋದು, ಆಯಿಲ್ ಪೇಂಟ್ ಹಚ್ಚೋದು ಮತ್ತ ಕೆಲವುಕಡೆ ರೊಕ್ಕಕ್ಕ ಪೀಡಿಸೋದು ಹೆಚ್ಚಾಗಿ ಹೋಳಿ ಹುಣ್ಣಿವಿ ಅರ್ಥಾನ ಕಳ್ಕೊಳ್ಳಕತ್ತೈತಿ.

● ರಮೇಶ ಅರೋಲಿ

# ಬಣ್ಣದೋಕುಳಿ...

ಫಾಲ್ಗುಣ ಶುಕ್ಲ ಪಕ್ಷದ ಹುಣ್ಣಿಮೆಯಿಂದು
ರಂಗು-ರಂಗಿನೋಕುಳಿಯಾಡುವ ಶುಭ ದಿನವಿಂದು.
ಎಲ್ಲೆಲ್ಲೂ ಪಸರಿಸಿದೆ ವಿಧ-ವಿವಿಧ ಬಣ್ಣಗಳ ರಂಗು
ತರುತಿದೆ ಹೋಳಿ ಹಬ್ಬದ ಮತ್ತೇರಿಸುವ ಗುಂಗು.

ಜೀವನದಲ್ಲಿ ಹೊಸ ಬಣ್ಣಗಳ ಆಗಮನ
ಹಳೆಯ ಬಣ್ಣಗಳೊಡನೆ ಪುನರ್ಮಿಲನ.
ಇದುವೇ ರಂಗಿನ ಹಬ್ಬ ಹೋಳೀಹುಣ್ಣಿಮೆ,
ಬೆಳೆಯಲಿ ಸ್ನೇಹದ ಜೊತೆಗೆ ಒಲುಮೆ-ನಲುಮೆ.

ಜಾತಿ-ಮತ, ಧರ್ಮದ ಅಡಚಣೆಯಿಲ್ಲಾ ಇದರಲ್ಲಿ
ಸಾಮಾಜಿಕ ಸೌಹಾರ್ದ್ಯದ ಸೇತುವೆ ಕಟ್ಟಬಹುದುದಿಲ್ಲಿ,
ಸಮರಸ ಜೀವನಕ್ಕೆ ಬೇಕು ಮುದ ಕೊಡುವ ಮೋಜು
ಆನಂದಿಸಲು ಕಾರಣಬೇಕೆ-ಬಿಡಿ ಬೇಡವಾದ ಗೋಜು.

ಕೃಷ್ಣನ ಕೈಯಲ್ಲಿದ್ದ ರಂಗಿನ ಪಿಚಕಾರಿಯ ನೋಡಿ
'ಬೇಡಾ ಕೃಷ್ಣಾ..ಬೇಡಾ' ಎಂದೋಡುತ್ತಿದ್ದರು ಗೋಪಿಕೆಯರು,
ಗೋಪಾಲನ ಚೆಲ್ಲಾಟಕೆ ಹುಸಿ ಮುನಿಸ ತೋರಿದರೂ
ಗೊತ್ತಿಲ್ಲದೇ ರಂಗು-ರಂಗಾಗಲು ಹವಣಿಸುತ್ತಿದ್ದರವರು..

ತನ್ನಂತ್ಯವನ್ನೂ ಲೆಕ್ಕಿಸದೆ ಮನ್ಮಥ ಅಂದು
ಬಿಟ್ಟಿದ್ದ ರಂಗು ರಂಗಿನ ಪ್ರೇಮದ ಹೂಬಾಣ.
ರತಿಯ ಪ್ರೀತಿಯ ಮೊರೆಯನ್ನೂ ಕೇಳದೆ
ಜಗತ್ ಕಲ್ಯಾಣಕೆ ಬಲಿಯಾಗಿದ್ದ ಆ ಧೀರ ಮದನ.

ಬಣ್ಣದೋಕುಳಿಯಾಡುವ ಈ ರಂಗಿನ ಹುಣ್ಣಿಮೆಯಂದು
ಸುಡಬೇಕು ಕೆಟ್ಟದ್ದನ್ನು ಬಿಡಬೇಕು ಕಾಮ- ಕ್ರೋಧವನ್ನು.
ಸುತ್ತ-ಮುತ್ತಲಿನ ಹಿರಣ್ಯ ಕಶ್ಯಪರ ವಧೆಯಾಗಬೇಕು
ನಿಶ್ಚಿಂತೆಯಾಗಿ ಎಲ್ಲರೂ ಸಮರಸ ಬಾಳ್ವೆ ಮಾಡಬೇಕು.

● ಸವಿತಾ ಇನಾಮದಾರ್

# ಕಾವೇರಿಯಿಂದ ಕಾಶಿಯವರೆಗೂ ಕನ್ನಡದ ಕಂಪು– ಅಖಿಲ ಭಾರತ ಹೊರನಾಡ ಕನ್ನಡಿಗರ ಎರಡನೇ ಮಹಾಮೇಳ

ಕಾಶಿ ನೋಡುವ ಮೊದಲು ನನಗೆ ಗೊತ್ತಿದ್ದುದು ಮತ್ತು ನನ್ನ ಮನಃಪಟಲದಲ್ಲಿ ಬರುತ್ತಿದ್ದುದು 'ಕಾಶಿ ವಿಶ್ವನಾಥ' ಒಬ್ಬನೇ. ಈಗ ಕಾಶಿ ಎಂದಾಕ್ಷಣ ಕಣ್ಣಿಗೆ ಕಟ್ಟುವುದು :

*ಜನನಿಬಿಡದಲ್ಲಿ ಹೂತು ಹೋದ 'ಕಾಶಿ ವಿಶ್ವನಾಥ'*
*ಸಂದು ಗೊಂದಿಗಳ ಕೊಳಕು ಗಲ್ಲಿಗಳು,*
*ಎಲ್ಲೆಲ್ಲೂ ಕಸ, ಗಲೀಜು, ಗಾಬರಿ ಹುಟ್ಟಿಸುವ ಜನಜಂಗುಳಿಯ ಜಾತ್ರೆ,*
*ಸೈಕಲ್ ರಿಕ್ಷಾಗಳು, ಗಾಡಿಗಳು ಟ್ರಾಫಿಕ್ ಜಾಮು,*
*ಸಾಧು ಸನ್ಯಾಸಿಗಳು, ಕಲುಷಿತವಾದ ಗಂಗೆ,*
*ಮೋಕ್ಷಕ್ಕಾಗಿ ಕಾಯುತ್ತಿರುವ ಹೆಣಗಳ ಸಾಲು*
*ಬೆನ್ನು ಬಿದ್ದು ಕಾಸು ಕೀಳುವ ಪಂಡಾಗಳು,*
*ಮತ್ತು . . .*

ಅಗಾಧ ಭಕ್ತ ಸಮೂಹ......ಇಲ್ಲೇನೋ ನಿಗೂಢವಾದದ್ದು ಇದೆ, ಇದನ್ನೆಲ್ಲ ಕ್ಯಾಮರಾದಲ್ಲಿ ಸೆರೆಹಿಡಿದು, ಬಗೆ ಬಗೆದು ನೋಡುತ್ತೇವೆನ್ನುವ ವಿದೇಶಿಯರ ಬೆರಗು ನೋಟ!

ಅಲ್ಲದೇ......

ಮಣ್ಣಿನ ಕುಲ್ಹಡದಲ್ಲಿ ಮೆಲ್ಲುವ ಗಟ್ಟಿ ಮೊಸರಿನ ಲಸ್ಸಿ ಮತ್ತು ಮಲಾಯಿ ರಬಡಿ ರುಚಿ, ಠಂಡಾಯಿ, ಜನಪ್ರಿಯ ಬನಾರಸಿ ಪಾನ್ –ಬೀಡ ರುಚಿ, ಪಾನೀ ಪುರಿ, ಕಚೋಡಿಗಳ ಕರಿದ ಪರಿಮಳ, ಕುಶಲಗಾರನ ಗಂಟು ಗದಡಿಯಲ್ಲಿ, ಮಳಿಗೆ ಅಂಗಡಿಗಳಲ್ಲಿ ಬನಾರಸಿ ಸೀರೆಗಳ ನವಿರು ನವಿರಿನ ಪದರಿನಲ್ಲಿ ಮೆಲ್ಲಗೇ ರೆಪ್ಪೆಯರಳಿಸುವ ಕಾಶಿ !

ಹಾಗೇ.........

ದಿನ ಕಂತುತ್ತಿದ್ದಂತೆ ಕೊನೆಗೆ ಗಂಗೆಯ ತಟದಲ್ಲಿ ಎಲ್ಲರೂ ಒಂದಾಗಿ ಕಾಯುವುದು ಸಂಜೆಯ ಗೋಧೂಳಿಯ ಲಾಲಿಮದಲ್ಲಿ ಭಕ್ತಿಭಾವಪರವಶರಾಗಿ ಎಲ್ಲವನ್ನೂ ಮರೆಸುವ, ಮೈ ನವಿರೇಳಿಸುವ ಗಂಗೆಯ ಆರತಿ. ನಮ್ಮ ಸನಾತನ ಭಾರತೀಯತೆಯ ಜೀವಂತ ಸಂಸ್ಕೃತಿಯ ತಾಣ. ನಾ ಕಂಡ ಕಾಶಿ.

ವೇದ ಪುರಾಣ ಕಾಲದಿಂದಲೂ ಕಾಶಿಗೆ ಮಹತ್ವದ ಸ್ಥಾನವಿದೆ. ರೋಮ್ ನಂತರ ಜಗತ್ತಿನ ಅತೀ ಪುರಾತನ ನಗರಗಳಲ್ಲೊಂದು ಎಂಬ ಪ್ರತೀತಿಯಿದೆ. ಸಾವಿರಾರು ವರ್ಷಗಳ ಚಾರಿತ್ರಿಕ ಹಾಗೂ ಪೌರಾಣಿಕ ಐತಿಹ್ಯವಿದೆ. ಶಿವನ ತ್ರಿಶೂಲದ ಮೊನೆ ಮೇಲೆ ನಿಂತ ನಗರಿಯೆಂದು ಹೇಳುತ್ತಾರೆ. ಗೌತಮ ಬುದ್ಧನ ಕಾಲದಿಂದಲೂ ಕಾಶಿ ರಾಜ್ಯದ ರಾಜಧಾನಿ ವಾರಣಾಸಿಯಾಗಿತ್ತು. ಬುದ್ಧ ಬೋಧಗಯಾದಲ್ಲಿ ಜ್ಞಾನೋದಯ ಪಡೆದ ನಂತರ ಸಾರಾನಾಥದಲ್ಲಿ ತನ್ನ ಮೊದಲ ಉಪದೇಶ ನೀಡಿದ್ದನ್ನೆಂದು ಬೌದ್ಧ ಯಾತ್ರಾರ್ಥಿಗಳಿಗೆ ಇದು ಪುಣ್ಯಕ್ಷೇತ್ರ. ಆ ಸ್ಥಳದಲ್ಲಿಯೇ ಅಶೋಕನು ಧಮೇಕ್ ಸ್ತೂಪ ನಿರ್ಮಿಸಿದನು. ಮತಮಾನ್ಯದ ಮರಿಶಿಷ್ಯರು, ದೀಕ್ಷಾರ್ಥಿಗಳಿಗೆ, ಯತಿ–ಸನ್ಯಾಸಿ, ಸಂತರಿಗೆ, ಪಂಡಿತರಿಗೆ ಸಂಸ್ಕೃತ ವೇದಾಧ್ಯಯನಕ್ಕೆ ಹೆಸರಾದ ನಗರ. ಖ್ಯಾತ ಬನಾರಸ್ ಘರಾನಾದ ಶಹನಾಯಿ ವಾದಕ ಬಿಸ್ಮಿಲ್ಲಾ ಖಾನ್ ಕಾಶಿ ವಿಶ್ವನಾಥನ ದೇವಸ್ಥಾನದಲ್ಲಿ ಕುಳಿತು ಶಹನಾಯಿ ನುಡಿಸುತ್ತಿದ್ದರಂತೆ. ಹೀಗೆ ಹಿಂದೂ, ಬೌದ್ಧ, ಜೈನ, ಇಸ್ಲಾಂ ಮುಂತಾದ ಧಾರ್ಮಿಕ ಅನುಸಂಧಾನದ ನಗರಿ ಕಾಶಿ– ಧರ್ಮ, ಸಂಸ್ಕೃತಿ, ಆಧ್ಯಾತ್ಮ, ಸಂಗೀತ ಮತ್ತು ಕಲೆಗಳ ತವರಾಗಿತ್ತು.

ಇನ್ನೊಂದು ನಂಬಿಕೆಯೆಂದರೆ–ಹಿಂದೆ ಕಾಶಿಯಾತ್ರೆಗೆ ಹೋಗುವುದು ಎಂದರೆ 'ನೇರ ಸ್ವರ್ಗಕ್ಕೆ ಯಾತ್ರೆ' ಅನ್ನುತ್ತಿದ್ದರು. 'ಕಾಶೀಯಾತ್ರೆ, ಸ್ಮಶಾನಯಾತ್ರೆ ಎರಡೂ ಒಂದೇ', ಹೋದವರು ಹಿಂತಿರುಗಿ ಬರುವುದಿಲ್ಲ, ಎಂದು ಯಾತ್ರೆ ಹೊರಟವರನ್ನು ಕರೆದು ಸತ್ಕರಿಸಿ, ಪಾದಪೂಜೆ ಮಾಡಿ ತಮ್ಮ ಕೈಲಾದ ಕಾಣಿಕೆ ಸಲ್ಲಿಸಿ ಕಳುಹಿಸಿಕೊಡುತ್ತಿದ್ದರಂತೆ. ಹೀಗೆ ಅಂತೆ ಕಂತೆಗಳ ಹಲವಾರು ಕತೆಗಳನ್ನು ಕೇಳಿ 'ಕಾಶಿ'ಯ ಬಗೆಗೆ ಆಗಾಧ ಕುತೂಹಲವಿದ್ದೇ ಇತ್ತು. ಇನ್ನು ಮದುವೆ ಸಂದರ್ಭದಲ್ಲಿ ನಡೆಯುವ 'ಕಾಶೀಯಾತ್ರೆ' ಶಾಸ್ತ್ರದ ಬಗ್ಗೆ ನಿಮಗೆಲ್ಲ ಗೊತ್ತೇ ಇದೆ. ಕಾಶೀಯಾತ್ರೆಗೆ ಹೊರಟವರನನ್ನು ತಡೆದು ನಿಲ್ಲಿಸಿ, ಉಪಚರಿಸಿ, ಒಲಿಸಿ ಮದುವೆ ಮಂಟಪಕ್ಕೆ ಕರೆತರುವುದು ವಾಡಿಕೆ. ಈ ಶಾಸ್ತ್ರದ ನಂತರವೇ ಕನ್ಯಾಪಿತೃ ತನ್ನ ಮಗಳನ್ನು ಆ ವರನಿಗೆ ಧಾರೆ ಎರೆದುಕೊಡುವುದು. ಈ ಸಂಪ್ರದಾಯ ಈಗಲೂ ಕೆಲವು ವರ್ಗದ ಮದುವೆಗಳಲ್ಲಿ ನಡೆದುಕೊಂಡು ಬಂದಿದೆ. ಈ ಎಲ್ಲ ಕಾರಣಗಳಿಂದ 'ಕಾಶಿ' ಎಂದರೆ ಒಂದು ಬಗೆಯ ಅಚ್ಚರಿ.

ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಹಾಗೂ ಕಾಶಿ ಕನ್ನಡ ಸಂಘದ ಸಹಯೋಗದಲ್ಲಿ ಇದೇ ಮೊದಲ ಬಾರಿಗೆ ಕಾಶಿಯಲ್ಲಿ 'ಅಖಿಲ ಭಾರತ ಹೊರನಾಡು ಕನ್ನಡ ಸಂಘಗಳ 2ನೇ ಮಹಾಮೇಳ' ಆಯೋಜಿಸಿದ್ದು ಇದರಲ್ಲಿ ದೆಹಲಿ, ಆಂಧ್ರ, ಮಹಾರಾಷ್ಟ್ರ, ಗುಜರಾತ್, ತಮಿಳುನಾಡು, ಕೇರಳ ಸೇರಿದಂತೆ 18 ರಾಜ್ಯಗಳ ಕನ್ನಡ ಸಂಘಗಳ ಪ್ರತಿನಿಧಿಗಳು ಭಾಗವಹಿಸಿದ್ದರು. ದೆಹಲಿ ಕರ್ನಾಟಕ ಸಂಘದ ಪ್ರತಿನಿಧಿಗಳಾಗಿ ನಾನು, ಉಪಾಧ್ಯಕ್ಷೆ, ಉಷಾ ಭರತಾದ್ರಿ ಹಾಗೂ ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಷನ್ ಪ್ರತಿನಿಧಿಯಾಗಿ ಯಶೋದಾ ಬಂಟ್ವಾಳ್ ಹಾಗೂ ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಪ್ರತಿನಿಧಿಯಾಗಿ, ಜಿ. ಎಂ. ಭಾರತಿ ವಾರಣಾಸಿಯ ಮಹಾಮೇಳದಲ್ಲಿ ಭಾಗವಹಿಸಿದ್ದೆವು. ವಾರಣಾಸಿಯ ಮಹಾತ್ಮಾ ಗಾಂಧಿ ಕಾಶಿ ವಿದ್ಯಾಪೀಠದಲ್ಲಿ ಎರಡು ದಿನಗಳ ಕಾಲ ನಡೆದ ಈ ಮಹಾಮೇಳದ ಉದ್ಘಾಟನಾ ಸಮಾರಂಭದ ಅಧ್ಯಕ್ಷತೆ ವಹಿಸಿದ್ದ ನಾಡೋಜ ಡಾ. ಪಾಟೀಲ್ ಪುಟ್ಟಪ್ಪ ಮಾತನಾಡಿ, 'ದೇಶದ ಯಾವುದೇ ಭಾಗದಲ್ಲಿ ಕನ್ನಡ ಕಲಿಯಲು ಇಚ್ಛಿಸುವ 10 ಮಕ್ಕಳು ಇರುವಲ್ಲಿ ಒಂದು ಕನ್ನಡ ಶಾಲೆ ತೆರೆದು, ಅಲ್ಲಿ ಒಬ್ಬ ಶಿಕ್ಷಕನನ್ನು ನೇಮಿಸುವ ಮೂಲಕ ಕರ್ನಾಟಕ ಸರ್ಕಾರ, ಎಲ್ಲೆಡೆ ಕನ್ನಡ ಡಿಂಡಿಮ ಮೊಳಗಿಸಬೇಕು, ನಮ್ಮ ಶ್ರೇಷ್ಠತೆಯನ್ನು ಇತರರಿಗೆ ಕೊಡೋಣ, ಇತರರ ಶ್ರೇಷ್ಠತೆಯಿಂದ ನಮ್ಮದನ್ನು ಸಮೃದ್ಧಗೊಳಿಸೋಣ' ಎಂಬ ಕಿವಿಮಾತನ್ನು ಹೇಳಿದರು.

ಸಾನಿಧ್ಯ ವಹಿಸಿದ್ದ ಕಾಶಿ ಜಂಗಮವಾಡಿ ಮಠದ ಪೀಠಾಧ್ಯಕ್ಷ ಡಾ. ಚಂದ್ರಶೇಖರ ಶಿವಾಚಾರ್ಯ ಮಹಾಸ್ವಾಮಿ ಮಾತನಾಡಿ, ಪ್ರತಿಯೊಬ್ಬರೂ ಮಾತೃಭಾಷೆ ಮತ್ತು ಮಾತೃಭೂಮಿಯನ್ನು ಸದಾ ಗೌರವಿಸಬೇಕು ಎಂದರು. ಕಾಶಿಯ ಜಂಗಮವಾಡಿ ಮಠವು ಸಹಿಷ್ಣುತೆ ಮನೋಭಾವದ ಸಂಕೇತ. ಜಂಗಮವಾಡಿ ಮಠಕ್ಕೆ ಮೊಘಲ ಸಾಮ್ರಾಜ್ಯದ ಅಕ್ಬರ್, ಷಹಜಹಾನ್, ಔರಂಗಜೇಬ್, ಮೈಸೂರಿನ ನಾಲ್ವಡಿ ಕೃಷ್ಣರಾಜ ಒಡೆಯರ್ ದಾನ ನೀಡಿದ್ದಾರೆ. 6ನೇ ಶತಮಾನಕ್ಕಿಂತ ಹಿಂದಿನ ಇತಿಹಾಸವಿರುವ ಜಂಗಮವಾಡಿ ಮಠ ಕಾಶಿಯ ಮೊದಲ ಮಠ. ಆ ಆಧಾರ ಕ್ರಿ.ಶ. 574 ಕ್ಕೆ ಸೇರಿದ ಕಾಶೀ ನರೇಶ ಜಯನಂದದೇವನು ಕಾಶೀಪೀಠಕ್ಕೆ ಮಾಡಿದ ಭೂದಾನವನ್ನು ಪ್ರಮಾಣೀಕರಿಸುವ ತಾಮ್ರಶಾಸನವಾಗಿದೆ. ಈ ಜಂಗಮವಾಡಿಮಠವು ಕಾಶಿಯಲ್ಲಿರುವ ಮಠಗಳಲ್ಲಿ ಅತ್ಯಂತ ಪ್ರಾಚೀನ ಎಂಬುದು ಚಾರಿತ್ರಿಕವಾಗಿ ಪ್ರಮಾಣಿಸಲಾಗಿದೆ. ಮದನ ಮೋಹನ್



ಮಾಲವೀಯ ಅವರು 1916 ರಲ್ಲಿ ಕಾಶಿ ನರೇಶನಿಂದ ಭೂಮಿ ಕಾಣಿಕೆ ಪಡೆದು ಬನಾರಸ್ ಹಿಂದೂ ವಿಶ್ವವಿದ್ಯಾಲಯವನ್ನು ಸ್ಥಾಪಿಸಿದರು.

ವಾರಣಾಸಿಯಲ್ಲಿ ಕನ್ನಡ ಭಾಷೆಯ ಬೆಳವಣಿಗೆಯಲ್ಲಿ ಜಂಗಮವಾಡಿಮಠ ಮಹತ್ತರ ಪಾತ್ರ ವಹಿಸುತ್ತಾ ಬಂದಿದೆ. ವಾರಣಾಸಿ ಹಿಂದೂ ವಿಶ್ವವಿದ್ಯಾಲಯಕ್ಕೆ 75 ಎಕರೆ ಜಮೀನು ನೀಡಿದೆ. ಅಲ್ಲಿ ಕನ್ನಡ ಅಧ್ಯಯ ಕೇಂದ್ರ ಆರಂಭಿಸಿದೆ. ಸದ್ಬೋಧ ಸಂಸ್ಕೃತ ವಿಶ್ವವಿದ್ಯಾಲಯದಲ್ಲಿ ಕನ್ನಡ ಅಧ್ಯಯನ ವಿಭಾಗ, ಕಾಶಿ ವಿದ್ಯಾಪೀಠದಲ್ಲಿ ಕನ್ನಡ ವಿಭಾಗಗಳನ್ನು ಆರಂಭಿಸಿದೆ. ಈ ಎಲ್ಲ ವಿದ್ಯಾಪೀಠ ಮತ್ತು ವಿಭಾಗಗಳಲ್ಲಿ ಒಬ್ಬ ಕನ್ನಡದ ಪ್ರಾಧ್ಯಾಪಕರನ್ನು ನೇಮಿಸಬೇಕು ಎಂದು ಕರ್ನಾಟಕ ಸರ್ಕಾರವನ್ನು ಸ್ವಾಮಿಜಿ ಅವರು ಕೋರಿದರು. ಕಾಶಿ ಕನ್ನಡ ಸಂಘದ ಜನ್ಮಸ್ಥಾನವೂ ಜಂಗಮವಾಡಿ ಮಠವೇ ಎಂಬುದು ಹೆಮ್ಮೆಯ ವಿಷಯ.

ಕರ್ನಾಟಕ ಸರ್ಕಾರದ ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಪ್ರಧಾನ ಕಾರ್ಯದರ್ಶಿ ಬಸವರಾಜು ದೀಪ ಬೆಳಗಿಸುವುದರ ಮೂಲಕ ಮಹಾಮೇಳಕ್ಕೆ ಚಾಲನೆ ನೀಡಿದರು. ಬಳಿಕ ಮಾತನಾಡಿ, ಎಂಟೂ ಜ್ಞಾನಪೀಠ ಪುರಸ್ಕೃತರ ಎಲ್ಲ ಕೃತಿಗಳನ್ನು ದೇಶದ ವಿವಿಧ ಭಾಷೆಗಳಿಗೆ ಅನುವಾದಿಸಿ, ರಿಯಾಯ್ತಿ ದರದಲ್ಲಿ ಪೂರೈಸುವ ಕಾರ್ಯವನ್ನು ಕರ್ನಾಟಕ ಸರ್ಕಾರ ಕೈಗೆತ್ತಿಕೊಂಡಿದೆ ಎಂದರು.

ಹಿರಿಯ ಸಾಹಿತಿ ಡಾ. ಎಂ.ಎಸ್. ವೃಷಭೇಂದ್ರ ಸ್ವಾಮಿ ಮಾತನಾಡಿ, 'ಉದ್ಯೋಗ ಅರಸಿ ಬೇರೆ ಬೇರೆ ರಾಜ್ಯಗಳಿಗೆ ತೆರಳುವುದು ಸಹಜ. ಪರಭಾಷೆ, ಪರ ಸಂಸ್ಕೃತಿಗಳ ಒತ್ತಡವಿದ್ದರೂ ಸ್ವಾಭಿಮಾನ ಮತ್ತು ಕನ್ನಡ ಅಭಿಮಾನ ಬಿಡಬೇಡಿ, ತಾಯಿ ನೆಲದ ಭಾಷೆ, ಸಂಸ್ಕೃತಿ ಮತ್ತು ಕಲೆ ಮಾನವತ್ವ ಅರಳಿಸುತ್ತವೆ' ಎಂದರು.

ಕಾಶಿ ಕರ್ನಾಟಕ ಸಂಘದ ಅಧ್ಯಕ್ಷ, ಡಾ.ಬಸವಪ್ರಭು ಜಿರ್ಲಿ ಅವರು ಸ್ವಾಗತಿಸಿದರು. ನಿಷ್ಕಲಮಂಟಪ, ಬೈಲೂರು ಶ್ರೀ ನಿಜಗುಣಾನಂದ ಸ್ವಾಮಿಗಳು ಮಲ್ಲಿಕಾರ್ಜುನ ದೇವರು, ಶಿವಕುಮಾರ ಸ್ವಾಮಿ, ಶಿವಣ್ಣ ಬೆಲ್ಲದ, ಶಂಕರ ಹಲಗತ್ತಿ ಇದ್ದರು. ಪ್ರೊ. ಬಿ.ವಿ. ಗುಂಜಟ್ಟಿ ಪ್ರಾಸ್ತಾವಿಕವಾಗಿ ಮಾತನಾಡಿ ಈ ಮಹಾಮೇಳದ ಪರಿಕಲ್ಪನೆಯನ್ನು ಹುಟ್ಟುಹಾಕಿದ ನಾಡೋಜ ಡಾ.ಪಾಟೀಲ್ ಪುಟ್ಟಪ್ಪನವರನ್ನು ಹಾಗೂ ಕನ್ನಡದ ಸಾಕ್ಷಿಪ್ರಜ್ಞೆಯಂತೆ ಬೆಳೆದ ಕರ್ನಾಟಕ ವಿದ್ಯಾವರ್ಧಕ ಸಂಘವನ್ನು ಹುಟ್ಟುಹಾಕಿದ ಮಹನೀಯರನ್ನು ನೆನೆದರು. ಅನಿಲ್ ದೇಸಾಯಿ ಕಾರ್ಯಕ್ರಮ ನಿರ್ವಹಿಸಿದರು.

ವಾರಣಾಸಿ ಹಿಂದೂ ವಿಶ್ವವಿದ್ಯಾಲಯ ಸಂಗೀತ ವಿಭಾಗದ ಡಾ. ಸರಯೂ ಸೊನ್ನಿ ನೇತೃತ್ವದಲ್ಲಿ 20ಕ್ಕೂ ಹೆಚ್ಚು ಕನ್ನಡೇತರ ವಿದ್ಯಾರ್ಥಿಗಳು ನಾಡಗೀತೆ ಹಾಡಿದ್ದು ವಿಶೇಷವಾಗಿತ್ತು.

ಮಧ್ಯಾಹ್ನ 'ಕರ್ನಾಟಕ ಮತ್ತು ಹೊರನಾಡ ಕನ್ನಡಿಗರ' ವಿಷಯವಾಗಿ ನಡೆದ ಗೋಷ್ಠಿಯಲ್ಲಿ ಪತ್ರಕರ್ತ ಶಾ.ಮಂ. ಕೃಷ್ಣರಾವ್, ಡಾ. ತೇಜಸ್ವಿ ಕಟ್ಟೀಮನಿ, ಎಸ್.ಕೆ. ಹೆಗಡೆ, ಡಾ. ಅರವಿಂದ ಯಾಳಗಿ, ಕೃಷ್ಣ ಜೋಷಿ, ಬಾ. ಸಾಮಗ ಮಾತನಾಡಿದರು.

ಮಹಾಮೇಳದ ಎರಡನೇ ದಿನದ ವಿಚಾರಗೋಷ್ಠಿಯಲ್ಲಿ ವಿವಿಧ ವಿಷಯಗಳ ಬಗ್ಗೆ ಡಾ.ಶಾಂತಾ ಇಮ್ರಾಪೂರ, ಪ್ರೊ.ಮಾಲತಿ ಪಟ್ಟಣಶೆಟ್ಟಿ, ಡಾ.ರಹಮತ್ ತರೀಕೆರೆ, ಡಾ.ಕೆ.ಬಿ. ಗೌಡರ್, ಶ್ರೀ ಜಯಪ್ರಕಾಶ್ ಗೌಡ ಹಾಗೂ ಪ್ರೊ. ಪಂಡಿತರಾವ್ ಧರೆಣ್ಣವರ್ ತಮ್ಮ ವಿಚಾರ ಮಂಡಿಸಿದರು.

ನಂತರ 'ಹೊರನಾಡು ಕನ್ನಡಿಗರ ಮನದೊಳಗಿನ ಮಾತ'–ಗೋಷ್ಠಿ, ಅತ್ತ ಗೋಷ್ಠಿಯೂ ಆಗದೇ ಇತ್ತ ಸಂವಾದವೂ ಆಗದೇ ಹೊರನಾಡು ಕನ್ನಡಿಗರ ಮನದಾಳದ ಮಾತುಗಳು ಸ್ವಗತಗಳಾಗೇ ಉಳಿದು ಹೋದವು. ಇಡೀ ಮಹಾಮೇಳದ ಜೀವಾಳವಾಗಿರಬೇಕಿದ್ದ ಈ ಸಂವಾದ ಉಳಿದ ಕಾರ್ಯಕ್ರಮಗಳ ಅಬ್ಬರದಲ್ಲಿ ಅಲಕ್ಷಿಸಲಾಯಿತೇನೋ ಎನಿಸಿತು. ಯಥಾರೀತಿ ಸಮಯದ ಅಭಾವದ ಚಡಪಡಿಕೆಯಲ್ಲಿ ಹೊರನಾಡಿಗರ ಪರಸ್ಪರ ವಿಚಾರ ವಿನಿಮಯ, ಸ್ಪಂದನೆಯಿಂದ ಮೂಡಬೇಕಿದ್ದ ಒಂದು ಸಮಾಧಾನಕರ ಚಿತ್ರಣ ದಕ್ಕಲಾರದೇ ಹೋಯಿತೇನೋ ಎಂಬ ಸಂದೇಹ ಕಾಡತೊಡಗಿತು. ಅಖಿಲ ಭಾರತ ಹೊರನಾಡ ಕನ್ನಡಿಗರ ಮಹಾಮೇಳ ಬರೀ ಒಂದು ಸುಸಜ್ಜಿತ ಪ್ರವಾಸ, ವ್ಯವಸ್ಥಿತ ಊಟ– ತಿಂಡಿ, ಪ್ರವಾಸೀ ತಾಣಗಳ ವೀಕ್ಷಣೆ, ಶಾಪಿಂಗಿಗಷ್ಟೇ ಮೀಸಲಾಗಿ ಉಳಿಯದೇ ಹೊರನಾಡಿಗರನ್ನು ಪರಸ್ಪರ ಹತ್ತಿರ ತರುವ, ತಮ್ಮ ಮಾತುಗಳನ್ನು, ವಿಚಾರಗಳನ್ನು ಹಂಚಿಕೊಳ್ಳುವ ವೇದಿಕೆಯಾಗಬೇಕು. ಹೊರನಾಡಿಗರು ಎದುರಿಸುತ್ತಿರುವ ಸಮಸ್ಯೆಗಳಾವುವು 'ಅದಕ್ಕೆ ತಕ್ಕ ಪರಿಹಾರಗಳೇನು' ಯಾವ ರೀತಿ ಸರಕಾರದ ಗಮನಕ್ಕೆ ತರಬೇಕು–ಹೊರನಾಡಿಗರಿಗೆ ನೀಡಲಾದ ಸೌಲಭ್ಯಗಳ ಕುರಿತು ಮಾಹಿತಿ ನೀಡಿ, ಸೌಲಭ್ಯ ವಂಚಿತರಿಗೆ ತಕ್ಕ ಪರಿಹಾರ ನೀಡುವಲ್ಲಿ ಗಮನ ಹರಿಸಬೇಕು. ಮುಂದೆ ನಡೆಯುವ ಮಹಾಮೇಳಗಳು ಈ ನಿಟ್ಟಿನಲ್ಲಿ ಕಾರ್ಯಕ್ರಮವನ್ನು ಆಯೋಜಿಸುತ್ತವೆಂಬ ಆಶಯ ನಮ್ಮದು. ಮಹಾಮೇಳದ ಆಯೋಜಕರು ಮೊದಲೇ ಹೆಸರು ನೋಂದಾಯಿಸಿದ ಸಂಘಟನೆಗಳ ಪ್ರತಿನಿಧಿಗಳನ್ನು ಹಾಗೂ ಅವರ ಸಮಸ್ಯೆ, ಸಲಹೆಗಳನ್ನೂ ಮೊದಲೇ ಆಹ್ವಾನಿಸಬೇಕು. ಆಗ ಸಮಯದ ಸದುಪಯೋಗ ಪಡೆದಂತಾಗುತ್ತದೆ. ಹೊರನಾಡು ಕನ್ನಡಿಗರ ಮಾಹಿತಿ ಕೈಪಿಡಿಯ ಅಗತ್ಯ ಇದೆಯೆಂಬುದನ್ನು ರಾಜ್ಯದ ಎಲ್ಲ ಪ್ರತಿನಿಧಿಗಳೂ ಒತ್ತಿ ಹೇಳಿದರು. ಗಡಿನಾಡು, ಹೊರನಾಡುಗಳಲ್ಲಿ ಕನ್ನಡ ಭಾಷೆ, ಸಾಹಿತ್ಯ, ಸಂಸ್ಕೃತಿ ಅಭಿವೃದ್ಧಿ ಚಟುವಟಿಕೆಗೆ ನಿರಂತರ ನೆರವು ಒದಗಿಸುವಂತೆ ಕರ್ನಾಟಕ ಸರ್ಕಾರಕ್ಕೆ ಹಕ್ಕೊತ್ತಾಯ ಮಾಡಲಾಯಿತು.

ಅದೇನೆ ಇರಲಿ, ಒಟ್ಟಾರೆ ಎರಡು ದಿನಗಳ ಅಖಿಲ ಭಾರತ ಹೊರನಾಡು ಕನ್ನಡಿಗರ ಮಹಾಮೇಳವನ್ನು ಆಯೋಜಿಸುವಲ್ಲಿ, ನಾಡೋಜ ಡಾ.ಪಾಪು ಅವರ ಕನಸಿನ ಮಹಾಮೇಳವನ್ನು ನನಸಾಗಿಸುವಲ್ಲಿ ಕೈಗೂಡಿಸಿದ 80 ವರ್ಷಗಳ ಸುದೀರ್ಘ ಇತಿಹಾಸ ಹೊಂದಿದ ಕಾಶಿ ಕನ್ನಡ ಸಂಘದ ಅಧ್ಯಕ್ಷ, ಡಾ.ಬಸವಪ್ರಭು ಜಿರ್ಲಿ, ಕಾರ್ಯದರ್ಶಿ, ಡಾ.ಎಸ್.ಪಿ.ಬ್ಯಾಡಗಿ ಹಾಗೂ ಸಮಸ್ತ ಕಾಶಿ ಕನ್ನಡಿಗರ ಉತ್ಸಾಹ, ಪರಿಶ್ರಮ ಕಾರ್ಯವೈಖರಿ ನಿಜಕ್ಕೂ ಪ್ರಶಂಸನೀಯ. ಎಲ್ಲಕ್ಕಿಂತ ಹೆಚ್ಚಾಗಿ ಜೀವನೋತ್ಸಾಹದ ರೂಪಕದಂತಿರುವ 92 ರ ಹರಯದ 'ಪಾಪು' ಅವರು ಧಾರವಾಡದಿಂದ ವಾರಣಾಸಿಗೆ ಎಲ್ಲರೊಡನೆ ರೈಲಿನಲ್ಲಿ ಪ್ರಯಾಣಿಸಿ, ದಣಿವರಿಯದೇ ಅದಮ್ಯ ಉತ್ಸಾಹದಿಂದ ಎರಡೂ ದಿನ ಒಂದರೆಗಳಿಗೆಯೂ ಕೂಡಾ ಅಲುಗಾಡದೆ ಮಹಾಮೇಳದ ಯಶಸ್ಸಿಗೆ ಸಾಕ್ಷೀಭೂತರಾದದ್ದು ನಿಜಕ್ಕೂ ಅಭಿನಂದನೀಯ. ವಿದ್ಯಾವರ್ಧಕ ಸಂಘದ ಪ್ರಧಾನ ಕಾರ್ಯದರ್ಶಿ, ಶಂಕರ ಹಲಗತ್ತಿ ಹಾಗೂ ಸಹಕಾರ್ಯದರ್ಶಿ, ಶಿವಾನಂದ ಭಾವಿಕಟ್ಟಿ ಮತ್ತು ಇತರ ಪದಾಧಿಕಾರಿಗಳು ಕೂಡ ಯಾವುದೇ ಕುಂದು ಕೊರತೆಗಳಿಲ್ಲದಂತೆ ಕಾರ್ಯಕ್ರಮ ಯಶಸ್ವಿಗೊಳಿಸಲು ಶ್ರಮಿಸಿದರು. ಕಾಶಿ ಸಂಘದ ಮಹಿಳೆಯರು ಈ ಮಹಾಮೇಳ ತಮ್ಮ ಮನೆಯ ಶುಭಕಾರ್ಯವೇ ಎಂಬಂತೆ ಹೊರನಾಡಿನಿಂದ ಭಾಗವಹಿಸಿದ ಮಹಿಳೆಯರಿಗೆ ಅರಿಸಿನ–ಕುಂಕುಮ ಬಾಗಿನ ನೀಡಿ ಸಂಪ್ರದಾಯವನ್ನು ಮೆರೆದರೆ, ಜಂಗಮವಾಡಿ ಮಠದ ಶಿವಾಚಾರ್ಯ ಪೂಜ್ಯರ ಸನ್ನಿಧಿ ಧಾರ್ಮಿಕ ಸ್ವರೂಪವನ್ನು ತಂದುಕೊಟ್ಟಿತು.

ಕರ್ನಾಟಕ ಇತಿಹಾಸದಲ್ಲೇ ಮೊದಲ ಬಾರಿಗೆ ಹೊರನಾಡು ಕನ್ನಡ ಸಂಘಟನೆಗಳ ಸಮಾವೇಶವನ್ನು ರಾಜ್ಯದ ಹೊರಗೆ ಆಯೋಜಿಸಿದ ಧಾರವಾಡದ ಕರ್ನಾಟಕ ವಿದ್ಯಾವರ್ಧಕ ಸಂಘ ಕನ್ನಡದ ಮನಸ್ಸುಗಳನ್ನು ಬೆಸೆಯಿತು. ಸಂಸ್ಕೃತದ ತವರು ಕಾಶಿಯಲ್ಲಿ ಕನ್ನಡದ ಡಿಂಡಿಮ ಮೊಳಗಿತು.

● ರೇಣುಕಾ ನಿಡಗುಂದಿ



# ಸಾಹಿತ್ಯ-ಸಂಸ್ಕೃತಿ ಸಮ್ಮೇಳನ




ದೆಹಲಿ ಕರ್ನಾಟಕ ಸಂಘ ಹಾಗೂ ನೃಪತುಂಗ ಕಲಾನಿಕೇತನ(ರಿ) ಬೆಂಗಳೂರು ಇವರ ಸಂಯುಕ್ತಾಶ್ರಯದಲ್ಲಿ 19.02.2012 ಭಾನುವಾರದಂದು ದೆಹಲಿ ಕರ್ನಾಟಕ ಸಂಘದಲ್ಲಿ ಆಯೋಜಿಸಲಾದ ಸಾಹಿತ್ಯ-ಸಂಸ್ಕೃತಿ ಸಮ್ಮೇಳನ ಯಶಸ್ವಿಯಾಗಿ ನಡೆಯಿತು.

ಸಮ್ಮೇಳನದ ಉದ್ಘಾಟನೆಯನ್ನು ಸಣ್ಣ ಕೈಗಾರಿಕಾ ಸಚಿವರಾದ ನರಸಿಂಹನಾಯಕ (ರಾಜೂಗೌಡ) ನೆರವೇರಿಸಿ ಮಾತನಾಡಿದರು. ಕಾರ್ಯಕ್ರಮದಲ್ಲಿ ಪಾಲ್ಗೊಂಡ ದೆಹಲಿ ಕನ್ನಡಿಗರಿಗೆ, ಕಲಾವಿದರಿಗೆ ನಮಸ್ಕಾರ ತಿಳಿಸಿ, ನಾನು ಎರಡು ಬಾರಿ ಶಾಸಕನಾಗಿ ಚುನಾಯಿತನಾಗಿದ್ದೇನೆ. ಮೊದಲ ಬಾರಿಗೆ ಕನ್ನಡ ನಾಡು ಪಕ್ಷದಿಂದ ಗೆದ್ದಿದ್ದೇನೆ. ಕನ್ನಡ ಭಾಷೆ, ಸಂಸ್ಕೃತಿ ಮೇಲೆ ನನಗೆ ಅಪಾರ ಗೌರವ, ಪ್ರೀತಿಯಿದೆ. ಕನ್ನಡಕ್ಕಾಗಿ ದುಡಿಯುವ ಈ ರೀತಿಯ ಕನ್ನಡ ಪರ ಸಂಘ-ಸಂಸ್ಥೆಗಳೊಂದಿಗೆ ನಾನು ಸೇರಿಕೊಳ್ಳುವೆ, ನೃಪತುಂಗ ಕಲಾನಿಕೇತನದ ಅಧ್ಯಕ್ಷರಾದ ಮಾರುತಿ ಬಡಿಗೇರ್ ಅವರು ಕನ್ನಡ ಭಾಷೆ, ಸಂಸ್ಕೃತಿ ಕಲೆಯನ್ನು ರಾಷ್ಟ್ರಮಟ್ಟದ ಬೆಳಕು ಚೆಲ್ಲುವಂತಹ ಉತ್ತಮ ಕೆಲಸ ಮಾಡುತ್ತಿರುವ ಕ್ರಿಯಾಶೀಲ ಸಂಘಟಕರು ಎಂದು ಭಾಷಣ ಮಾಡಿದರು.

ಕನ್ನಡ ಚಿತ್ರರಂಗದ ಹಿರಿಯ ನಟ, ಕರ್ನಾಟಕ ರಾಜ್ಯ ಚಲನಚಿತ್ರ ಕಾರ್ಮಿಕರ ಒಕ್ಕೂಟದ ಅಧ್ಯಕ್ಷರಾಗಿರುವ ಅಶೋಕರವರು ಸಮ್ಮೇಳನದ ಅಧ್ಯಕ್ಷತೆ ವಹಿಸಿ ಮಾತನಾಡಿದರು. ಭಾಷಾವಾರು ಪ್ರಾಂತ್ಯಗಳಾಗಿದ್ದರೆ ಬಹುಶಃ ನನ್ನನ್ನು ನೀವು ಈ ರೀತಿಯಾದ ಪ್ರೀತಿಯ ನಂಟು ಇರುತ್ತಿರಲಿಲ್ಲ. ಅದ್ದರಿಂದ ಭಾಷೆಗೆ ಹಾಗೂ ಪ್ರದೇಶಕ್ಕೆ ಹೆಚ್ಚು ಮಹತ್ವ. ಇದರಿಂದಲೇ ನಮ್ಮ ನಾಡಿನ ಸಂಸ್ಕೃತಿ ಹಾಗೂ ಸಾಹಿತ್ಯ ಎಲ್ಲೆಡೆ ಹರಡಲು ಸಾಧ್ಯವಾಯಿತು ಎಂಬ ಅನಿಸಿಕೆಯನ್ನು ಹೇಳಿದರು. ಅದಲ್ಲದೆ ನಾನೊಬ್ಬ ಕನ್ನಡಿಗನೆಂದು ಹೆಮ್ಮೆಯಿಂದ ಹೇಳಿಕೊಳ್ಳುತ್ತೇನೆ ಎಂದು ಅವರು ಹೇಳಿದರು. ದೆಹಲಿ ಕರ್ನಾಟಕ ಸಂಘ ಹಾಗು ನೃಪತುಂಗ ಕಲಾನಿಕೇತನ ಕಲಾವಿದರಿಗೆ ರಾಷ್ಟ್ರಮಟ್ಟದಲ್ಲಿ ತಮ್ಮ ಪ್ರತಿಭೆಯನ್ನು ತೋರಿಸಲು ಅವಕಾಶ ಕಲ್ಪಿಸಿದಕ್ಕೆ ಅಭಿನಂದನೆ ಸಲ್ಲಿಸಿದರು.

ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಮಾತನಾಡಿ ಕಲೆ, ಸಾಹಿತ್ಯ, ಸಂಸ್ಕೃತಿಯನ್ನು ಪಸರಿಸುವ ನಡೆಯುವ ಉತ್ತಮ ಸಂಘಗಳಿಗೆ ನಮ್ಮ ಸಹಕಾರವಿರುತ್ತದೆ. ನೃಪತುಂಗ ಕಲಾನಿಕೇತನ ಆ ದಿಶೆಯಲ್ಲಿ ಕಳೆದ ನಾಲ್ಕು ವರ್ಷಗಳಿಂದ ನಿರಂತರವಾಗಿ ಕನ್ನಡ ನಾಡಿನ ಕಲಾವಿದರಿಗೆ, ಹೊಸ ಹೊಸ ಪ್ರತಿಭೆಗಳಿಗೆ ವೇದಿಕೆಯಾಗಿ ಕೆಲಸ ಮಾಡುತ್ತಿದೆ, ನಮ್ಮ ಸಂಘದ ಬೆಂಬಲ ನೃಪತುಂಗ ಕಲಾನಿಕೇತನಕ್ಕೆ ಇದೆಯೆಂದು ಅವರು ಹೇಳಿದರು.

ಸಚಿವರಾದ ರಾಜೂಗೌಡ ಹಾಗೂ ಚಿತ್ರನಟ ಅಶೋಕ್ ಅವರನ್ನು ಅಭಿನಂದಿಸಲಾಯಿತು. ಮೈಸೂರಿನ ಡಾ. ಕೆ. ಕುಮಾರ್ ಅವರ ಕೃತಿ ನೃತ್ಯದೀಪಿಕೆ ಬಿಡುಗಡೆ ಮಾಡಲಾಯಿತು. ಮೊದಲಿಗೆ ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷೆ ಶ್ರೀಮತಿ ಉಷಾ ಭರತಾದ್ರಿ ಸ್ವಾಗತಿಸಿದರು, ಜಂಟಿ ಕಾರ್ಯದರ್ಶಿ ಎನ್. ಆರ್. ಶ್ರೀನಾಥ್ ಕಾರ್ಯಕ್ರಮ ನಿರೂಪಿಸಿದರು, ನೃಪತುಂಗ ಕಲಾನಿಕೇತನ ಅಧ್ಯಕ್ಷ ಮಾರುತಿ ಬಡಿಗೇರ್ ವಂದಿಸಿದರು.

## ಸಾಂಸ್ಕೃತಿಕ ಕಾರ್ಯಕ್ರಮಗಳು

ಅಂತರರಾಷ್ಟ್ರೀಯ ಕಲಾವಿದೆ ಜಿ.ವಿ. ಶ್ರೀಲಕ್ಷ್ಮೀ ಬೆಂಗಳೂರು ಇವರಿಂದ ಹಚ್ಚೇವು ಕನ್ನಡದ ದೀಪ ಹಾಡಿಗೆ ನೃತ್ಯದೊಂದಿಗೆ ಸಾಂಸ್ಕೃತಿಕ ಕಾರ್ಯಕ್ರಮ ಆರಂಭವಾಯಿತು. ಕುಮಾರ ಪ್ರದರ್ಶಕ ಕಲೆಗಳ ಕೇಂದ್ರ ಮೈಸೂರಿನ ಕಲಾವಿದರಾದ ಡಾ. ಕೆ. ಕುಮಾರ, ಬೇಬಿಲೇಖ, ಬೇಬಿನಿಧಿ, ಅನಮೋಲ್, ಕವಿತಾಉಮೇಶ್, ಶಿವಾನಿ ಇವರಿಂದ ಭರತನಾಟ್ಯ ಎಲ್ಲರ ಮನಸೆಳೆಯಿತು. ನಾದಸುಧೆ ಸಂಗೀತ ಅಕಾಡೆಮಿ ಬೆಂಗಳೂರಿನ ಕಲಾವಿದರಾದ ವಿದ್ವಾನ್ ಎಸ್, ಶ್ರೀಧರ ರಾವ್, ಇಂದಿರಾ ಸುಬ್ರಮಣ್ಯಂ, ಉಷಾರಾಜನ್, ಕಮಲಾಪ್ರಾಣೇಶ, ಶ್ರೀನಿವಾಸ, ಸುಗಮ ಸಂಗೀತ, ಭಾವಗೀತೆಗಳನ್ನು ಹಾಡಿದರು.

ಸುಮಿತ್ರಾ ಕಲಾತಂಡ ತಿಪಟೂರು ಕಲಾವಿದರಾದ ಸುಮಿತ್ರಾ ಎನ್. ನೀಲಕಂಠಾಚಾರ್, ಪಾರ್ವತಮ್ಮ, ಚೈತನ್ಯ, ಗಂಗಾಧರಯ್ಯ, ರಂಗಗೀತೆಗಳನ್ನು ಪ್ರಸ್ತುತಪಡಿಸಿದರು.

ಶ್ರೀ ಸಾಯಿ ಕಲಾಪ್ರತಿಷ್ಠಾನ ಶಿವಮೊಗ್ಗದ ಕಲಾವಿದರಾದ ವರದಾ ಮಧುಸೂದನ್ ಐತಾಳ್ ಏಕವ್ಯಕ್ತಿ ಯಕ್ಷಗಾನ ಪ್ರದರ್ಶಿಸಿದರು. ಮೈಸೂರು ಜಿಲ್ಲೆಯ ಕೆ.ಆರ್. ನಗರ ತಾಲೂಕಿನ ಎಚ್.ಎಸ್. ಲೋಕೇಶ್ ಶಿಕ್ಷಕರ ಕಲಾತಂಡದಿಂದ ವೀರಗಾಸೆ ಮತ್ತು ಜಾನಪದ ಗೀತೆಗಳನ್ನು ಸುಮಧುರವಾಗಿ ಹಾಡಿದರು.

ಕರ್ನಾಟಕ ಕಲಾ ಮಂಡಲಂ, ರಾಯಚೂರು ಜಿಲ್ಲೆಯ ಕಲಾವಿದರಾದ ಮಂಜುನಾಥ, ಸಿಂಧುಪುಲಶೆಟ್ಟಿ, ವಿಜಯಲಕ್ಷ್ಮೀ, ಸೂರ್ಯಪುಲಶೆಟ್ಟಿ, ಬಿ.ಟಿ. ಮಾನಸ ಇವರು ಭರತನಾಟ್ಯ, ಕುಚುಪುಡಿ ನೃತ್ಯವನ್ನು ಉತ್ತಮವಾಗಿ ಪ್ರದರ್ಶಿಸಿದರು.

ಈ ಕಾರ್ಯಕ್ರಮದಲ್ಲಿ ಭಾಗವಹಿಸಿದ ಕಲಾವಿದರಿಗೆ ಫಲಕ ಮತ್ತು ಪ್ರಶಂಸನೀಯ ಪತ್ರವನ್ನು ಡಾ. ವೆಂಕಟಾಚಲ ಹೆಗಡೆ, ಮಾರುತಿ ಬಡಿಗೇರ್, ಆಂಜನಿ ಗೌಡ, ಎನ್.ಆರ್. ಶ್ರೀನಾಥ್ ವಿತರಿಸಿದರು.

ನಾಡಿನ ವಿವಿಧ ಕ್ಷೇತ್ರಗಳಲ್ಲಿ ಸೇವೆ ಸಲ್ಲಿಸಿದ ಸಾಧಕರಿಗೆ ಭಾರತ ವಿಕಾಸ ರತ್ನ ಹಾಗೂ ರಾಷ್ಟ್ರೀಯ ನೃಪತುಂಗ ಪ್ರಶಸ್ತಿ ಪ್ರದಾನ ಮಾಡಲಾಯಿತು. ದೆಹಲಿಯಲ್ಲಿರುವ ಹೊರನಾಡ ಕನ್ನಡಿಗರಲ್ಲಿ ಕನ್ನಡ ಸೇವೆ ಸಲ್ಲಿಸಿದವರಿಗೆ ಸನ್ಮಾನಿಸಿ ಗೌರವಿಸಲಾಯಿತು.



ಮಹಾಂತೇಶ ನವಲ್‌ಕರ್‌ರ "ನೀರಿನ ನೆರಳು" ಕಥಾ ಸಂಕಲನ ಕೃತಿಗೆ ರೂ. 10 ಸಾವಿರ ನಗದು ಬಹುಮಾನ ಮತ್ತು ಪುರಸ್ಕಾರ ಹಾಗೂ ಅಲ್ಲಾಗಿರಿರಾಜ್‌ರ "ಹಸಿಬಾಣಂತಿ ಮತ್ತು ಗಾಂಧೀ ಬಜಾರ್" ಕವನ ಸಂಕಲನ ಕೃತಿಗೆ 10 ಸಾವಿರ ರೂಪಾಯಿ ನಗದು ಬಹುಮಾನ ಹಾಗೂ ಪುರಸ್ಕಾರ ನೀಡಲಾಯಿತು.

● ಎನ್.ಆರ್. ಶ್ರೀನಾಥ್

# ದೆಹಲಿಯಲ್ಲಿ ನಾಡಪ್ರಭು ಕೆಂಪೇಗೌಡರ 500ನೇ ಜಯಂತೋತ್ಸವ

ಫೆಬ್ರವರಿ 05, 2012 ರಂದು ದೆಹಲಿ ಒಕ್ಕಲಿಗ ಗೌಡ ಸಂಘವು "ನಾಡಪ್ರಭು ಕೆಂಪೇಗೌಡರ 500ನೇ ಜಯಂತಿ"ಯನ್ನು ದೆಹಲಿ ಕರ್ನಾಟಕ ಸಂಘದಲ್ಲಿ ಬಹಳ ವಿಜೃಂಭಣೆಯಿಂದ ಆಚರಿಸಿತು. ಕಾರ್ಯಕ್ರಮದಲ್ಲಿ ಪುಸ್ತಕಬಿಡುಗಡೆ, ಉಪನ್ಯಾಸ ಹಾಗೂ ಅನೇಕ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲಾಗಿತ್ತು. ಖ್ಯಾತ ಗಾಯಕ ಶ್ರೀ ಆನಂದ ಮೊದಲಗೆರೆ ಮತ್ತು ಸ್ಥಳೀಯ ದೆಹಲಿ ಕಲಾವಿದರ ನಾಡಗೀತೆಯ ಗಾಯನದೊಂದಿಗೆ ಶುಭಾರಂಭಗೊಂಡಿತು. ಕಾರ್ಯಕ್ರಮವನ್ನು ಪೂಜ್ಯ ಶ್ರೀಶ್ರೀಶ್ರೀ ನಿರ್ಮಲಾನಂದ ಸ್ವಾಮೀಜಿಯವರು ಉದ್ಘಾಟಿಸಿ ಮಾತನಾಡುತ್ತಾ "ಕರ್ನಾಟಕದಲ್ಲಿ ವಿವಿಧ ಸಮುದಾಯಗಳಿದ್ದು ಅವು ತಮ್ಮ ಅಭಿವೃದ್ಧಿಗಾಗಿ ಸಂಘಟನೆಗೊಂಡು ಶ್ರಮಿಸುತ್ತಿವೆ. ಅದೇ ರೀತಿ ಒಕ್ಕಲಿಗ ಸಮುದಾಯವು ಸಂಘಟನೆಗೊಂಡು ಶ್ರಮಿಸುತ್ತಿರುವುದು ಸಂತೋಷದ ವಿಷಯ. ಈ ಎಲ್ಲಾ ಸಮುದಾಯಗಳಿಗೂ ತಮ್ಮ ಉನ್ನತಿಯ ಪರಿಕಲ್ಪನೆಯ ಬಗೆಗೆ ಸರಿಯಾದ ಮುನ್ನೋಟ ಇರಬೇಕಾದದ್ದು ಅತ್ಯವಶ್ಯಕ. ಮಹಾಕವಿ ಕುವೆಂಪು ಮತ್ತು ಶ್ರೀಶ್ರೀಶ್ರೀ ಬಾಲಗಂಗಾಧರನಾಥ ಸ್ವಾಮೀಜಿಯಂತಹ ಮಹನೀಯರಿಗೆ ಸಮಾಜದ ಬಗೆಗೆ ಒಂದು ಬಗೆಯ ದಾರ್ಶನಿಕ ಮುನ್ನೋಟವಿದ್ದುದ್ದರಿಂದ ಅವರ ಮಾರ್ಗದರ್ಶನದಲ್ಲಿ ಸಮಾಜವು ವಿಶಿಷ್ಟ ಬಗೆಯ ಪ್ರಗತಿಯನ್ನು ಸಾಧಿಸುತ್ತಿದೆ. ಧರ್ಮ ಪ್ರಭು ಕೆಂಪೇಗೌಡರು ಅಂತಹ ಮುನ್ನೋಟವಿದ್ದ ರಾಜನಾದ್ದರಿಂದ ಅವರನ್ನು ದೇಶದ ರಾಜಧಾನಿಯಲ್ಲಿ ಸ್ಮರಿಸಿಕೊಳ್ಳುತ್ತಿರುವುದು ಔಚಿತ್ಯಪೂರ್ಣವಾಗಿದೆ ಎಂದು ತಮ್ಮ ಆಶೀರ್ವಚನದಲ್ಲಿ ನುಡಿದರು.

ಕಾರ್ಯಕ್ರಮದ ಅಧ್ಯಕ್ಷತೆ ವಹಿಸಿದ್ದ ಕನ್ನಡ ಸಾಹಿತ್ಯ ಪರಿಷತ್ತಿನ ಅಧ್ಯಕ್ಷರಾದ ಡಾ. ನಲ್ಲೂರುಪ್ರಸಾದ್ ಅವರು ಮಾತನಾಡುತ್ತಾ ಕಾರ್ಯಕ್ರಮವನ್ನು ಆಯೋಜಿಸಿದ ದೆಹಲಿ ಒಕ್ಕಲಿಗ ಗೌಡ ಸಂಘವನ್ನು ಅಭಿನಂದಿಸುತ್ತಾ, ಬೆಂಗಳೂರು ಕಟ್ಟಿದ ಕೆಂಪೇಗೌಡರ ಇತಿಹಾಸದ ಬಗೆಗೆ ಇನ್ನಷ್ಟು ಆಳವಾದ ಅಧ್ಯಯನ ನಡೆಯಬೇಕಾದ ಅಗತ್ಯವಿದೆ ಹಾಗೂ ಬೆಂಗಳೂರು ಒಕ್ಕಲಿಗ ಸಂಘವು ದೆಹಲಿಯಲ್ಲಿ ಶಿಕ್ಷಣ ಸಂಸ್ಥೆಗಳನ್ನು ತೆರೆದು ಹೊರನಾಡ ಕನ್ನಡಿಗರಿಗೆ ಅಭಿವೃದ್ಧಿಗೆ ನೆರವಾಗಲಿ ಎಂದು ಆಗ್ರಹಿಸಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಲೋಕಸಭಾ ಸದಸ್ಯರಾದ ಶ್ರೀ ಎನ್. ಚೆಲುವರಾಯ ಸ್ವಾಮಿ ಅವರು ತಮ್ಮ ಭಾಷಣದಲ್ಲಿ ಜಗತ್ತಿನ ಭೂಪಟದಲ್ಲಿ ಉಜ್ವಲವಾಗಿ ಬೆಳಗುತ್ತಿರುವ ನಮ್ಮ ಹೆಮ್ಮೆಯ ಬೆಂಗಳೂರು ನಗರವನ್ನು ಕಟ್ಟಿದ ಕೆಂಪೇಗೌಡ ಹಸಿದವರಿಗೆ ಅನ್ನಕೊಟ್ಟು ಬೆಂದ-ಕಾಳಿನ-ಊರು ಬೆಂಗಳೂರಾಗಿರುವ ನಗರವನ್ನು ಕಟ್ಟಿ ಬೆಳೆಸಿದ ಕೆಂಪೇಗೌಡರು ತಮ್ಮ ಆಡಳಿತಾವಧಿಯಲ್ಲಿ ಬೆಂಗಳೂರಿನ ತುಂಬಾ ನೀರು ತುಂಬಿದ ಕೆರೆಗಳನ್ನು, ಸುಂದರ ಉದ್ಯಾನಗಳನ್ನು ನಿರ್ಮಿಸಿದ ಅವರ ಕಾರ್ಯದಕ್ಷತೆ ಮುನ್ನೋಟ ಮತ್ತು ಸೌಂದರ್ಯ ಪ್ರಜ್ಞೆ ವಿಶೇಷವಾದದ್ದು ಎಂದು ನುಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಕರ್ನಾಟಕ ರಕ್ಷಣಾವೇದಿಕೆ ಅಧ್ಯಕ್ಷ ಶ್ರೀ ಟಿ.ಎ. ನಾರಾಯಣ ಗೌಡರು ಮಾತನಾಡುತ್ತಾ ಕೆಂಪೇಗೌಡರು ಯಾರೋ ಕಟ್ಟಿದ ಸಾಮ್ರಾಜ್ಯಕ್ಕೆ ದೊರೆಯಾಗಿ ಆಳ್ವಿಕೆ ನಡೆಸಲಿಲ್ಲ, ಬದಲಾಗಿ ಸ್ವತಃ ತಾವೇ ಕಟ್ಟಿದ ಸಾಮ್ರಾಜ್ಯಕ್ಕೆ ಧರ್ಮ ಪ್ರಭುಗಳಾದವರು ಎಂದರಲ್ಲದೆ ದೆಹಲಿ ಒಕ್ಕಲಿಗ ಗೌಡ ಸಂಘವು ದೆಹಲಿಯಲ್ಲಿ ಸ್ವಂತ ಕಟ್ಟಡ ಹೊಂದುವುದಾದರೆ ಎಲ್ಲಾ ರೀತಿಯ ಸಹಕಾರ ನೀಡುವುದಾಗಿ ಘೋಷಿಸಿದರು.

ಮತ್ತೋರ್ವ ಮುಖ್ಯ ಅತಿಥಿ ಕರ್ನಾಟಕ ವಿಧಾನ ಪರಿಷತ್ ಸದಸ್ಯರಾದ ಶ್ರೀ ಅಶ್ವಥ್ ನಾರಾಯಣ ಮಾತನಾಡುತ್ತಾ ಕೆಂಪೇಗೌಡ ಒಬ್ಬ ಜಾತ್ಯಾತೀತ ಧರ್ಮಪ್ರಭು. ದೂರದೃಷ್ಟಿಯುಳ್ಳ ಇವರು ಮಣ್ಣಿನ ಕೋಟೆಯೊಂದನ್ನು ಕಟ್ಟುವ ಮೂಲಕ ಸುಂದರ ನಗರಕ್ಕೆ ಅಡಿಪಾಯ ಹಾಕಿದರು. ಹೊರನಾಡಿನಿಂದ ಉಪ್ಪಾರರು, ನೇತಾರರು, ತಿಗಳರು ಮುಂತಾದವರನ್ನು ಕರೆತಂದು ಬೆಂಗಳೂರು ಪಟ್ಟಣದಲ್ಲಿ ನೆಲೆಯೂರುವಂತೆ ಮಾಡಿದರಲ್ಲದೆ, ಅಗ್ರಹಾರಗಳನ್ನು ನಿರ್ಮಿಸಿ ಬ್ರಾಹ್ಮಣರಿಗೆ ಆಶ್ರಯ ನೀಡಿದ ಕೆಂಪೇಗೌಡರ ವಿಶಾಲ ಮನೋಭಾವನೆಯನ್ನು ನಾವೆಲ್ಲರೂ ಮೈಗೂಡಿಸಿಕೊಳ್ಳಬೇಕಾದ ಅವಶ್ಯಕತೆಯನ್ನು ಮನದಟ್ಟು ಮಾಡಿದರು.

ಮುಖ್ಯ ಅತಿಥಿಗಳಾಗಿ ಆಗಮಿಸಿದ್ದ ಒಕ್ಕಲಿಗ ಸಂಘ ಬೆಂಗಳೂರಿನ ಕಾರ್ಯಾಧ್ಯಕ್ಷರಾದ ಶ್ರೀ ಎಂ.ಎ. ಆನಂದ ಅವರು ಮಾತನಾಡುತ್ತಾ, ದೆಹಲಿಯಲ್ಲಿ ಹೊರನಾಡ ಕನ್ನಡಿಗರಿಗೆ ನೆರವಾಗಲು ಶಿಕ್ಷಣ ಸಂಸ್ಥೆಗಳನ್ನು ತೆರೆಯಲು ಎಲ್ಲಾ ರೀತಿಯ ಪ್ರಯತ್ನಗಳನ್ನು ಮಾಡುವುದಾಗಿ ಭರವಸೆ ನೀಡಿದರು.





ಇದೇ ಸಂದರ್ಭದಲ್ಲಿ ಕಾರ್ಯಕ್ರಮಕ್ಕೆ ಸಹಕರಿಸಿದ, ಕರ್ನಾಟಕ ನಾಟಕ ಅಕಾಡೆಮಿಯ ಮಾಜಿ ಅಧ್ಯಕ್ಷ ಶ್ರೀ ಶ್ರೀನಿವಾಸ ಜಿ. ಕಪ್ಪಣ್ಣ ಮತ್ತು ಕನ್ನಡವೇ ಸತ್ಯ ಶ್ರೀ ಕೆ.ಆರ್. ರಂಗಣ್ಣ ಹಾಗೂ ವಿಶೇಷ ಆಹ್ವಾನಿತರಾದ ಶ್ರೀ ಬಿ. ಜಯಕುಮಾರ್, ಪತ್ರಕರ್ತರು, ಬಿ.ಬಿ.ಎಂ.ಪಿ. ಸದಸ್ಯರಾದ ಶ್ರೀ ಎಂ.ಬಿ. ಗೋವಿಂದೇಗೌಡ ಕೆಂಪೇಗೌಡ ಅಭಿವೃದ್ಧಿ ಸಮಿತಿ ಗೌರವಾಧ್ಯಕ್ಷರಾದ ಶ್ರೀ ಎಚ್.ಎಂ. ಕೃಷ್ಣಮೂರ್ತಿ, ಕೆಂಪೇಗೌಡ ಕೇಂದ್ರ ಸಮಿತಿ, ಕಾರ್ಯದರ್ಶಿಗಳಾದ ಶ್ರೀ ಮರಿಮಲ್ಲಯ್ಯ, ಹಿರಿಯ ಐ.ಎ.ಎಸ್. ಅಧಿಕಾರಿ ಶ್ರೀಮತಿ ಧನಲಕ್ಷ್ಮೀ, ಐ.ಆರ್.ಎಸ್. ಅಧಿಕಾರಿ ಶ್ರೀ ದರ್ಶನ್ ಗೌಡ ಜೆ. ಮತ್ತು ವಿಶ್ವ ಒಕ್ಕಲಿಗೆ ಡೈರೆಕ್ಟರಿಯ ಸಂಪಾದಕರು ಮತ್ತು ಅಧ್ಯಕ್ಷರಾದ ಶ್ರೀ ಕೆ.ಟಿ. ಚಂದ್ರು, ತುಳುನಾಡು ಡೆವಲಪ್‌ಮೆಂಟ್ ಫೋರಂ ಅಧ್ಯಕ್ಷರಾದ ಶ್ರೀ ವಸಂತ ಶೆಟ್ಟಿ ಬೆಳ್ಳಾರೆ, ಜೀವ ವಿಜ್ಞಾನ ವಿಭಾಗದ ವಿಜ್ಞಾನಿ ಡಾ. ಶಶಿಕುಮಾರ್, ದೆಹಲಿ ಕರ್ನಾಟಕ ಸಂಘದ ಉಪಾಧ್ಯಕ್ಷರಾದ ಶ್ರೀ ಬಿ.ಕೆ. ಬಸವರಾಜು, ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಅಧ್ಯಕ್ಷರಾದ ಶ್ರೀ ಜಿ.ಎಂ. ಲಿಂಗರಾಜು ಮುಂತಾದವರನ್ನು ಸನ್ಮಾನಿಸಲಾಯಿತು.

ಇದೇ ಸಂದರ್ಭದಲ್ಲಿ ಡಾ. ಬಿ. ಪಾಂಡುಕುಮಾರ್, ಇತಿಹಾಸ ಪ್ರಾಧ್ಯಾಪಕರು, ವಿವೇಕಾನಂದ ಕಾಲೇಜು ಬೆಂಗಳೂರು, ಇವರು ಬರೆದ ಬೆಂಗಳೂರು ಕೆಂಪೇಗೌಡ ಕೇಂದ್ರ ಸಮಿತಿ ಪ್ರಕಾಶಿಸಿದ "ನಾಡಪ್ರಭು ಕೆಂಪೇಗೌಡರು" ಎಂಬ ಪುಸ್ತಕವನ್ನು ಡಾ. ನಲ್ಲೂರುಪ್ರಸಾದ್ ಅವರು ಬಿಡುಗಡೆ ಮಾಡಿದರು. ಪುಸ್ತಕದ ಕರ್ತೃಗಳಾದ ಡಾ. ಬಿ. ಪಾಂಡುಕುಮಾರ್ ಅವರು ಈ ಪುಸ್ತಕವನ್ನು ಹಿಂದಿ ಮತ್ತು ಇಂಗ್ಲಿಷ್ ಭಾಷೆಯಲ್ಲಿ ತರುವುದಾಗಿ ಅಭಿಪ್ರಾಯ ವ್ಯಕ್ತಪಡಿಸಿದರು.

ಖ್ಯಾತ ಚಿಂತಕರು ಮತ್ತು ಜಾನಪದ ವಿದ್ವಾಂಸರಾದ ಡಾ. ಪುರುಷೋತ್ತಮ ಬಿಳಿಮಲೆಯವರು "ದೆಹಲಿ ಕನ್ನಡಿಗರು ಮತ್ತು ಕೆಂಪೇಗೌಡರ ಸ್ಮರಣೆ" ಎಂಬ ವಿಷಯದ ಮೇಲೆ ತಮ್ಮ ಪ್ರಾಸ್ತಾವಿಕ ನುಡಿಗಳನ್ನಾಡುತ್ತಾ ಕೆಂಪೇಗೌಡರನ್ನು ಒಂದು ರಾಷ್ಟ್ರೀಯ ಪ್ರಜ್ಞೆಯನ್ನಾಗಿಸುವ ಕೆಲಸವನ್ನು ನಾವೆಲ್ಲರೂ ಜೊತೆಯಾಗಿ ಮಾಡಬೇಕಾಗಿದೆ. ಕರ್ನಾಟಕ ಸರ್ಕಾರ ಈ ನಿಟ್ಟಿನಲ್ಲಿ ದೆಹಲಿಯಲ್ಲಿ ಕನ್ನಡ ಅಧ್ಯಯನ ಕೇಂದ್ರವೊಂದನ್ನು ತೆರೆದು ಕರ್ನಾಟಕದ ಧ್ವನಿಯನ್ನು ರಾಷ್ಟ್ರಮಟ್ಟದಲ್ಲಿ ಬಲಪಡಿಸಲು ಕ್ರಮಕೈಗೊಳ್ಳಬೇಕೆಂದು ಆಗ್ರಹಿಸಿದರು.

ಕೆಂಪೇಗೌಡ ಕೇಂದ್ರ ಸಮಿತಿಯ ಕಾರ್ಯದರ್ಶಿ ಶ್ರೀ ಮರಿಮಲ್ಲಯ್ಯ, ಕೆಂಪೇಗೌಡ ಅಭಿವೃದ್ಧಿ ಸಮಿತಿಯ ಗೌರವಾಧ್ಯಕ್ಷರಾದ ಶ್ರೀ ಎಚ್.ಎಂ. ಕೃಷ್ಣಮೂರ್ತಿ ಅವರುಗಳು ಕಾರ್ಯಕ್ರಮದಲ್ಲಿ ಭಾಗವಹಿಸಿದ್ದರು.

ವಿಶ್ವ ಒಕ್ಕಲಿಗರ ಡೈರೆಕ್ಟರಿ, ಬೆಂಗಳೂರು ಇದರ ಸಂಪಾದಕರು ಮತ್ತು ಅಧ್ಯಕ್ಷರಾದ ಶ್ರೀ ಕೆ.ಟಿ. ಚಂದ್ರು ಪ್ರಾಯೋಜಿಸಿದ ಕೆಂಪೇಗೌಡರ ಭಾವಚಿತ್ರವನ್ನು ಶ್ರೀಶ್ರೀಶ್ರೀ ನಿರ್ಮಲಾನಂದ ಸ್ವಾಮಿಯವರು ಅನಾವರಣಗೊಳಿಸಿದರು ಮತ್ತು ಭಾವಚಿತ್ರವನ್ನು ಎಲ್ಲರಿಗೂ ಉಚಿತವಾಗಿ ವಿತರಿಸಲಾಯಿತು. ಕಾರ್ಯಕ್ರಮದ ಕೊನೆಯಲ್ಲಿ ಶ್ರೀ ನ.ಲಿ. ನಾಗರಾಜು ರಚಿಸಿ, ನಿರ್ದೇಶಿಸಿದ "ಕೆಂಪೇಗೌಡರ ಸೊಸೆ ಸಿರಿದೇವಿ" ಎಂಬ ಐತಿಹಾಸಿಕ ನಾಟಕವನ್ನು ಕಲಾ ನವರಂಗ ತಂಡದವರು ಪ್ರದರ್ಶಿಸಿದರು.

ದೆಹಲಿ ಒಕ್ಕಲಿಗ ಗೌಡ ಸಂಘದ ಅಧ್ಯಕ್ಷರಾದ ಡಾ. ಬಿ.ಟಿ. ಚಿದಾನಂದ ಮೂರ್ತಿ ಅತಿಥಿಗಳನ್ನು ಸ್ವಾಗತಿಸಿದರು. ಸಂಘದ ಖಜಾಂಚಿಗಳಾದ ಶ್ರೀ ಸಿ.ಎಂ. ನಾಗರಾಜ ಕಾರ್ಯಕ್ರಮಕ್ಕೆ ಸಹಕರಿಸಿದವರೆಲ್ಲರನ್ನು ನೆನೆದರು. ಕಾರ್ಯದರ್ಶಿಗಳಾದ ಶ್ರೀ ಪಿ.ಸಿ. ಶ್ರೀನಿವಾಸ ವಂದನಾರ್ಪಣೆ ಸಲ್ಲಿಸಿದರು.

ಒಟ್ಟು ಕಾರ್ಯಕ್ರಮವನ್ನು ಖ್ಯಾತ ನಿರೂಪಕಿ ಶ್ರೀಮತಿ ಭಾನುಮತಿ ಸೋಮಶೇಖರ್, ನಾಗಮಂಗಲ, ಮಂಡ್ಯ ಅಚ್ಚುಕಟ್ಟಾಗಿ ನಿರ್ವಹಿಸಿದರು.

● ಪಿ.ಸಿ. ಶ್ರೀನಿವಾಸ

# ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಪಂದ್ಯಾವಳಿ



ಕ್ರೀಡಾ ಉಪಸಮಿತಿಯ ಅಧ್ಯಕ್ಷರಾದ ಕೆ.ಎಲ್. ಮಲ್ಯ ಅವರ ನೇತೃತ್ವದಲ್ಲಿ 'ಅಂಬಿಕೇಶ್ ಸ್ಮಾರಕ' ಕ್ರಿಕೆಟ್ ಪಂದ್ಯಾವಳಿಯು ಫೆಬ್ರವರಿ 4, 5 ಮತ್ತು 12, 2012ರಂದು ಸಿವಿಲ್ ಸರ್ವಿಸಸ್ ಅಥಾರಿಟಿ ಗ್ರೌಂಡ್, ವಿನಯ್ ಮಾರ್ಗದಲ್ಲಿ ಉದ್ಘಾಟನೆಗೊಂಡಿತು. ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಪಂದ್ಯಾವಳಿಗೆ ಚಾಲನೆ ನೀಡಿದರು. 12 ಓವರುಗಳನ್ನೊಳಗೊಂಡ ಈ ಪಂದ್ಯಾವಳಿಯಲ್ಲಿ ಒಟ್ಟು 10 ತಂಡಗಳು ಭಾಗವಹಿಸಿದ್ದವು.

ಫೆಬ್ರವರಿ 4ರಂದು ಸ್ಟೂಡೆಂಟ್ಸ್ ಇಲೆವೆನ್ ಮತ್ತು ಜನಕಪುರಿ ಕನ್ನಡ ಕೂಟದೊಂದಿಗೆ ನಡೆದ ಮೊದಲ ಪಂದ್ಯದಲ್ಲಿ ಸ್ಟೂಡೆಂಟ್ಸ್ ಇಲೆವೆನ್ ತಂಡವು ಜಯವನ್ನು ಸಾಧಿಸಿತು. ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಮತ್ತು ದೆಹಲಿ ಕನ್ನಡ ಸ್ಕೂಲ್ ಜೂನಿಯರ್ ಟೀಮ್ ಜೊತೆಗೆ ನಡೆದ ಎರಡನೇ ಪಂದ್ಯದಲ್ಲಿ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ವಿಜಯಿಯಾಯಿತು. ದೆಹಲಿ ಕನ್ನಡ ಸ್ಕೂಲ್ ಸೀನಿಯರ್ಸ್ ಟೀಮ್ ಮತ್ತು ಕರ್ನಾಟಕ ಭವನದ ಜೊತೆಗೆ ನಡೆದ ಮೂರನೇ ಪಂದ್ಯದಲ್ಲಿ ಕರ್ನಾಟಕ ಭವನ ತಂಡವು ಕ್ವಾಟರ್ ಫೈನಲ್ ಹಂತವನ್ನು ಸುಲಭವಾಗಿ ಸಾಧಿಸಿತು.

ಫೆಬ್ರವರಿ 5, ರಂದು ದೆಹಲಿ ಒಕ್ಕಲಿಗ ಗೌಡ ಸಂಘ ಮತ್ತು ಕಂಠೀರವ ಕ್ರಿಕೆಟ್ ಕ್ಲಬ್ ಜೊತೆಗೆ ನಡೆದ ನಾಲ್ಕನೇ ಪಂದ್ಯದಲ್ಲಿ ದೆಹಲಿ ಒಕ್ಕಲಿಗೆ ಗೌಡ ಸಂಘವು ಜಯವನ್ನು ಸಾಧಿಸಿತು. ಕಳೆದ ಬಾರಿಯ ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಟ್ರೋಫಿ ತನ್ನದಾಗಿಸಿಕೊಂಡಿದ್ದ ಜೆ.ಎಸ್.ಎಸ್. ಆರ್. ಡಬ್ಲ್ಯು.ಎ. ಕ್ರಿಕಟ್ ಕ್ಲಬ್ ಮತ್ತು ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಜೊತೆಗೆ ನಡೆದ ಐದನೇ ಪಂದ್ಯದಲ್ಲಿ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಕ್ವಾಟರ್ ಫೈನಲ್ ಹಂತವನ್ನು ತಲುಪಿತು. ಕರ್ನಾಟಕ ಇಲೆವೆನ್ ಕ್ರಿಕೆಟ್ ಕ್ಲಬ್, ಗುರ್‌ಗಾಂವ್ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘದೊಂದಿಗೆ ನಡೆದ ಆರನೇ ಮುಖಾಮುಖಿಯಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘವು ಕ್ವಾಟರ್ ಫೈನಲ್ ಹಂತವನ್ನು ತಲುಪಿತು.

ಫೆಬ್ರವರಿ 12, ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಮತ್ತು ಕರ್ನಾಟಕ ಭವನದ ಜೊತೆಗೆ ನಡೆದ ಮೊದಲ ಕ್ವಾಟರ್ ಫೈನಲ್ ಪಂದ್ಯದಲ್ಲಿ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಸೆಮಿಫೈನಲ್‌ಗೆ ಪ್ರವೇಶಿಸಿದರೆ, ದೆಹಲಿ ಒಕ್ಕಲಿಗ ಗೌಡ ಸಂಘ ಮತ್ತು ಸ್ಟೂಡೆಂಟ್ಸ್ ಇಲೆವೆನ್ ತಂಡದೊಂದಿಗೆ ನಡೆದ ಎರಡನೇ ಕ್ವಾಟರ್ ಫೈನಲ್ ಪಂದ್ಯದಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘವು ಸೆಮಿಫೈನಲ್ ಪ್ರವೇಶಿಸಿತು. ಕೊನೆಯಲ್ಲಿ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ಮತ್ತು ದೆಹಲಿ ಒಕ್ಕಲಿಗ ಗೌಡ ಸಂಘದೊಂದಿಗೆ ನಡೆದ ಫೈನಲ್ ಪಂದ್ಯದಲ್ಲಿ ದೆಹಲಿ ಒಕ್ಕಲಿಗ ಗೌಡ ಸಂಘವು ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಟ್ರೋಫಿಯನ್ನು ಎರಡನೇ ಬಾರಿ ತನ್ನದಾಗಿಸಿಕೊಂಡರೆ ಸೌತ್ ಕೆನರಾ ಕ್ರಿಕೆಟ್ ಕ್ಲಬ್ ರನ್ನರ್ ಅಪ್ ಆಗಿ ಎರಡನೇ ಸ್ಥಾನವನ್ನು ತನ್ನದಾಗಿಸಿಕೊಂಡಿತು.

ಜಂಟಿ ಕಾರ್ಯದರ್ಶಿ ಹಾಗೂ ಕ್ರೀಡಾ ಉಪಸಮಿತಿಯ ಸಂಚಾಲಕ ಎನ್. ಆರ್. ಶ್ರೀನಾಥ್ ಹಾಗೂ ಕ್ರೀಡಾ ಸಮಿತಿಯ ಸದಸ್ಯರುಗಳೆಲ್ಲರೂ ಈ ಎಲ್ಲಾ ಪಂದ್ಯಗಳನ್ನು ಶಿಸ್ತು ಬದ್ಧವಾಗಿ ನಡೆಸುವುದರಲ್ಲಿ ಸಹಕರಿಸಿದರು.

## ವಿವಿಧ ಆಟೋಟ ಸ್ಪರ್ಧೆಗಳು

ಫೆಬ್ರವರಿ 12, 2012ರಂದು ದೆಹಲಿ ಪಬ್ಲಿಕ್ ಸ್ಕೂಲ್, ಆರ್.ಕೆ.ಪುರಂನಲ್ಲಿ ವಾಲಿಬಾಲ್, ಥ್ರೋಬಾಲ್ ಹಾಗೂ  ಕಬಡ್ಡಿ ಪಂದ್ಯಗಳು ನಡೆದವು. ಅಲ್ಲದೇ ಫೆಬ್ರವರಿ 18ರಂದು ಐ.ಐ.ಟಿಯ ಒಳಕ್ರೀಡಾಂಗಣದಲ್ಲಿ ಶಟಲ್ ಬ್ಯಾಡ್ಮಿಂಟನ್ ಮತ್ತು ಟೇಬಲ್ ಟೆನ್ನಿಸ್ ಸ್ಪರ್ಧೆಗಳು ನಡೆದವು. ಫೆಬ್ರವರಿ 26ರಂದು ದೆಹಲಿ ಕನ್ನಡ ಶಾಲೆಯ ಆವರಣದಲ್ಲಿ ಓಟ ಸ್ಪರ್ಧೆ, ಸ್ಮರಣ ಪರೀಕ್ಷೆ, ಡ್ರಾಯಿಂಗ್ ಮತ್ತು ಪೇಂಟಿಂಗ್, ಮ್ಯೂಸಿಕಲ್ ಚೇರ್, ಶಾಟ್‌ಪುಟ್ ಮೊದಲಾದ ಕ್ರೀಡೆಗಳಲ್ಲಿ ಕನ್ನಡಿಗರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಬಹುಮಾನಗಳನ್ನು ಪಡೆದರು. ಮಾರ್ಚ್ 4ರಂದು ಸಂಘದ ಸಭಾಂಗಣದಲ್ಲಿ ನಡೆದ ಛದ್ಮವೇಷ, ಕನ್ನಡ ಹಾಡುಗಳು, ಭಕ್ತಿ ಹಾಗೂ ಭಾವಗೀತೆ, ಕ್ವಿಜ್, ಆಶು ಭಾಷಣ, ರಂಗೋಲಿ ಮುಂತಾದ ಸಾಂಸ್ಕೃತಿಕ ಸ್ಪರ್ಧೆಗಳು ನಡೆದವು.







ಅಂಬಿಕೇಶ್ ಸ್ಮಾರಕ ಕ್ರಿಕೆಟ್ ಟ್ರೋಫಿಯೊಂದಿಗೆ ವಿಜೇತರಾದ ದೆಹಲಿ ಒಕ್ಕಲಿಗ ಗೌಡ ಸಂಘ ತಂಡ



ರನ್ನರ್ ಅಪ್–ಸೌತ್ ಕೆನರಾ ಕ್ರಿಕೆಟ್ ಕ್ಲಬ್ ತಂಡ



ಕಬ್ಬಡ್ಡಿ ಪ್ರಥಮ ಬಹುಮಾನ ಪಡೆದ ದೆಹಲಿ ಒಕ್ಕಲಿಗ ಗೌಡ ಸಂಘ ತಂಡ



ಕಬ್ಬಡ್ಡಿ ರನ್ನರ್ ಅಪ್ ದೆಹಲಿ ಪೋಲಿಸ್ ಕನ್ನಡಿಗಾಸ್ ವೆಲ್‌ಫೇರ್ ಅಸೋಸಿಯೇಶನ್ ತಂಡ



ಥ್ರೋಬಾಲ್ ಪ್ರಥಮ ಬಹುಮಾನ ಪಡೆದ ದೆಹಲಿ ಪೋಲಿಸ್ ಕನ್ನಡಿಗಾಸ್ ಕಲ್ಯಾಣ ಸಮಿತಿ ತಂಡ



ಥ್ರೋಬಾಲ್ ರನ್ನರ್ ಅಪ್ ದೆಹಲಿ ಒಕ್ಕಲಿಗ ಗೌಡ ಸಂಘ ತಂಡ



ವಾಲಿಬಾಲ್ ಪ್ರಥಮ ಬಹುಮಾನ ಪಡೆದ ದೆಹಲಿ ಒಕ್ಕಲಿಗ ಗೌಡ ಸಂಘ, ತಂಡ



ವಾಲಿಬಾಲ್ ರನ್ನರ್ ಅಪ್ ಕರ್ನಾಟಕ ಇಲೆವೆನ್, ಗುರ್‌ಗಾಂವ್ ತಂಡ

# ದೆಹಲಿ ಕರ್ನಾಟಕ ಸಂಘದ ವಾರ್ಷಿಕೋತ್ಸವದ ವಿವಿಧ ಸ್ಪರ್ಧೆಗಳ ಫಲಿತಾಂಶ

**ಟೇಬಲ್ ಟೆನ್ನಿಸ್ :** 1. ಸಾಹಿಲ್ ಸರ್ವದೇವ 2. ಜೆ.ವಿ. ಅಭಯ್

**ಶಟಲ್ ಬ್ಯಾಡ್ಮಿಂಟನ್** (15 ವರ್ಷ ಮೇಲ್ಪಟ್ಟ ಪುರುಷರು) 1. ಪಿ. ದಿನೇಶ್ 2. ಜೆ.ವಿ. ಅಭಯ್ 3. ಜೆ.ಜಿ. ಗೋರೆ

**ಶಟಲ್ ಬ್ಯಾಡ್ಮಿಂಟನ್** (15 ವರ್ಷ ಮೇಲ್ಪಟ್ಟ ಮಹಿಳೆಯರು) 1. ಏಕತಾ ಮೂರ್ತಿ 2. ಅನಿತಾ ಮೂರ್ತಿ 3. ಎಸ್.ಸಿ. ಹೇಮಲತ

**ಕೇರಂ ಸಿಂಗಲ್ಸ್** (15 ವರ್ಷ ಮೇಲ್ಪಟ್ಟ ಪುರುಷರು) 1. ತ್ಯಾಗೇಶ್ ಮೂರ್ತಿ 2. ಎ. ಸರ್ವದೇವ 3. ಟಿ.ಸಿ. ಸಂಜಯ್

**ಕೇರಂ ಡಬಲ್ಸ್** (15 ವರ್ಷ ಮೇಲ್ಪಟ್ಟ ಪುರುಷರು) 1. ಎ. ಸರ್ವದೇವ ಮತ್ತು ಕೆ. ಮಂಜುನಾಥ 2. ಪಿ. ದಿನೇಶ್ ಮತ್ತು ಟಿ.ಸಿ. ಸಂಜಯ್

**ಕೇರಂ ಸಿಂಗಲ್ಸ್** (15 ವರ್ಷ ಮೇಲ್ಪಟ್ಟ ಮಹಿಳೆಯರು) 1. ಏಕತಾ ಮೂರ್ತಿ 2. ಗಿರಿಜಾ ಜಿ.ಕೆ.

**ಕೇರಂ ಡಬಲ್ಸ್** (15 ವರ್ಷ ಮೇಲ್ಪಟ್ಟ ಮಹಿಳೆಯರು) 1. ವೀಣಾ ಜಗದೀಶ್ ಮತ್ತು ಗಿರಿಜಾ ಜಿ.ಕೆ. 2. ಏಕತಾ ಮೂರ್ತಿ ಮತ್ತು ಎಸ್.ಸಿ. ಹೇಮಲತ

**ಚೆಸ್** (10 ವರ್ಷ ಮೇಲ್ಪಟ್ಟವರು) 1. ಚಂದ್ರಶೇಖರ ಎಚ್ 2. ಶಿವರಾಮ ರೈ 3. ಬಿ.ಎಲ್. ತಿಲಕೇಶ್

**ಸ್ಮರಣ ಶಕ್ತಿ ಪರೀಕ್ಷೆ** (7–9 ವರ್ಷ) : 1. ಪ್ರೇರಣಾ ರಾವ್ 2.ಆರ್. ಗೌತಮ್ 3.ರಜತ್ ಗೋಸಾಲ್, ಸುಹಿತ್ ವಸಂತ, ಕ್ಷಿತಿಜ್ ಎಸ್.

**ಸ್ಮರಣ ಶಕ್ತಿ ಪರೀಕ್ಷೆ** (10–14 ವರ್ಷ) : 1. ಸಿ. ಪುನೀತ್ 2. ಭೂಮಿಕಾ ಎಸ್ ಮತ್ತು ನವೀನ್ ಕುಮಾರ್ ಕೆ.ಎಚ್ 3. ಪೃಥ್ವಿ ಜೆ ಮತ್ತು ಸಿಂಚನಾರಾಜ್

**ಸಮಾಧಾನಕರ ಬಹುಮಾನ** : ಸಿ. ಉಷಾ, ರಜತ್, ರಚನಾ, ಜಸ್ವಂತ್ ಕುಮಾರ್

**ಚಿತ್ರ ಬರೆಯುವ ಸ್ಪರ್ಧೆ** (3–5ವರ್ಷ) : 1. ಸ್ರಿಜನ್ 2. ರಿಷಿ ಜೆ. 3. ಲಕ್ಷ್ಯನಾಗರಾಜ್

**ಚಿತ್ರ ಬರೆಯುವ ಸ್ಪರ್ಧೆ** (6–9ವರ್ಷ) 1. ರಚನಾ ಜೆ 2.ಚಿನ್ಮಯ್ ರಾವ್ ಮತ್ತು ಅನನ್ಯಾ ನಾಗರಾಜ್ 3. ಪೃಥ್ವಿ ಜೆ ಮತ್ತು ಜಿ. ಸಿಂಚನಾರಾಜ್

**ಸಮಾಧಾನಕರ ಬಹುಮಾನ** : ಚಂದನಾ ಗೌಡ, ಪ್ರೇರಣಾ ರಾವ್, ರಾಹುಲ್ ವಿ., ರಜತ್ ಸಿ., ಕಿಶೋರ್

**50 ಮೀಟರ್ ಓಟ** (3–5 ವರ್ಷ ಹುಡುಗರು) : 1. ಲಕ್ಷ್ಯನಾಗರಾಜ 2. ರಿಷಿ ಜೆ 3. ಸಾಯಿ ಅಮರ್ತ್ಯ ಶೆಟ್ಟಿ

**50 ಮೀಟರ್ ಓಟ** (6–8 ವರ್ಷ ಹುಡುಗರು) : 1. ಶ್ರೀಧನ್ ಮೂರ್ತಿ 2. ಎ. ಸ್ವರೂಪ್ 3. ರಜತ್ ಗೋಸಾಲ್

**50 ಮೀಟರ್ ಓಟ** (6–8 ವರ್ಷ ಹುಡುಗಿಯರು) : 1. ರಚನಾ ಜೆ 2. ಕೆ.ಆರ್. ಅನನ್ಯಾ 3. ಚಂದನಾ ಗೌಡ

**100 ಮೀಟರ್ ಓಟ** (9–11 ವರ್ಷ ಹುಡುಗರು) : 1. ರಾಹುಲ್ 2. ಧನುಶ್ ಗೌಡ 3. ರಜತ್

**100 ಮೀಟರ್ ಓಟ** (9–11 ವರ್ಷ ಹುಡುಗಿಯರು) : 1. ಯಶಸ್ವಿನಿ ಗೌಡ 2. ಪ್ರೇರಣಾ ರಾವ್ 3. ಚಾಂದಿನಿ ಸುರೇಶ್ ಮತ್ತು ಕೆ.ಎಚ್. ಅಂಬಿಕಾ

**100 ಮೀಟರ್ ಓಟ** (12–15 ವರ್ಷ ಹುಡುಗರು) : 1. ಜಸ್ವಂತ್ ಕುಮಾರ್ 2. ಆರ್ತಿಕ್ ಕಾಮ್‌ಸೆಟ್ಟಿ 3. ಅಂಬಿಕೇಶ್ ಪಾಟೀಲ್

**100 ಮೀಟರ್ ಓಟ** (12–15 ವರ್ಷ ಹುಡುಗಿಯರು) : 1. ಸಿ. ಉಷಾ 2. ಸಿಂಚನಾ ಮೂರ್ತಿ 3. ಅರ್ಚನಾ ಲಕ್ಷ್ಮಿ

**ಶಾಟ್ ಪುಟ್** (21–34 ವರ್ಷ ಪುರುಷರು) : 1. ವಸಂತ 2. ಎನ್.ಎಂ. ಸನ್ಮಾನ್ ಮತ್ತು ಕೃಷ್ಣರಾಜ್ 3. ಸಿದ್ದಪ್ಪ

**ಶಾಟ್ ಪುಟ್** (35–45 ವರ್ಷ ಮಹಿಳೆಯರು) : 1. ಪುರುಷೋತ್ತಮ 2. ಶ್ರೀನಾಥ್ ಎನ್.ಆರ್. 3. ಆರ್.ಎ. ವೆಂಕಟೇಶ್

**ಶಾಟ್ ಪುಟ್** (45–55 ವರ್ಷ ಪುರುಷರು) : 1. ಕೆ.ಟಿ. ಗಣೇಶ್ 2. ಬಿ. ಚಂದ್ರಪ್ಪ 3. ಗಣೇಶ ಪಿ.ಎಂ.

**ಶಾಟ್ ಪುಟ್** (21–35 ವರ್ಷ ಮಹಿಳೆಯರು) : 1. ವಂದನಾ ರೈ 2. ಕವಿತಾ ಸುರೇಶ್ 3. ಡಾ. ಪ್ರಶಾಂತಿ ಶೆಟ್ಟಿ ಮತ್ತು ಮೀನಾ ವಸಂತ್

**ಶಾಟ್ ಪುಟ್** (36 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) : 1. ಜಯಲಕ್ಷ್ಮೀ ರಾಜ್‌ಕುಮಾರ್ 2. ಮಮತಾ ಶಿವರಾಮ್ 3. ಎಸ್.ಸಿ. ಹೇಮಲತ

**ಮ್ಯೂಸಿಕಲ್ ಚೇರ್** (6–12 ವರ್ಷ) : 1. ಶ್ರೇಯಸ್ 2. ಯಶಸ್ 3. ನವೀನ್

**ಮ್ಯೂಸಿಕಲ್ ಚೇರ್** (21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) : 1. ವಿಮಲಾ ರಂಗನಾಥ್ 2.ಮಮತಾ 3. ಮೇಘನಾ ಪೂಜಾರಿ

**100 ಮೀಟರ್ ಓಟ** (21–30 ವರ್ಷ ಮಹಿಳೆಯರು) : 1. ಆರ್. ಜ್ಯೋತಿ ಶೆಟ್ಟಿ 2. ರೂಪಾ ವೆಂಕಟೇಶ್ 3. ವಂದನಾ ರೈ

**200 ಮೀಟರ್ ಓಟ** (21–35 ವರ್ಷ ಪುರುಷರು) : 1. ಸಂತೋಷ್ ಕುಮಾರ್ 2. ನಾಗರಾಜ 3. ಎ. ಶಿವಕುಮಾರ್ ಮತ್ತು ಸುನಿಲ್ ಡಿ. ನಾಯಕ್

**100 ಮೀಟರ್ ಓಟ** (30–40 ವರ್ಷ ಮಹಿಳೆಯರು) : 1. ಜಯಲಕ್ಷ್ಮಿ ರಾಜ್‌ಕುಮಾರ್ 2. ಆಶಾ ಮಹಾದೇವ್ 3. ಕವಿತಾ ಸುರೇಶ್

**100 ಮೀಟರ್ ಓಟ** (40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) : 1. ಸರೋಜಾ ವಿಜಯಕುಮಾರ್ 2. ಶಾಂತಾ ಆರ್. ಶೆಟ್ಟಿ 3. ಜಯಾ ಶ್ರೀನಿವಾಸ

**ಬಕೆಟ್‌ಗೆ ಚೆಂಡು ಹಾಕುವ ಸ್ಪರ್ಧೆ** (21 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) : 1. ವೀಣಾ ಜಗದೀಶ್ 2. ಜಯಲಕ್ಷ್ಮಿ ರಾಜ್‌ಕುಮಾರ್ 3. ಆಶಾ ಮಹಾದೇವ್

**ಬಕೆಟ್‌ಗೆ ಚೆಂಡು ಹಾಕುವ ಸ್ಪರ್ಧೆ** (21 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) : 1. ಪುರುಷೋತ್ತಮ 2. ಚಿದಂಬರ ಕೋಟೆ 3. ಬಿ.ಕೆ. ಸುರೇಶ್

**200 ಮೀಟರ್ ಓಟ** (36 ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) : 1. ಶೇಖರ್ ಎಂ.ಆರ್. 2. ಎಸ್.ಡಿ. ಶ್ರೀನಿವಾಸ್ 3. ಬಿ. ಚಂದ್ರಪ್ಪ

**ನಿಂಬೆ ಮತ್ತು ಚಮಚ** (25–35 ವರ್ಷ ಮಹಿಳೆಯರು) : 1. ವೀನಾ ಕೋಟೆ ಮತ್ತು ಗಿರಿಜಾ ಜಿ.ಕೆ. 2. ಲೀಲಮ್ಮ ಮತ್ತು ಶೋಭಾ ಗೌಡ 3. ವಂದನಾ ರೈ, ಗಾಯತ್ರಿ , ಮೀನಾ ವಸಂತ್

**ನಿಂಬೆ ಮತ್ತು ಚಮಚ** (40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) : 1. ಸುಜಾತ ಮೂರ್ತಿ 2. ಎಸ್.ಸಿ. ಹೇಮಲತ 3. ಮಂಜುಳಾ ನಾಗರಾಜ

**ಸೂಜಿಗೆ ದಾರ ಹಾಕುವುದು** (ದಂಪತಿಗಳಿಗೆ) : 1. ಮಹಾದೇವ್ 2. ಬಸವರಾಜ್ 3. ಆನಂದ ಮುರಗೋಡ

**200 ಮೀಟರ್ ವೇಗ ನಡಿಗೆ** (45ವರ್ಷಕ್ಕಿಂತ ಮೇಲ್ಪಟ್ಟ ಪುರುಷರು) : 1. ಸಿದ್ದಪ್ಪ 2. ಬಿ. ಚಂದ್ರಪ್ಪ 3. ಬಿ.ಬಿ. ಗಣಪತಿ ಮತ್ತು ಟಿ.ಪಿ. ಬೆಳ್ಳಿಯಪ್ಪ

**200 ಮೀಟರ್ ವೇಗ ನಡಿಗೆ** (25–39 ವರ್ಷ ಮಹಿಳೆಯರು) : 1. ಗಾಯತ್ರಿ 2. ಆಶಾಮಹಾದೇವ್ 3. ಕವಿತಾಸುರೇಶ್

**200 ಮೀಟರ್ ವೇಗ ನಡಿಗೆ** (40 ವರ್ಷಕ್ಕಿಂತ ಮೇಲ್ಪಟ್ಟ ಮಹಿಳೆಯರು) : 1. ಜಯಾಶ್ರೀನಿವಾಸ 2. ಸುಜಾತ ಮೂರ್ತಿ 3.ಜ್ಯೋತಿ ಜಗದೀಶ್

**ಕಬ್ಬಡ್ಡಿ** 1. ದೆಹಲಿ ಒಕ್ಕಲಿಗ ಗೌಡ ಸಂಘ 2. ದೆಹಲಿ ಪೋಲಿಸ್ ಕನ್ನಡಿಗಾಸ್ ವೆಲ್‌ಫೇರ್ ಅಸೋಸಿಯೇಶನ್

**ವಾಲಿಬಾಲ್** : 1. ದೆಹಲಿ ಒಕ್ಕಲಿಗ ಗೌಡ ಸಂಘ 2. ಕರ್ನಾಟಕ ಇಲೆವೆನ್, ಗುರ್‌ಗಾಂವ್

**ಥ್ರೋಬಾಲ್** : 1. ದೆಹಲಿ ಪೋಲಿಸ್ ಕನ್ನಡಿಗಾಸ್ ಕಲ್ಯಾಣ ಸಮಿತಿ 2. ದೆಹಲಿ ಒಕ್ಕಲಿಗ ಗೌಡ ಸಂಘ

**ಛದ್ಮವೇಷ** (3–5 ವರ್ಷ) 1. ರಿಷಿ ಜೆ. 2. ಮಾನ್ವಿ 3. ಲಕ್ಷ್ಯ ನಾಗರಾಜ

**ಛದ್ಮವೇಷ** (6–9 ವರ್ಷ) 1. ಪ್ರೇರಣಾ ರಾವ್ 2. ಅನನ್ಯಾ ನಾಗರಾಜ ಮತ್ತು ಸುಹಿತ್ 3. ರಚನಾ ಜೆ. ಮತ್ತು ಪ್ರಿಯಾಂಕ

**ರಂಗೋಲಿ** (15 ವರ್ಷ ಮೇಲ್ಪಟ್ಟವರು): 1.ಮೈಥಿಲಿ ಅತ್ತಾವರ 2. ಪ್ರೇಮಾ ಗೌಡ ಮತ್ತು ವಿಮಲಾ ರಂಗನಾಥ್ 3. ಲಕ್ಷ್ಮೀ ಶ್ರೀನಿವಾಸ **ಸಮಾಧಾನಕರ ಬಹುಮಾನ** : ಜಮುನಾ ಸಿ. ಮಠದ ಮತ್ತು ಜ್ಯೋತಿ ಶಂಭು

**ಆಶು ಭಾಷಣ** (18 ವರ್ಷ ಮೇಲ್ಪಟ್ಟವರು) : 1. ವಿದ್ಯಾ ಕೋಳ್ಯೂರು 2. ಚಂದ್ರಪ್ಪ 3. ನರಸಿಂಹ ಮೂರ್ತಿ

**ಕನ್ನಡ ಭಾಷಣ** (18 ವರ್ಷ ಮೇಲ್ಪಟ್ಟವರು): 1. ವಿದ್ಯಾಕೋಳ್ಯೂರು 2. ಪೂಜಾ ರಾವ್ 3. ಚಿದಂಬರ ಕೋಟೆ

**ಭಕ್ತಿಗೀತೆ** (10–17 ವರ್ಷ) : 1. ಯಶಸ್ವಿ 2. ಪಲ್ಲವಿ 3. ಹಿತಾ ಎಂ. ಗೌಡ

**ಭಾವಗೀತೆ** (10–17 ವರ್ಷ) : 1. ಪಲ್ಲವಿ 2. ಯಶಸ್ವಿ 3. ಚಾಂದಿನಿ

**ಭಕ್ತಿಗೀತೆ** (18 ವರ್ಷ ಮೇಲ್ಪಟ್ಟವರು) 1. ಚಿದಂಬರ ಕೋಟೆ 2. ಗೋವಿಂದರಾಜ್ ಮತ್ತು ಮಂಜುಳಾ 3. ಉಲ್ಲಾಸ್ ನಾಯ್ಕ್.

**ಭಾವಗೀತೆ** (18 ವರ್ಷ ಮೇಲ್ಪಟ್ಟವರು) : 1. ಚಿದಂಬರ ಕೋಟೆ 2. ಗೋವಿಂದರಾಜ್ 3. ಮಂಜುಳಾ ನಾಗರಾಜ್

**ಕನ್ನಡ ಪದ್ಯಗಳು** (3–6 ವರ್ಷ) : 1. ನಿಸರ್ಗ 2. ರಿಷಿ ಜೆ 3. ಅಬಿಜ್ಞ ಮತ್ತು ಮಾನ್ವಿ

**ಕ್ವಿಜ್** (15 ವರ್ಷಕ್ಕಿಂತ ಮೇಲ್ಪಟ್ಟವರು) : **1. ಸರ್ವಜ್ಞ ತಂಡ** : ಪಿ. ದಿನೇಶ್, ಪಿ.ಎಸ್. ಮೋಹನ್‌ಕುಮಾರ್, ವೀಣಾ ಕೋಟೆ, ವೀಣಾ ಜಗದೀಶ್, ಡಾ.ವೀಣಾ ಜಗದೀಶ್ **2. ಜನಾರ್ದನ ರೆಡ್ಡಿ ತಂಡ** : ಯಶಸ್ವಿ, ಜಮುನಾ ಸಿ. ಮಠದ, ಹನುಮೇ ಗೌಡ, ಜ್ಯೋತಿ ಜಗದೀಶ, ರಾಘವೇಂದ್ರ **3. ಶಿವರಾಮ ಕಾರಂತ ತಂಡ** : ಮಂಜುನಾಥ, ಮಂಜುಳಾ ನಾಗರಾಜ, ಮೀನಾ ವಸಂತ್, ಕವಿತಾ ದಿನೇಶ್, ಜ್ಯೋತಿ ಶಂಭು ಮತ್ತು **ಕುವೆಂಪು ತಂಡ :** ಎಚ್. ಗೋಪಾಲಕೃಷ್ಣ, ಮಮತಾ ಶಿವರಾಮ್, ಗಿರಿಜಾ ಶ್ರೀನಿವಾಸ, ಗೋವಿಂದರಾಜ್, ಟಿ.ಎಸ್. ರಮೇಶ್

# ದೆಹಲಿಯ ರಂಗಮಂಚದಲ್ಲಿ ಜಿಜ್ಞಾಸೆಗೊಂಡ ಹುಟ್ಟು-ಸಾವು



'ಅಪ್ಪ'

ನಾವೀಗ ಬದುಕುತ್ತಿರುವ ಈ ಕಾಲವನ್ನು ಜೀವನದ ಅರ್ಥದಲ್ಲಿ ಸುವರ್ಣಕಾಲವೆಂದು ಗುರುತಿಸಲಾಗಿದೆ. ಆದರೆ ವೈಯಕ್ತಿಕ ಬದುಕಿನಲ್ಲಿ ಆಧುನಿಕ ಯುಗದ ಪ್ರತಿಯೊಬ್ಬನಿಗೂ ಇದು ಪ್ರಕ್ಷುಬ್ದತೆಯ ಸಮಯ. ಮನಸ್ಸಿನೊಳಗೆ ಚಡಪಡಿಸುತ್ತಿರುವ ಸಂಗತಿಗಳಿಗೆ ಬುದ್ಧಿಯ ಮೂಲಕ ಪ್ರಚೋದನೆ, ಪ್ರೇರಣೆ ಮತ್ತು ಪಂಥಾಹ್ವಾನಗಳನ್ನು ನೀಡಿ ಬದುಕಿನೊಳಗಿನ ಅರ್ಥಗಳನ್ನು ಕಂಡುಕೊಳ್ಳಲು ಸಮಯವಿಲ್ಲ. ಇಂತಹ ಸಂದರ್ಭದಲ್ಲಿ ದೆಹಲಿಯಂತಹ ವಿಶ್ವಶಹರಿನ ಪ್ರಜೆಗಳಿಗೆ ಒಂದೇ ಅಪರಾಹ್ನ ರಂಗದ ಮೇಲೆ ಮೂರು ನಾಟಕಗಳ ಮೂಲಕ ವಿಚಾರ ಪ್ರಚೋದನೆಗೆ ಆಹ್ವಾನ ನೀಡಿದವರು ದೆಹಲಿಯ ದಿನಕರ ತಂಡ.

ದಿಲ್ಲಿ ನಗರ ಕಲಾವಿದರ ರಂಗ (ದಿನಕರ) ನಾಟಕ ತಂಡವು ಫೆಬ್ರವರಿ 12ರಂದು ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಚಂದ್ರಶೇಖರ ಪಾಟೀಲರ 'ಅಪ್ಪ', ಚಿ. ಶ್ರೀನಿವಾಸ ರಾಜು ಅವರ 'ಇದು ಕಾರಣ' ಮತ್ತು 'ಬಾಗಿಲು' ನಾಟಕಗಳನ್ನು ಪ್ರದರ್ಶಿಸಿತು. ಈ ಮೂರೂ ನಾಟಕಗಳನ್ನು ನಿರ್ದೇಶಿಸಿದವರು ಶಿವಾನಂದ ಇಂಗಳೇಶ್ವರ.

ಚಂದ್ರಶೇಖರ ಪಾಟೀಲ (ಚಂಪಾ) ಅವರ 'ಅಪ್ಪ' ನಾಟಕದಲ್ಲಿ ಹುಟ್ಟು ಒಂದು ಪ್ರಶ್ನೆಯಾಗುತ್ತದೆ. ಎಳೆಯ ಬಸವ (ನಮಿತ್) ಆಟ ಆಡುತ್ತಾ, ಕಥೆ ಕೇಳುತ್ತಾ ಮಗುವಿನ ಮುಗ್ಧತೆಯಲ್ಲಿ ಅಪ್ಪನನ್ನು ಅರಸುತ್ತಾನೆ. ಬಸವ ಬೆಳೆದು ಬಸವರಾಜ (ಬಿ. ನಾರಾಯಣ)ನಾಗಿ ಪ್ರಶ್ನೆಯನ್ನು ಇನ್ನೂ ಗಟ್ಟಿಗೊಳಿಸುತ್ತಾನೆ. ಅವ್ವ (ರೇಣುಕಾ ನಿಡಗುಂದಿ) ಹೇಳುತ್ತಿರುವ ಕಥೆಗಳಲ್ಲಿ ಉತ್ತರ ಹುಡುಕುವುದು ರಂಗದ ಮೇಲಿರುವ ಪಾತ್ರಗಳ ಜತೆ ನೋಡುತ್ತಿರುವ ಪ್ರೇಕ್ಷಕರ ಜವಾಬ್ದಾರಿ ಕೂಡ ಎಂದು ನಾಟಕ ತಿಳಿಸುತ್ತದೆ. ಇಲ್ಲದ ಉತ್ತರಗಳನ್ನು ಕತೆಯ ಮೂಲಕ ಕಂಡುಕೊಳ್ಳುವ ಪ್ರಯತ್ನದ ಅಸಮರ್ಥತೆಯನ್ನು ನಟಿ ನಿಡಗುಂದಿ ಮನೋಜ್ಞವಾಗಿ ಅಭಿನಯಿಸಿದರು. ಬದುಕಿನಲ್ಲಾಗಲೀ, ಕತೆಯಲ್ಲಾಗಲೀ ಪ್ರಶ್ನೆಗಳಿರುವುದು ಕೇಳಲೆಂದೇ. ನಮಿತ್ ಮತ್ತು ನಾರಾಯಣ ಆ ಪ್ರಶ್ನೆಗಳನ್ನು ಕೇಳುತ್ತಲೇ ಇದ್ದರು. ನಿರ್ದೇಶಕ ಇಂಗಳೇಶ್ವರ ರಂಗವನ್ನು ಅದ್ಭುತಗೊಳಿಸಿ ಅಪ್ಪ ನಾಟಕದ ಒಂದು ಯಶಸ್ವಿ ಪ್ರದರ್ಶನ ನೀಡಿದರು.

ಸಾವನ್ನು ಮನಸ್ಸು ಸಹಜ ಎನ್ನುತ್ತದೆ. ಬುದ್ಧಿ ಸಾವಿನಾಚೆಯನ್ನು ಕಂಡುಕೊಳ್ಳುತ್ತದೆ. ಶ್ರೀನಿವಾಸ ರಾಜು ಅವರ 'ಇದು ಕಾರಣ' ನಾಟಕ ಸಾವನ್ನು ಎದುರಿಟ್ಟುಕೊಂಡು ಅದರೊಳಗಿನ ಅರ್ಥವನ್ನು ಕಂಡುಕೊಳ್ಳಲು ಪ್ರಯತ್ನಿಸುತ್ತದೆ. ರಂಗದ ಮೇಲೆ ಅಂತ್ಯಕ್ರಿಯೆಗೆ ಕಾಯುತ್ತಿದ್ದ ಸಾವಿನಲ್ಲಿ ದಾಯಾದಿಗಳಾದ ನರಸಿಂಹ (ರವಿ ಕುಮಾರ್) ಮತ್ತು ಗೋವಿಂದ (ಎಸ್. ಕುಮಾರ್) ಯಾವುದೇ 'ಅರ್ಥ' ಕಾಣದಾದಾಗ ನೇಪಥ್ಯ ಸೇರುತ್ತಾರೆ. ಚಂದ್ರಪ್ಪ (ಎಂ. ಪ್ರಭಾಕರ್), ಕೃಷ್ಣಾಚಾರ್ (ಎಚ್.ಎಸ್. ಜಗದೀಶ್), ಒಬ್ಬ (ಈಶ್ವರ್), ಯಜಮಾನ್ರು (ಎಚ್.ಎಸ್. ಅಮರೇಶ್) ಮತ್ತು ನಾರಾಯಣ (ಗೋವಿಂದರಾಜು) ಒಂದೆಡೆ ಸಾವಿನ ನೈಜತೆ ಮತ್ತು ಅನಿವಾರ್ಯತೆಯನ್ನು ಬುದ್ಧಿಯ ಕೈಯಲ್ಲಿಟ್ಟು ಅಂತ್ಯಕ್ರಿಯೆಯ ಕ್ರಿಯೆಯನ್ನು ರಂಗದ ಮೇಲೆ ನಿರಂತರ ಬೆಳೆಸುತ್ತಿರುತ್ತಾರೆ. ಇನ್ನೊಂದೆಡೆ ಕೆಂಚ (ರಮೇಶ್ ಟಿ.ಎಸ್.) ಸಾವಿನ ಸಹಜತೆಯನ್ನು ಅಣಕಿಸುವ ಮುಕ್ತ ಮನಸ್ಸಾಗಿ ರಂಗದಲ್ಲಿ ನಡೆಯುತ್ತಿರುವ ಚಟುವಟಿಕೆಗಳನ್ನು ಪ್ರೇಕ್ಷಕರ ಹತ್ತಿರ ತರಲು ಪ್ರಯತ್ನಿಸುತ್ತಲೇ ಇರುತ್ತಾನೆ. ಅಂತ್ಯಕ್ರಿಯೆಯ ಅಂತ್ಯವನ್ನು ಬರೆಯಲು ಬರುವ ವಕೀಲ (ವೈ. ಅವನೀಂದ್ರನಾಥ್ ರಾವ್) ರಂಗದಲ್ಲಿ ಅಲ್ಲವಾದರೂ ನಾಟಕದ ಕತೆಯಲ್ಲಿ ಮುಖ್ಯಪಾತ್ರವಾಗುತ್ತಾನೆ. ಇಂಗಳೇಶ್ವರ ಅವರ ನಿರ್ದೇಶನದ ಛಾಪು ರಂಗ ಪ್ರದರ್ಶನವನ್ನು ಪ್ರೇಕ್ಷಕರು ಮೆಚ್ಚುವಂತೆ ಮಾಡಿತು. 'ಇದು ಕಾರಣ' ದಿನಕರ ತಂಡದ ಮತ್ತೊಂದು ಉತ್ತಮ ಪ್ರದರ್ಶನ.

ಅಸಂಗತತೆಯನ್ನು ರಂಗಪರಂಪರೆಯ ಮೂಲವನ್ನಾಗಿ ಮಾಡಿದವರಲ್ಲಿ ಚಿ. ಶ್ರೀನಿವಾಸರಾಜು ಪ್ರಮುಖರು. ಅವರ 'ಬಾಗಿಲು' ನಾಟಕವನ್ನು ದೆಹಲಿಯ ನಟರಿಂದ, ದೆಹಲಿಯ ಪ್ರೇಕ್ಷಕರಿಗೆ ತೋರಿಸಲು ಕೈಗೆತ್ತಿ ಕೊಂಡ ನಿರ್ದೇಶಕ ಶಿವಾನಂದ ಇಂಗಳೇಶ್ವರ ಅವರ ಧೈರ್ಯ ಮೆಚ್ಚುವಂತಹದು. ದೆಹಲಿಯ ಕನ್ನಡ ರಂಗ ಚಟುವಟಿಕೆಗಳಿಗೆ ಉತ್ತಮ ಮೇಲ್ಪಂಕ್ತಿಯನ್ನು ಹಾಕಿ ಅಭೂತಪೂರ್ವ ಪ್ರದರ್ಶನ ನೀಡಿದ ಇಂಗಳೇಶ್ವರ ಅವರು ಕನ್ನಡ ರಂಗಭೂಮಿಯ ಇಂದಿನ ಯಾವುದೇ ನಿರ್ದೇಶಕರಿಗೆ ಕಡಿಮೆಯಿಲ್ಲ ಎಂಬುದನ್ನು ತೋರಿಸಿ ಕೊಟ್ಟರು. ವ್ಯಕ್ತಿ (ರವಿ ಕುಮಾರ್) ಹೆಣ್ಣು (ಎಸ್.ಸಿ. ಹೇಮಲತಾ) ಮತ್ತು ಯುವಕ (ಸಂತೋಷ್) ಪಾತ್ರಗಳು ನಿರ್ದೇಶಕನ ಕಲ್ಪನೆಗೆ ಜೀವ ತುಂಬಿ ನಾಟಕದ ಆಶಯವನ್ನು ಯಾವುದೇ ಗೊಂದಲವಿಲ್ಲದೆ ಪ್ರೇಕ್ಷಕರ ಹತ್ತಿರ ತಂದವು. ಅಂತರಂಗ-ಬಹಿರಂಗ, ಬದುಕು-ಸಾವು, ಆಪ್ತತೆ-ಒಂಟಿತನ, ಮುಕ್ತತೆ-ಗೌಪ್ಯತೆ, ಯೌವನ-ವೃದ್ಧಾಪ್ಯ ಇವೆಲ್ಲದರ ನಡುವೆ ಬಾಗಿಲು. ಕುರ್ಚಿಯಲ್ಲಿ ಕಂಗಲಾಗಿ ಕುಳಿತಿದ್ದ ಪ್ರೇಕ್ಷಕ, ಸಭಾಂಗಣ ಬಿಟ್ಟು ಹೊರಟಾಗ ತನ್ನ ಮನಸ್ಸಿನಲ್ಲಿ ಕಟ್ಟಿಕೊಂಡು ಮತ್ತೆ ಮತ್ತೆ ಕಾಡುವಂತೆ ಮಾಡಿದ ನಾಟಕವನ್ನು ದೆಹಲಿಯ ಪ್ರೇಕ್ಷಕರಿಗೆ ಕೊಟ್ಟ ಇಂಗಳೇಶ್ವರ ಅವರಿಗೆ ಅಭಿನಂದನೆಗಳು.

ಯೋಗೇಂದ್ರ ಸಿಂಗ್ ಅವರ ಬೆಳಕಿನ ವಿನ್ಯಾಸ ಮತ್ತು ಅಜ್ಜಂಪುರ ಎಸ್. ಕೃಷ್ಣಮೂರ್ತಿಯವರ ರಂಗ ಪರಿಕರ ವ್ಯವಸ್ಥೆಗಳು ಇಂಗಳೇಶ್ವರ ಅವರ ಮೂರೂ ನಾಟಕಗಳ ರಂಗ ಪ್ರದರ್ಶನ ಯಶಸ್ವಿಯಾಗಲು ಶ್ರಮಿಸಿವೆ. ಬದುಕುವುದಕ್ಕೆ ಸಮಯವಿಲ್ಲದ ದೆಹಲಿಯಲ್ಲಿ ಹುಟ್ಟು-ಸಾವಿನ ಅಂತರಮುಖಿಯ ಸಮಯ ಪರೀಕ್ಷೆಯನ್ನು ನೀಡಿದ ದಿನಕರ ತಂಡ ತನ್ನ ಇಂತಹ ಪ್ರಯತ್ನಗಳನ್ನು ಮುಂದುವರಿಸಿದರೆ ಮುಂದೊಂದು ದಿನ ಕನ್ನಡ ರಂಗಭೂಮಿಯು ದೆಹಲಿಯತ್ತ ನೋಡುವುದರಲ್ಲಿ ಸಂಶಯವಿಲ್ಲ.

● ಬಾಲಕೃಷ್ಣ ನಾಯ್ಕ್ ಡಿ.



'ಇದು ಕಾರಣ'



'ಬಾಗಿಲು'

ಶ್ರದ್ಧಾಂಜಲಿ

# ಮೌಲ್ಯಾಧಾರಿತ ರಾಜಕಾರಣಕ್ಕೆ ಬದ್ಧರಾಗಿದ್ದ ಚಿಂತನಶೀಲ ರಾಜಕಾರಣಿ ಡಾ. ವಿ.ಎಸ್. ಆಚಾರ್ಯ ಇನ್ನಿಲ್ಲ



ಉನ್ನತ ಶಿಕ್ಷಣ ಸಚಿವ ಡಾ.ವಿ.ಎಸ್. ಆಚಾರ್ಯ ಅವರು ಫೆಬ್ರವರಿ 14ರಂದು ಕಾರ್ಯಕ್ರಮವೊಂದರಲ್ಲಿ ಭಾಗವಹಿಸಿದ್ದಾಗಲೇ ಹಠಾತ್ ನಿಧನರಾದರು. ಘನ ಪಾಂಡಿತ್ಯದ, ಸ್ಪುರದ್ರೂಪಿ, ಸಂಸ್ಕಾರವಂತ, ಸದಾ ಶ್ವೇತ ವಸ್ತ್ರಧಾರಿ, ಉಡುಗೆಯಷ್ಟೆ ಶುಭ್ರ ವ್ಯಕ್ತಿತ್ವದ ಉಡುಪಿ, ಕರಾವಳಿ ಕರ್ನಾಟಕದ ಅಭಿವೃದ್ಧಿ ಚಟುವಟಿಕೆಗಳಲ್ಲಿ ಸತತ ನಾಲ್ಕು ದಶಕಗಳಿಂದ ತೊಡಗಿಸಿಕೊಂಡಿದ್ದ ರಾಜ್ಯ ಸರಕಾರದ ವೈದ್ಯಕೀಯ ಶಿಕ್ಷಣ, ಪಶುಸಂಗೋಪನೆ, ಗೃಹ ಮಂತ್ರಿಯಾಗಿ ಸೇವೆ ಸಲ್ಲಿಸಿ ಫೆ.13ರವರೆಗೂ ಉನ್ನತ ಶಿಕ್ಷಣ, ಮುಜರಾಯಿ, ಮಾಹಿತಿ ತಂತ್ರ ಸಚಿವರಾಗಿದ್ದ ಡಾ. ವೇದವ್ಯಾಸ ಶ್ರೀನಿವಾಸ ಆಚಾರ್ಯ ಅವರು 1939ರಲ್ಲಿ ಪ್ರಸಿದ್ಧ ವಿದ್ವಾಂಸ ಕಟ್ಟೆ ಶ್ರೀನಿವಾಸಾಚಾರ್ಯ, ಕೃಷ್ಣವೇಣಿಯವರಿಗೆ ಜನಿಸಿದರು.

ಜನಸಂಘದ ಮೂಲಕ ರಾಜಕೀಯ ಪ್ರವೇಶಿಸಿದ್ದ ಅವರು ತುರ್ತು ಪರಿಸ್ಥಿತಿ ಸಂದರ್ಭದಲ್ಲಿ 19 ತಿಂಗಳ ಕಾಲ ಜೈಲುವಾಸ ಅನುಭವಿಸಿದ್ದರು. 1983ರಲ್ಲಿ ಪ್ರಥಮ ಬಾರಿಗೆ ಉಡುಪಿ ವಿಧಾನಸಭಾ ಕ್ಷೇತ್ರದಲ್ಲಿ ಸ್ಪರ್ಧಿಸಿ ಜಯ ಗಳಿಸುವ ಮೂಲಕ ವಿಧಾನಸಭೆ ಪ್ರವೇಶಿಸಿದರು. ಬಿ.ಜೆ.ಪಿ. ಯಿಂದ ಸ್ಪರ್ಧಿಸಿ ಶಾಸಕರಾದ ಪ್ರಥಮ ವ್ಯಕ್ತಿ ಎಂಬ ಗೌರವಕ್ಕೆ ಪಾತ್ರರಾಗಿದ್ದಾರೆ. ಕೆಲ ವರ್ಷ ವೈದ್ಯರಾಗಿಯೂ ಸೇವೆ ಸಲ್ಲಿಸಿದ್ದ ಅವರು ಕ್ರಮೇಣ ರಾಜಕೀಯವಾಗಿಯೇ ಗುರುತಿಸಿಕೊಂಡು ಹಂತ ಹಂತವಾಗಿ ಉನ್ನತ ಸ್ಥಾನಗಳನ್ನು ಅಲಂಕರಿಸಿದರು. ಒಬ್ಬ ಯಶಸ್ವಿ ವೈದ್ಯ ರಾಜಕೀಯದಲ್ಲಿಯೂ ಯಶಸ್ವಿ ಆಗಬಹುದು ಎಂಬುದಕ್ಕೆ ಅವರೊಬ್ಬ ಉತ್ತಮ ನಿದರ್ಶನವಾಗಿದ್ದರು.

ಸುಮಾರು ಆರು ವರ್ಷಗಳ ಅಧಿಕಾರ ಅವಧಿಯಲ್ಲಿ ಏಳು ಖಾತೆಗಳನ್ನು ನಿಭಾಯಿಸಿದ್ದ ಆಚಾರ್ಯ ಅವರು ಮೇಲ್ಮನೆಯಲ್ಲಿ ಸಭಾ ನಾಯಕರಾಗಿಯೂ ಕಾರ್ಯನಿರ್ವಹಿಸುತ್ತಿದ್ದರು. ವೃತ್ತಿಯಿಂದ ವೈದ್ಯರಾದರೂ ತೆರಿಗೆ ಮತ್ತು ಆರ್ಥಿಕ ವಿಚಾರಗಳ ಬಗ್ಗೆಯೂ ಆಳವಾಗಿ ತಿಳಿದುಕೊಂಡಿದ್ದರು. ಕೇಂದ್ರ ಸರ್ಕಾರ ಆಯೋಜಿಸುವ ಹಣಕಾಸು ಸಚಿವರ ಸಭೆಗಳಲ್ಲಿ ಮುಖ್ಯಮಂತ್ರಿಗಳ ಪರವಾಗಿ ಆಚಾರ್ಯ ಭಾಗವಹಿಸುತ್ತಿದ್ದರು. ವೃತ್ತಿಯಲ್ಲಿ ವೈದ್ಯರಾದರೂ ಹಣಕಾಸು ವಿಚಾರದಲ್ಲಿ ಅವರಿಗೆ ವಿಶೇಷ ಕಾಳಜಿ ಇತ್ತು. ಆಳವಾದ ಅಧ್ಯಯನ ನಡೆಸಿ ಎಲ್ಲಾ ವಿಚಾರಗಳನ್ನೂ ತಿಳಿದುಕೊಳ್ಳುತ್ತಿದ್ದರು. ಕೊನೆ ಉಸಿರಿನವರೆಗೂ ನಂಬಿದ ತತ್ವ, ಸಿದ್ಧಾಂತಕ್ಕೆ ಬದ್ಧರಾಗಿಯೇ ಬಾಳಿದರು.

ಇವರು ಮಣಿಪಾಲ ಕೆ.ಎಂ.ಸಿ.ಯಲ್ಲಿ ವೈದ್ಯಕೀಯ ಪದವಿ ಪಡೆದ ಬಳಿಕ 1965ರಿಂದ ವೈದ್ಯಕೀಯ ವೃತ್ತಿಯಲ್ಲಿ ತೊಡಗಿಸಿಕೊಂಡವರು. ಸಚಿವರಾಗುವವರೆಗೂ ಮಲ್ಪೆ ಸಮೀಪದ ಕಲ್ಮಾಡಿಯಲ್ಲಿ ವೈದ್ಯಕೀಯ ಸೇವೆಯನ್ನು ನಡೆಸುತ್ತಿದ್ದರು.

1983ರಲ್ಲಿ ಪ್ರಥಮ ಬಾರಿಗೆ ಉಡುಪಿ ಕ್ಷೇತ್ರದಿಂದ ವಿಧಾನಸಭೆಗೆ ಪ್ರವೇಶಿಸಿದ್ದಲ್ಲದೆ ವಿಧಾನ ಮಂಡಲದಲ್ಲಿ ಪಕ್ಷದ ಶಾಸಕಾಂಗ ನಾಯಕರಾದರು.ರಾಜ್ಯದಲ್ಲಿ ಪ್ರಥಮ ಬಾರಿಗೆ ಕಾಂಗ್ರೆಸೇತರ ಸರಕಾರವು ದಿ|ರಾಮಕೃಷ್ಣ ಹೆಗಡೆ ಅವರ ನೇತೃತ್ವದಲ್ಲಿ ಅಧಿಕಾರಕ್ಕೆ ಬಂದಾಗ ವಿಧಾನಸಭೆಯಲ್ಲಿ ಆಚಾರ್ಯರು ಪ್ರಮುಖ ಪಾತ್ರ ವಹಿಸಿದ್ದರು. ಕಾನೂನಿನಲ್ಲಿ ಜನರಿಗೆ ಅನುಕೂಲವಾಗುವಂತಹ ಅನೇಕ ತಿದ್ದುಪಡಿ ತರಲು ಕಾರಣರಾಗಿದ್ದರು.

ರಾಮಕೃಷ್ಣ ಹೆಗಡೆ ಸರಕಾರವು ಜಿಲ್ಲೆಗಳ ಪುನಾರಚನೆಗಾಗಿ 1984ರಲ್ಲಿ ನೇಮಿಸಿದ ಟಿ.ಎಂ.ಹುಂಡೇಕರ್ ನೇತೃತ್ವದ ಸಮಿತಿ ರಚನೆಯಲ್ಲಿ ಆಚಾರ್ಯರ ಪಾತ್ರವು ಹಿರಿದಾಗಿತ್ತು. ಜಿಲ್ಲೆಗಳು ದೊಡ್ಡದಾಗಿದ್ದರೆ ಅಭಿವೃದ್ಧಿ ಕಷ್ಟಸಾಧ್ಯ ಎಂಬ ಕಾರಣಕ್ಕೆ ಇವರು ಜಿಲ್ಲಾ ಪುನರ್ವಿಂಗಡನೆಗೆ ಶ್ರಮಿಸಿದ್ದರು. ಈ ಸಮಿತಿಯ ಶಿಫಾರಸಿನಿಂದ ಎಂಟು ಹೊಸ ಜಿಲ್ಲೆಗಳು ಹುಟ್ಟಿಕೊಂಡವು. 1997ರಲ್ಲಿ ಉಡುಪಿ ಜಿಲ್ಲೆ ಉದ್ಘಾಟನೆ ಸಂದರ್ಭ ಆಗಿನ ಮುಖ್ಯಮಂತ್ರಿ ಜೆ.ಎಚ್. ಪಟೇಲ್ ಆಚಾರ್ಯರ ಪಾತ್ರದ ಕುರಿತು ಮುಕ್ತಕಂಠದಿಂದ ಪ್ರಶಂಸಿಸಿದ್ದನ್ನು ಈಗಲೂ ನೆನಪಿಸಿಕೊಳ್ಳುವವರಿದ್ದಾರೆ.

2006ರ ಫೆಬ್ರವರಿ 9ರಂದು ಜೆಡಿಎಸ್-ಬಿಜೆಪಿ ಸಂಯುಕ್ತ ಸರಕಾರದಲ್ಲಿ ವೈದ್ಯಕೀಯ ಸಚಿವರಾಗಿ 20 ತಿಂಗಳಲ್ಲಿ ಆರು ಸರಕಾರಿ ವೈದ್ಯಕೀಯ ಕಾಲೇಜನ್ನು ಆರಂಭಿಸಿದ ದಾಖಲೆ ಇವರದು. ಇಂತಹ ಸಾಧನೆ ದೇಶದಲ್ಲಿಯೇ ಪ್ರಥಮ. ಇದರಿಂದ ಸರಕಾರಿ ಕೋಟದಲ್ಲಿ ವೈದ್ಯಕೀಯ ಶಿಕ್ಷಣ ಪಡೆಯುವ ಬಡ ಪ್ರತಿಭಾವಂತರಿಗೆ ಹೆಚ್ಚಿನ ಅನುಕೂಲವಾಗಿದೆ. 2008ರ ಮೇ 30ರಂದು ಬಿಜೆಪಿ ಸರಕಾರದ ಗೃಹ ಸಚಿವರಾಗಿ ಅನೇಕ ಸುಧಾರಣಾ ಕ್ರಮಗಳನ್ನು ನಡೆಸಿ ಇದೀಗ ಉನ್ನತ ಶಿಕ್ಷಣ ಸಚಿವರಾಗಿ ಸೇವೆ ಸಲ್ಲಿಸಿದ್ದರು. 1980ರಿಂದ ಪ್ರತಿ ಚುನಾವಣೆಯಲ್ಲಿಯೂ ಪ್ರಣಾಳಿಕೆಯನ್ನು ತಯಾರಿಸುತ್ತಿದ್ದ ಡಾ. ಆಚಾರ್ಯ ಬಿಜೆಪಿ ಸರಕಾರ ಬಂದ ಅನಂತರ ಬಜೆಟ್ ತಯಾರಿ ಇವರಿಂದಲೇ ಆಗುತ್ತಿತ್ತು.

ಪತ್ನಿ ಶಾಂತಾ ವಿ.ಆಚಾರ್ಯ, ನಾಲ್ವರು ಪುತ್ರರು, ಓರ್ವ ಪುತ್ರಿಯನ್ನು ಡಾ. ಆಚಾರ್ಯ ಅಗಲಿದ್ದಾರೆ.ಸರಳ ಸಜ್ಜನಿಕೆಯ ಪ್ರಾಮಾಣಿಕ ರಾಜಕಾರಣಿ ಡಾ. ವಿ.ಎಸ್. ಆಚಾರ್ಯ ಅವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹೃದಯಪೂರ್ವಕ ಶ್ರದ್ಧಾಂಜಲಿ ಸಲ್ಲಿಸುತ್ತೇವೆ

## ದೆಹಲಿ ಕರ್ನಾಟಕ ಸಂಘ

**ಅಭಿವ್ಯಕ್ತಿ ಮಹಿಳಾ ಸಂಘ, ನಾಗತಿಹಳ್ಳಿ, ಮಂಡ್ಯ ಪ್ರಸ್ತುತಪಡಿಸುವ ನಾಟಕ**

### ಕರಿಭಂಟ

ನಿರ್ದೇಶನ : ಛಾಯಾ ಭಾರ್ಗವಿ

ರಚನೆ : ನಿಸರ್ಗಪ್ರಿಯ

31 ಮಾರ್ಚ್ 2012ರ ಶನಿವಾರ

ಸಮಯ : ಸಂಜೆ 5.00ಗಂಟೆಗೆ

ಸ್ಥಳ : ಸಂಘದ ಸಭಾಂಗಣ

**ತಮಗೆಲ್ಲರಿಗೂ ಆದರದ ಸ್ವಾಗತ**

ಡಾ. ವೆಂಕಟಾಚಲ ಹೆಗಡೆ
ಅಧ್ಯಕ್ಷರು

ಸಿ.ಎಂ. ನಾಗರಾಜ
ಪ್ರಧಾನ ಕಾರ್ಯದರ್ಶಿ



ಮಾನ್ಯ ಮುಖ್ಯಮಂತ್ರಿ ಶ್ರೀ ಡಿ.ವಿ. ಸದಾನಂದ ಗೌಡ ಅವರನ್ನು ದೆಹಲಿ ಕನ್ನಡ ಶಿಕ್ಷಣ ಸಂಸ್ಥೆಯ ಕಾರ್ಯದರ್ಶಿ ಆಂಜನಿ ಗೌಡ, ಕುಮಾರಸ್ವಾಮಿ, ಎಸ್. ಕೃಷ್ಣಭಟ್, ಶ್ರೀನಾಥ್ ಎನ್.ಆರ್., ಹಾಗೂ ಪ್ರದೀಪ್ ಕುಮಾರ್ ಅವರು ಭೇಟಿ ಮಾಡಿದರು. ಇವರೊಡನೆ ಕರ್ನಾಟಕ ಸರ್ಕಾರದ ವಿಶೇಷ ಪ್ರತಿನಿಧಿ ಶ್ರೀ ವಿ. ಧನಂಜಯ ಕುಮಾರ್ ಅವರು ಉಪಸ್ಥಿತರಿದ್ದರು.

ಸರ್ಕಾರದ ಪ್ರಧಾನ ಕಾರ್ಯದರ್ಶಿಗಳು ಕನ್ನಡ ಮತ್ತು ಸಂಸ್ಕೃತಿ ಹಾಗೂ ವಾರ್ತಾ ಇಲಾಖೆ ಬೆಂಗಳೂರು ಇವರು ಸಂಘಕ್ಕೆ ಭೇಟಿ ನೀಡಿ, ಸಂಘದಲ್ಲಿ ನಡೆಯುತ್ತಿರುವ ಕೆಲಸಗಳನ್ನು ವೀಕ್ಷಿಸಿದರು. ಅವರನ್ನು ಸ್ವಾಗತಿಸುತ್ತಿರುವ ಸಂಘದ ಪದಾಧಿಕಾರಿಗಳು



# ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯದಲ್ಲಿ 'ಕನ್ನಡಿಗರ ಸ್ನೇಹ ಸಂಗಮ'

ಜವಾಹರಲಾಲ್ ನೆಹರು ವಿಶ್ವವಿದ್ಯಾನಿಲಯ ಮಾನವಿಯ ವಿಷಯಗಳ ಉನ್ನತ ಶಿಕ್ಷಣ ಅದರಲ್ಲೂ ಭೂದನ. ಸಂಶೋಧನೆ ಮತ್ತು ಬೌದ್ಧಿಕ ಬೆಳವಣಿಗೆಗೆ ಹೆಸರುವಾಸಿಯಾದ ವಿಶ್ವದ ಪ್ರಮುಖ ವಿಶ್ವವಿದ್ಯಾನಿಲಯಗಳಲ್ಲಿ ಒಂದು. ಇಲ್ಲಿನ ಶರಾವತಿ ಕನ್ನಡ ಸಂಘ ಕನ್ನಡ ನಾಡಿನ ವಿದ್ಯಾರ್ಥಿಗಳಿಗೆ ತಮ್ಮಲ್ಲಿ ಅಡಗಿರುವ ಪ್ರತಿಭೆಯನ್ನು ಹೊರಹೊಮ್ಮಿಸಲು ಹಾಗೂ ಅಭಿಮಾನವನ್ನು ಹಂಚಿಕೊಳ್ಳಲು ಒಂದು ಸೂಕ್ತ ವೇದಿಕೆಯನ್ನು ಒದಗಿಸುತ್ತದೆ ಎಂದರೆ ತಪ್ಪಾಗಲಾರದು. ಇದಕ್ಕೆ ಸಾಕ್ಷಿ ಎಂಬಂತೆ ದಿನಾಂಕ 3 ಫೆಬ್ರವರಿ 2012ರ ಶುಕ್ರವಾರದಂದು ಶರಾವತಿ ಕನ್ನಡ ಸಂಘದ ವತಿಯಿಂದ "ಕನ್ನಡಿಗರ ಸ್ನೇಹ ಸಂಗಮ" ಕಾರ್ಯಕ್ರಮವನ್ನು ಸಂಭ್ರಮದಿಂದ ಆಚರಿಸಲಾಯಿತು ವಿಶ್ವವಿದ್ಯಾನಿಲಯದ ಎಲ್ಲಾ ಕನ್ನಡಿಗರು ಒಂದೆಡೆ ಸೇರಿ ತಮ್ಮ ಸಂಭ್ರಮವನ್ನು ಪರಸ್ಪರ ಹಂಚಿಕೊಂಡರು.

ಇದೇ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಪಶ್ಚಿಮ ಏಷ್ಯಾ ಅಧ್ಯಯನ ವಿಭಾಗದ ಪ್ರಾಧ್ಯಾಪಕರಾದ ಪ್ರೊ. ಅಫ್ತಾಬ್ ಕಮಲ್ ಪಾಷಾರವರು ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿ ಮಾತನಾಡುತ್ತಾ ತಮ್ಮ ವಿದ್ಯಾರ್ಥಿ ಜೀವನ ಹಾಗೂ ಶರಾವತಿ ಕನ್ನಡ ಸಂಘದ ಜೊತೆಗಿನ ಒಡನಾಟವನ್ನು ಹಂಚಿಕೊಂಡರು ಹಾಗೆಯೆ ಇತ್ತೀಚಿನ ದಿನಗಳಲ್ಲಿ ಈ ವಿಶ್ವವಿದ್ಯಾನಿಲಯದಲ್ಲಿ ಕನ್ನಡಿಗರ ಸಂಖ್ಯೆ ಕ್ಷೀಣವಾಗಿದ್ದು ಇದನ್ನು ಹೆಚ್ಚಿಸಲು ವಿಶೇಷವಾಗಿ ಗ್ರಾಮೀಣ ವಿಭಾಗದ ವಿದ್ಯಾರ್ಥಿಗಳಲ್ಲಿ ಅರಿವು ಮೂಡಿಸಬೇಕಾಗಿದೆ ಎಂದು ವಿದ್ಯಾರ್ಥಿಗಳಿಗೆ ಕರೆ ನೀಡಿದರು.



ಕಾರ್ಯಕ್ರಮದಲ್ಲಿ ಮುಖ್ಯ ಅತಿಥಿಗಳಾಗಿ ಭಾಗವಹಿಸಿದ್ದ ವಿಶ್ವವಿದ್ಯಾಲಯದ ಅಂತರಾಷ್ಟ್ರೀಯ ಕಾನೂನು ಅಧ್ಯಯನ ವಿಭಾಗದ ಸಂಯೋಜಕ ಪ್ರಾಧ್ಯಾಪಕರು ಹಾಗೂ ಪ್ರಸ್ತುತ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಅವರು ಕಾರ್ಯಕ್ರಮವನ್ನು ಉದ್ದೇಶಿಸಿ ಮಾತನಾಡಿ ವಿಶ್ವವಿದ್ಯಾನಿಲಯದ ಹಳೆಯ ಕನ್ನಡ ವಿದ್ಯಾರ್ಥಿಗಳ ಶರಾವತಿ ಕನ್ನಡ ಸಂಘದ ಜೊತೆಗಿನ ಒಡನಾಟ ಹಾಗೂ ಅವರ ವಿವಿಧ ಕ್ಷೇತ್ರದಲ್ಲಿನ ಅಪೂರ್ವ ಸಾಧನೆಗಳನ್ನು ವಿದ್ಯಾರ್ಥಿಗಳಿಗೆ ತಿಳಿಸುವುದರ ಮೂಲಕ ಪ್ರೋತ್ಸಾಹಿಸಿದರು ಹಾಗೂ ಈ ವಿಶ್ವವಿದ್ಯಾನಿಲಯ ಪ್ರವೇಶ ಪರೀಕ್ಷಾ ಕೇಂದ್ರವನ್ನು ಗುಲ್ಬರ್ಗಾದಲ್ಲಿ ತೆರೆಯಲಾಗಿತ್ತು ಆದರೆ ಇದು ಪರೀಕ್ಷೆ ಬರೆಯುವ ವಿದ್ಯಾರ್ಥಿಗಳ ಕೊರತೆಯಿಂದ ಮುಚ್ಚಲಾಗಿದೆ. ಇದರ ಪುನರ್ ಸ್ಥಾಪನೆಗೆ ಯೋಜನೆಯನ್ನು ರೂಪಿಸಬೇಕಾಗಿದೆ ಎಂದು ಹೇಳಿದರು. ಹಾಗೆಯೇ ಪ್ರಾದೇಶಿಕ ಅಭಿವೃದ್ಧಿ ಅಧ್ಯಯನ ವಿಭಾಗದ ಪ್ರಾಧ್ಯಾಪಕರುಗಳಾದ ಪ್ರೊ. ಪುರುಷೋತ್ತಮ ಕುಲಕರ್ಣಿ ಅವರು ತಮಗೆ ಕನ್ನಡದ ಬಗ್ಗೆ ಅಪಾರವಾದ ಅಭಿಮಾನ ಇದೆ ಎಂದು ತಮ್ಮ ಅಭಿಮಾನವನ್ನು ಹಂಚಿಕೊಂಡರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾನಿಲಯದ ಹಳೆಯ ವಿದ್ಯಾರ್ಥಿ ಸಖಾರಾಮ ಸೋಮಯಾಜಿ ತಮ್ಮ ಪ್ರಾರಂಭದ ದಿನಗಳು ಕಷ್ಟಕರವಾಗಿದ್ದು ಇಂತಹ ಸಂದರ್ಭದಲ್ಲಿ ವಿದ್ಯಾರ್ಥಿಗಳು ಎದೆಗುಂದಬಾರದು ಎಂದು ವಿದ್ಯಾರ್ಥಿಗಳಲ್ಲಿ ಮನೋಸ್ಥೈರ್ಯವನ್ನು ತುಂಬಿದರು. ಸೌತ್ ಏಷ್ಯನ್ ವಿಶ್ವವಿದ್ಯಾಲಯದ ಕಾನೂನು ವಿಭಾಗದ ಸಹಾಯಕ ಪ್ರಾಧ್ಯಾಪಕರಾದ ಡಾ. ಲೂಥರ್ ರಂಗ್ರೇಜಿ, ಸಹಾಯಕ ಸಂಶೋಧಕರಾದ ಶಿವಾನಂದ ಸಿರ್ಸಿಕರ್, ಪುರುಷೋತ್ತಮ ಕುಲಕರ್ಣಿ ಕಾರ್ಯಕ್ರಮದಲ್ಲಿ ಅಥಿತಿಗಳಾಗಿ ಭಾಗವಹಿಸಿದ್ದರು.

ಕಾರ್ಯಕ್ರಮದ ನಿರೂಪಣೆಯನ್ನು ಕೃಪಾಕರ್, ಪ್ರಾರ್ಥನಾಗೀತೆಯನ್ನು ಸೃಜನ ಕಾಯ್ಕಿಣಿ, ನಾಡಗೀತೆಯನ್ನು ಸಲ್ಮಾಕಾಸರ್, ಬಿ.ಜಿ. ಅಖಿಲ, ಸುಂದರೇಶ್, ಶಭಿರ್‌ವೇಣಿ ಹಾಡಿದರು. ಸ್ವಾಗತ ಭಾಷಣವನ್ನು ಬಾಲಾಜಿ ನಾಯ್ಕ ಬಿ.ಜಿ, ವಂದನಾರ್ಪಣೆಯನ್ನು ರಂಜಿತ ರೇಟಿಲು ನಿರ್ವಹಿಸಿದರು. ಕಾರ್ಯಕ್ರಮದ ಸಂಪೂರ್ಣ ಸಂಯೋಜನೆಯನ್ನು ಶಿವಾನಂದ ದೇವರಾಜ್, ಚೈತನ್ಯ ಗ್ರೀಷ್ಮ ಮತ್ತು ಸ್ನೇಹಿತರು ನೋಡಿಕೊಂಡರು, ಅಶೋಕ್ ಕುಮಾರ್ ಅವರ ಕವನವನ್ನು ಇದೇ ಸಂದರ್ಭದಲ್ಲಿ ವಾಚನ ಮಾಡಲಾಯಿತು ಹಾಗೂ ಛಾಯಾಚಿತ್ರಗಳನ್ನು ಆಸ್ಮಾರವರು ಒದಗಿಸಿದರು. ಇದೇ ಸಂದರ್ಭದಲ್ಲಿ ವಿಶ್ವವಿದ್ಯಾಲದಯಲ್ಲಿ ಕನ್ನಡದ ಬಗೆಗಿನ ಉಪನ್ಯಾಸ, ಚರ್ಚೆ ಹಾಗೂ ಸಾಂಸ್ಕೃತಿಕ ಕಾರ್ಯಕ್ರಮಗಳನ್ನು ಆಯೋಜಿಸಲು ತೀರ್ಮಾನಿಸಲಾಯಿತು.

● ಬಾಲಾಜಿ ನಾಯ್ಕ, ಜೆ.ಎನ್.ಯು

# ಬಸವ ಇಂಟರ್‌ನ್ಯಾಶನಲ್ ಸೆಂಟರ್ ವತಿಯಿಂದ ಪಿಕ್‌ನಿಕ್



ಫೆಬ್ರವರಿ 19, 2012ರಂದು ದೆಹಲಿಯ ಬಸವ ಇಂಟರ್ ನ್ಯಾಶನಲ್ ಸೆಂಟರ್ ವತಿಯಿಂದ ಪಿಕ್‌ನಿಕ್ ಅನ್ನು ತಾಲ್ಕಟೋರಾ ಉದ್ಯಾನವನದಲ್ಲಿ ಏರ್ಪಡಿಸಲಾಗಿತ್ತು. ಈ ವನವಿಹಾರ ಕಾರ್ಯಕ್ರಮದ ಸಾನ್ನಿಧ್ಯವನ್ನು ಮಾತಾಜಿ ಸುವರ್ಣ ಮಾಗಲದೇವಿ ಅವರು ವಹಸಿದ್ದರು. ಪೂಜ್ಯ ಮಾತಾಜಿ ಅವರು ತಮ್ಮ ಆಶೀರ್ವಚನದ ಮೂಲಕ ಬಸವಾದಿ ಶಿವಶರಣರ ಸಂದೇಶ ಸಾರವನ್ನು ತಿಳಿ ಹೇಳುತ್ತಾ ಶರಣರ ವಚನಗಳಲ್ಲಿ ಪ್ರಕೃತಿಯಲ್ಲಿನ ಹಲವಾರು ಸಾಂಕೇತಿಕ ಪ್ರತಿಮೆಗಳನ್ನು ಉದಾಹರಿಸಿದ್ದು ಬಸವಾನುಯಾಯಿಗಳು ಅವುಗಳ ಹಿನ್ನೆಲೆಯನ್ನು ಚೆನ್ನಾಗಿ ಅರ್ಥೈಸಿಕೊಂಡು ಜೀವನ ಸಾಗಿಸಬೇಕು. ಕಾಗೆ, ಕೋಳಿಗಳು ಹೇಗೆ ತಮ್ಮ ಬಂಧು ಬಳಗಗಳನ್ನು ಪ್ರೀತಿಯಿಂದ ಕಾಣುತ್ತವೆಯೋ ಹಾಗೆ ಪ್ರತಿಯೊಬ್ಬ ವ್ಯಕ್ತಿಯೂ ಸಹ ತನ್ನ ನೆರೆಹೊರೆಯವರ, ಬಂಧು ಬಾಂಧವರುಗಳನ್ನು ಪ್ರೀತಿಸುತ್ತಾ ಸಹಕಾರ ಸಹಬಾಳ್ವೆಗಳ ಮೂಲಕ ಬಾಳುವುದನ್ನು ಕಲಿಯಬೇಕೆಂಬುದಾಗಿ ಕರೆಕೊಟ್ಟರು.

ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ಅಧ್ಯಕ್ಷರಾದ ದೆಹಲಿ ಸರ್ಕಾರದ ಕೈಗಾರಿಕಾ ಇಲಾಖೆಯಲ್ಲಿ ಅಪರ ಆಯುಕ್ತರಾಗಿರುವ ಅಮರನಾಥ ತಳವಾಡೆ ಅವರು ಮಾತನಾಡಿ ಗ್ರಾಮಾಂತರ ಪ್ರದೇಶದಲ್ಲಿರುವ ಬಸವ ಧರ್ಮಾನುಯಾಯಿಗಳು ಸಾಮಾಜಿಕ ಮತ್ತು ಆರ್ಥಿಕ ಹಿನ್ನೆಲೆಯ ದೃಷ್ಟಿಯಿಂದ ಬಹಳ ಸಂಕಷ್ಟದಿಂದ ಕೂಡಿದವರಾಗಿದ್ದು ಬಸವ ತತ್ವ ಚಿಂತಕರು ಈ ಬಗ್ಗೆ ಚಿಂತನೆ ನಡೆಸಿ ಸರ್ಕಾರದ ಗಮನ ಸೆಳೆದು ಸಂವಿಧಾನಬದ್ಧವಾದ ಸವಲತ್ತುಗಳನ್ನು ದೊರಕಿಸಿಕೊಳ್ಳುವ ನಿಟ್ಟಿನಲ್ಲಿ ಪ್ರಯತ್ನ ನಡೆಸಬೇಕಿದೆ ಎಂದರು. ಹಾಗೆಯೇ ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ವತಿಯಿಂದ ಇನ್ನ ಹೆಚ್ಚು ಚಟುವಟಿಕೆಗಳನ್ನು ಹಮ್ಮಿಕೊಳ್ಳುವುದಕ್ಕೆ ಹಾಗೂ ಅವುಗಳ ಯಶಸ್ವಿಗೆ ತಾವು ಶ್ರಮಿಸುವುದಲ್ಲದೆ ಎಲ್ಲರ ನೆರವನ್ನು ಸಹ ಕೋರಿದರು.

ಕಾರ್ಯಕ್ರಮದ ಪ್ರಾಯೋಜಕರು ಹಾಗೂ ದೆಹಲಿ ಕನ್ನಡ ಶಾಲೆಯ ಅಧ್ಯಕ್ಷರಾದ ಡಾ. ಜಿ.ಎಂ. ಲಿಂಗರಾಜು ಅವರು ಮಾತನಾಡಿ ಬಸವಾದಿ ಶಿವಶರಣರ ಜಯಂತಿ ಮೊದಲಾದ ಕಾರ್ಯಕ್ರಮಗಳನ್ನು ಹೆಚ್ಚು ಹೆಚ್ಚು ಹಮ್ಮಿಕೊಳ್ಳುವುದರ ಮೂಲಕ ಬಸವಧರ್ಮವನ್ನು ಜನಮಾನಸದಲ್ಲಿ ಜಾಗೃತಗೊಳಿಸುವ ಕೆಲಸವನ್ನು ಬಸವ ಇಂಟರ್‌ನ್ಯಾಶನಲ್ ಸೆಂಟರ್ ನಡೆಸಬೇಕೆಂದು ಅಭಿಪ್ರಾಯಪಟ್ಟರು.

ಕರ್ನಾಟಕದ ಹಿರಿಯ ಐ.ಎ.ಎಸ್. ಅಧಿಕಾರಿಯಾಗಿರುವ ಪ್ರಸ್ತುತ ಹುಡ್ಕೊದ ಮುಖ್ಯ ಕಾರ್ಯನಿರ್ವಾಹಕ ಅಧಿಕಾರಿಯಾಗಿ ಸೇವೆ ಸಲ್ಲಿಸುತ್ತಿರುವ ಶ್ರೀ ವಿ.ಪಿ. ಬಳಿಗಾರ್ ಅವರು ಕಾರ್ಯಕ್ರಮದಲ್ಲಿ ಭಾಗವಹಿಸಿ ನೆರೆದಿದ್ದ ಸಭಿಕರಲ್ಲಿ ಸ್ಫೂರ್ತಿ ತುಂಬಿದರು.

ಮಕ್ಕಳಿಗೆ ಹಾಗೂ ಮಹಿಳೆಯರಿಗೆ ಭೋಜನ ನಂತರ ಆಟೋಟ ಸ್ಪರ್ಧೆಗಳನ್ನು ಏರ್ಪಡಿಸಲಾಗಿತ್ತು. ಸ್ಪರ್ಧೆಗಳಲ್ಲಿ ವಿಜೇತರಾದವರಿಗೆ ಡಾ. ಜಿ.ಎಂ. ಲಿಂಗರಾಜು ಅವರು ಬಹುಮಾನ ವಿತರಿಸಿದರು.

ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ಕಾರ್ಯದರ್ಶಿ ವಿ.ವಿ. ಬಿರಾದಾರ್ ಅವರು ಕಾರ್ಯಕ್ರಮಕ್ಕೆ ಸ್ವಾಗತಿಸಿದರು. ಉಪಾಧ್ಯಕ್ಷರಾದ ಚೆನ್ನು ಎಸ್. ಮಠದ, ಕಾರ್ಯದರ್ಶಿ ವಿ.ವಿ. ಬಿರಾದಾರ್ ಹಾಗೂ ಖಜಾಂಚಿ ಜಗದೀಶ್ ಭಂಗಾರಿ ಹಾಗೂ ಇತರರು ಕಾರ್ಯಕ್ರಮದ ಯಶಸ್ವಿಗೆ ಶ್ರಮಿಸಿದರು. ಬಸವ ಇಂಟರ್‌ನ್ಯಾಶನಲ್ ಸೆಂಟರ್‌ನ ಸದಸ್ಯರು ಹೆಚ್ಚಿನ ಸಂಖ್ಯೆಯಲ್ಲಿ ಭಾಗವಹಿಸಿ ಕಾರ್ಯಕ್ರಮವನ್ನು ಯಶಸ್ವಿಗೊಳಿಸಿದರು.

● ಚಂದ್ರಶೇಖರ ಎನ್.ಪಿ.

# ಸ್ನೇಹಾ ದೆಹಲಿ ಕನ್ನಡ ಲೇಡಿಸ್ ಅಸೋಸಿಯೇಶನ್ (ರಿ) ಪಿಕ್‌ನಿಕ್



**ಫೆಬ್ರವರಿ 15, 2012 ರಂದು ದೆಹಲಿಯ ಲೋದಿ ಗಾರ್ಡನ್‌ನಲ್ಲಿ ನಡೆದ ಪಿಕ್‌ನಿಕ್‌ನಲ್ಲಿ ಪಾಲ್ಗೊಂಡ ಸ್ನೇಹಾ ಕನ್ನಡ ಲೇಡಿಸ್ ಅಸೋಸಿಯೇಶ್‌ನ ಉತ್ಸಾಹಿ ಸದಸ್ಯೆಯರು**

## ಓದುಗರ ಅನಿಸಿಕೆ

‘ಅಭಿಮತ’ವನ್ನು ಅನೇಕ ವರ್ಷಗಳಿಂದ ಓದುತ್ತ ಬಂದವನು ನಾನು. ಉದ್ದಕ್ಕೂ ಅದು ಕಾಪಿಟ್ಟುಕೊಂಡು ಬಂದ ಕನ್ನಡದ ತಾಜಾತನ ನನ್ನನ್ನು ಸಾಕಷ್ಟು ಪ್ರಭಾವಿಸಿದೆ. ರಾಷ್ಟ್ರದ ರಾಜಧಾನಿಯ ಜಾಗೃತ ಕಣ್ಣಾಗಿ, ಅದು ಇಡೀ ಕರ್ನಾಟಕವನ್ನು ಮಾತ್ರವಲ್ಲ ಎಲ್ಲೆಲ್ಲಿ ಕನ್ನಡದ ಒಳ್ಳೆಯ ಕೆಲಸ ನಡೆಯುತ್ತದೆಯೊ ಅಲ್ಲೆಲ್ಲ ಕಣ್ಣಾಡಿಸಿ ಪರಿಚಯಿಸುತ್ತಿರುವುದು–ಸಾಧಕರ ಬೆನ್ನುತಟ್ಟಿ ‘ಭಲೆ’ ಅನ್ನುತ್ತಿರುವುದು ನನ್ನ ಗಮನದಲ್ಲಿದೆ.

ಪ್ರಸ್ತುತ ಫೆಬ್ರವರಿ ಸಂಚಿಕೆಯಂತೂ ಗೌರೀಶ ಕಾಯ್ಕಿಣಿ ಜನ್ಮಶತಮಾನೋತ್ಸವದ ವಿಶೇಷಾಂಕದ ರೂಪದಲ್ಲಿ ಮೈತಳೆದಿರುವುದು ಉಲ್ಲೇಖಿಸಲೇಬೇಕಾದ ಅಂಶ. ಕಾಯ್ಕಿಣಿ ಶತಮಾನೋತ್ಸವಕ್ಕೆ ಕೇಂದ್ರ ಸಾಹಿತ್ಯ ಅಕಾಡೆಮಿ ಆರ್ಥಿಕ ನೇತೃತ್ವ ಸಿಕ್ಕಿದ್ದಕ್ಕೆ ನಮ್ಮ ಕಡೆಯ ಪ್ರಯತ್ನವಾಗಿರಬಹುದು, ಆದರೆ ಎರಡು ದಿನಗಳ ಈ ಕಾರ್ಯಕ್ರಮವನ್ನು ಅದರ ಮೂಲ ಆಶಯಕ್ಕೆ ಒಂದಿಷ್ಟೂ ಕೊರತೆಯಾಗದಂತೆ–ಸಂಘಟಿಸಿದ ಶ್ರೇಯಸ್ಸು ನಿಸ್ಸಂದೇಹವಾಗಿಯೂ ದೆಹಲಿ ಕರ್ನಾಟಕ ಸಂಘದ್ದು. ನಿಮ್ಮೆಲ್ಲರೊಂದಿಗಿನ ಎರಡು ದಿನಗಳ ಸೌಹಾರ್ದತೆಯ ಸುಖ ಅನುಭವಿಸಿ ಬಂದವರಲ್ಲಿ ನಾನು ಒಬ್ಬನಾದುದರಿಂದ ಈ ಮಾತನ್ನು ಬರೆಯುತ್ತಿದ್ದೇನೆ.

ಸಂಘದ ಅಧ್ಯಕ್ಷರಾದ ಡಾ. ವೆಂಕಟಾಚಲ ಹೆಗಡೆ ಮತ್ತು ಮಾಜಿ ಅಧ್ಯಕ್ಷರಾದ ಡಾ. ಪುರುಷೋತ್ತಮ ಬಿಳಿಮಲೆ ಹಾಗೂ ಸಂಘದ ಎಲ್ಲ ಪದಾಧಿಕಾರಿಗಳು ಮತ್ತು ಸದಸ್ಯರುಗಳ ಶ್ರಮ, ಸಮಯ, ಬುದ್ಧಿ ಆ ಕಾರ್ಯಕ್ರಮದ ಯಶಸ್ಸಿನ ಹಿಂದೆ ಬಳಕೆಯಾಗಿರುವುದುನ್ನು ಗೌರೀಶ ಕಾಯ್ಕಿಣಿ ಜನ್ಮಶತಮಾನೋತ್ಸವ ಕ್ರಿಯಾಸಮಿತಿ ಅಧ್ಯಕ್ಷನಾಗಿ ಕೃತಜ್ಞತೆಗಳೊಂದಿಗೆ ಸ್ಮರಿಸುತ್ತಿದ್ದೇನೆ. ಕಾದಿಟ್ಟುಕೊಳ್ಳಬೇಕಾದ ಈ ಆಕರ ಸಂಚಿಕೆಗಾಗಿ ಅಭಿನಂದನೆಗಳು.

● ವಿಷ್ಣು ನಾಯ್ಕ, ಅಂಬಾರಕೊಡ್ಲ, ಅಂಕೋಲಾ

ಇತ್ತೀಚೆಗೆ ತಮ್ಮ ಸಂಪಾದಕತ್ವದ ‘ಅಭಿಮತ’ ಪತ್ರಿಕೆಯನ್ನು ಓದುವ ಸದವಕಾಶ ದೊರೆಯಿತು. ಪತ್ರಿಕೆಯು ಅಚ್ಚುಕಟ್ಟಾಗಿ ಮೂಡಿಬರುತ್ತಿದೆ. ಮುದ್ರಣ ಅತ್ಯುತ್ತಮವಾಗಿದೆ ವಿನ್ಯಾಸ ಹಾಗೂ ಫೋಟೋಗಳೂ ಚೆನ್ನಾಗಿವೆ. ಬರವಣಿಗೆಯ ಶೈಲಿ ಮುದನೀಡಿತು ಹಾಗೂ ಸಂಗ್ರಹಿಸಿದ ಮಾಹಿತಿ ಉಪಯುಕ್ತ. ಸರಕಾರೀ ಜಾಹೀರಾತುಗಳಿಲ್ಲದೇ ನೀವು ಪತ್ರಿಕೆ ಪ್ರಕಟಿಸುತ್ತಿರುವುದು, ಅದರಲ್ಲೂ ಕನ್ನಡ ಪತ್ರಿಕೆಯನ್ನು ಪ್ರಕಟಿಸಿ ಕೇವಲ ಒಂದು ರೂಪಾಯಿಗೆ ಓದುಗರಿಗೆ ಒದಗಿಸುತ್ತಿರುವುದು ಭಗೀರತ ಪ್ರಯತ್ನವೇ ಸರಿ. ನಿಮ್ಮ ಸತ್ಪ್ರಯತ್ನದ ಜ್ಞಾನಗಂಗೆ ಕನ್ನಡಿಗರ ಮನಮುಟ್ಟಲಿ, ಜ್ಞಾನ ಬೆಳಗಲಿ, ಕನ್ನಡತನ ಸದಾ ಉಳಿಯಲಿ.

ಕನ್ನಡಕ್ಕಾಗಿ ನಿಮ್ಮ ಹಾಗೂ ನಿಮ್ಮ ಹಿಂದಿರುವ ಎಲ್ಲಾ ಪ್ರೇರಕ ಶಕ್ತಿಗಳಿಗೆ ನನ್ನ ವಿಶೇಷ ವಂದನೆ. ಬಾವುಟ ಹಾರಿಸಲು ಬಹಳಷ್ಟು ಜನ ಬೇಕಿಲ್ಲ. ಬಾವುಟ ಹಾರಿಸುವ ಅದಮ್ಯ ಚೇತನ ಬೇಕು. ಆದರೆ, ಆ ಬಾವುಟವು ನೋಡುಗರೆಲ್ಲರ ಮನಸ್ಸಿಗೂ ಸ್ಪೂರ್ತಿ ಹಾಗೂ ಉತ್ಸಾಹ ನೀಡುತ್ತದೆ. ದೂರದ ದೆಹಲಿಯಲ್ಲಿ ಕನ್ನಡದ ಬಾವುಟವನ್ನು ಹಾರಿಸುತ್ತಿರುವ ನಿಮ್ಮ ಸತ್ಪ್ರಯತ್ನದಿಂದ ಕನ್ನಡಿಗರೆಲ್ಲರ ಜಾಗೃತಿಯಾಗಲಿ, ನಿಮಗೆ ಅಭಿವಂದನೆಗಳು.

“ಏರಿಸಿ, ಹಾರಿಸಿ ಕನ್ನಡದ ಬಾವುಟ
ಹಾರಿಸಿ ತೋರಿಸಿ ಕೆಚ್ಚೆದೆಯ ಬಾವುಟ,
ಏಳ್ ಕನ್ನಡ ತಾಯ್, ಬಾಳ್ ಕನ್ನಡ ತಾಯ್, ಆಳ್ ಕನ್ನಡ ತಾಯ್
ಕನ್ನಡಿಗರೊಡನೆ ಓ ರಾಜೇಶ್ವರೀ” ಎಂಬ ಕವಿವಾಣಿಯನ್ನ
ನೆನಪಿಸುತ್ತಾ ಈ ಪತ್ರಕ್ಕೆ ಮಂಗಳ ಹಾಡುತ್ತೇನೆ. ಕನ್ನಡ ತಾಯಿಯ ಸುರಕ್ಷೆ ನಿಮ್ಮೆಲ್ಲರನ್ನೂ ಕಾಪಾಡಲಿ
ಇಂತು ನಿಮ್ಮ ಕನ್ನಡದ ಸಹೋದರ,

● ರಮೇಶ ಬಿ.ಎಂ. ಕರ್ನಾಟಕ ಬ್ಯಾಂಕ್ ಲಿ, ಮಂಗಳೂರು

ರಾಜಧಾನಿಗೆ ಶತಮಾನದ ಸಂಭ್ರಮ ಎಂಬ ಫಲಕದ ಹೆಬ್ಬಾಗಿಲನ್ನು ಕೇಂದ್ರೀಕರಿಸಿ ವಿಜೃಂಭಿಸಿದ ಅಭಿಮತದ ಜನವರಿ ಸಂಚಿಕೆ ಸಂಪುಟ ಇಪ್ಪತ್ತೆರಡರ ಬಣ್ಣನೆಗೂ ಸಾಕ್ಷಿ ಎನಿಸಿತು. ಹೊಸ ವರ್ಷದ ಹೊಸ್ತಿಲಲ್ಲಿ ಶುಭಕೋರಿ ಬರಮಾಡಿದ ದೆಹಲಿ ಕರ್ನಾಟಕ ಸಂಘದ ಅಧ್ಯಕ್ಷ ಡಾ. ವೆಂಕಟಾಚಲ ಹೆಗಡೆಯವರ ದೆಹಲಿ ಕನ್ನಡಿಗ ಬಳಗದ ನೆನಸು ಕನಸುಗಳ ಅನಿಸುವಿಕೆಯ ವಿಶ್ಲೇಷಣಾ ವಿವರಣೆಯ ಮುಖ್ಯಾಂಶಗಳು ಅರ್ಥಗರ್ಭಿತ ಹಾಗೂ ಸಮರ್ಥಿತವೆನಿಸಿಕೊಂಡವು.

ಆರ್. ರೇಣುಕುಮಾರ್ ಅವರು ಸಚಿತ್ರ ದಾಖಲೆಯೊಂದಿಗೆ ಸವಿವರವಾಗಿ ಬಣ್ಣಿಸಿದ ದೆಹಲಿ ಕನ್ನಡ ಶಾಲೆಯ ಸುವರ್ಣಮಹೋತ್ಸವ ಸಮಾರಂಭ, ಯಕ್ಷಗಾನದ ಮೋಡಿಗೆ ಒಳಗಾದ ಕ್ಯಾಥರಿನ್ ಅವರೊಡನೆ ಸಂವಾದ, ರಾಜಧಾನಿಗೆ ವರುಷ ನೂರು ಎಂಬ ಮುಖ್ಯ ವಿಷಯದ ಬಗ್ಗೆ ಡಾ. ಜಿ.ಎ. ಬಿರಾದಾರ ಹಾಗೂ ಡಾ. ಪುರುಷೋತ್ತಮ ಬಿಳಿಮಲೆ ಅವರುಗಳು ಪೈಪೋಟಿಯಿಂದಲೋ ಎಂಬ ಹಾಗೆ ವಿವಿಧ ಕೋನಗಳಿಂದ ವಿವಿಧ ರೀತಿಯ ವಿಷಯಗಳಿಗೆ ಅಕ್ಷರದ ಹೊಳಪು ನೀಡಿ ಮನಸೂರೆಗೊಳಿಸಿದ್ದಾರೆ.

ನನಸಾದ ಕನಸು–ಅಂಟಾರ್ಟಿಕ್ ಐಸ್ ಮ್ಯಾರಾಥಾನ್ ಎಂಬ ವಿಶೇಷ ಪ್ರವಾಸಿ ಅನುಭವದ ಬರಹ ಆಸರೆದಾಯಕವಾದುದು ಮಾತ್ರವಲ್ಲ ಓದಿಸಿಕೊಂಡವರನ್ನು ಪರಿಣಾಮಕಾರಿಯಾಗಿ ಆವರಿಸಿ ಹಿಮವರ್ತುಲದ ಈ ವಿಶೇಷ ಅಭಿಯಾನದಲ್ಲಿ ತಾವೇ ಸ್ವತಃ ಪಾಲುಗಾರಿಕೆಯನ್ನೂ ಹೊಂದಿರುವ ಸಮತೋಲನೆಗೆ ಮನಪ್ರೇರಣೆ ನೀಡುತ್ತಿರುವುದು ಸತ್ಯ.

ಒಟ್ಟಿನಲ್ಲಿ ಈ ಸಂಚಿಕೆ ಸತ್ಯಂ–ಶಿವಂ–ಸುಂದರಂ ಎಂಬ ಸಂತ ವಾಣಿಯನ್ನು ನೆನವರಿಸಿಕೊಟ್ಟುದು ನಿಜ. ಅಭಿನಂದನೆಗಳು.

● ಕೀರಿಕ್ಕಾಡು ವನಮಾಲ ಕೇಶವ ಭಟ್ಟ, ಕಾಸರಗೋಡು

### ಕನ್ನಡ ಬಳಗ ರಾಜೇಂದ್ರನಗರದ ಸಾಮೂಹಿಕ ಸತ್ಯನಾರಾಯಣ ಪೂಜೆ



ಕನ್ನಡ ಬಳಗ ರಾಜೇಂದ್ರನಗರದ 18ನೇ ವರ್ಷದ ಸಾಮೂಹಿಕ ಸತ್ಯನಾರಾಯಣ ಪೂಜೆಯು 12.02.2012 ರಂದು ಹೊಸ ರಾಜೇಂದ್ರನಗರದ ಸಾರಸ್ವತ ಸಾಂಸ್ಕೃತಿಕ ಭವನದಲ್ಲಿ ಬಹಳ ವಿಜೃಂಭಣೆಯಿಂದ ನಡೆಯಿತು. ಮುಖ್ಯ ಪುರೋಹಿತರಾಗಿ ಶ್ರೀ ಹರೀಶ ಭಟ್ಟರು ಕಾರ್ಯ ನಿರ್ವಹಿಸಿದ್ದರು. ಪೂಜಾ ಕರ್ತೃಗಳಾಗಿ ಶ್ರೀಮತಿ ಮತ್ತು ಶ್ರೀ ಮಹಾಲಿಂಗೇಶ್ವರ ದಂಪತಿಗಳು ಪೂಜೆ ನೆರವೇರಿಸಿದರು. ಮಧ್ಯಾಹ್ನ ಮಂಗಳಾರತಿ ತದನಂತರ ಪ್ರಸಾದ ಭೋಜನದೊಂದಿಗೆ ಮುಕ್ತಾಯವಾದ ಕಾರ್ಯಕ್ರಮದಲ್ಲಿ 200 ಕ್ಕೂ ಅಧಿಕ ಸಂಖ್ಯೆಯಲ್ಲಿ ಭಕ್ತ ಜನರು ಪಾಲ್ಗೊಂಡಿದ್ದರು.

● ಗೋಪಾಲಕೃಷ್ಣ ಭಟ್, ಕಾರ್ಯದರ್ಶಿ

**ಸಾಧನ ಸಂಗಮ ಟ್ರಸ್ಟ್, ಬೆಂಗಳೂರು ನೃತ್ಯ ಕೇಂದ್ರ**

**ಪ್ರಸ್ತುತಪಡಿಸುವ “ಪ್ರೇಕ್ಷಾಗೃಹ” ನೃತ್ಯ ರೂಪಕ (ಮಹಾಭಾರತದ ಸನ್ನಿವೇಶಗಳ ಆಧಾರಿತ) ದೆಹಲಿ ಕರ್ನಾಟಕ ಸಂಘದ ಸಭಾಂಗಣದಲ್ಲಿ ಏಪ್ರಿಲ್ 1, 2012, ಭಾನುವಾರ ಸಂಜೆ 6.00 ಗಂಟೆಗೆ ನಡೆಯಲಿದೆ.**

**ತಮಗೆಲ್ಲರಿಗೂ ಆದರದ ಸ್ವಾಗತ**

# ರಂಗದಾಖಲಾತಿ ಪ್ರದರ್ಶನ



ಜನವರಿ 6ರಂದು ದೆಹಲಿ ಕರ್ನಾಟಕ ಸಂಘದ ಆರ್ಟ್ ಗ್ಯಾಲರಿಯಲ್ಲಿ ಆಯೋಜಿಸಿದ 'ರಂಗದಾಖಲಾತಿ ಪ್ರದರ್ಶನ' ಒಂದು ವಾರ ನಿರಂತರವಾಗಿ ದೆಹಲಿ ರಂಗಾಸಕ್ತರ ಗಮನವನ್ನು ಸೆಳೆಯುವಲ್ಲಿ ಯಶಸ್ವಿಯಾಯಿತು. ಚಿಕ್ಕಮಗಳೂರು ಜಿಲ್ಲೆಯ, ಅಜ್ಜಂಪುರದ ರಂಗಕಲಾವಿದ ಎ.ಎಸ್. ಕೃಷ್ಣಮೂರ್ತಿ ಅವರು ತಮ್ಮ ಜೀವಮಾನದ ಬಹುಪಾಲನ್ನು ರಂಗದಾಖಲಾತಿ ಸಂಗ್ರಹದಲ್ಲೇ ಕಳೆದಿದ್ದಾರೆಂದರೆ ತಪ್ಪಾಗಲಾರದು. ನಲ್ವತ್ತು ವರ್ಷಗಳ ಕಾಲ ವಿವಿಧ ವೃತ್ತ ಪತ್ರಿಕೆಗಳಲ್ಲಿ, ನಿಯತಕಾಲಿಕಗಳಲ್ಲಿ ಬಂದ ಲೇಖನಗಳನ್ನು ಸಂಗ್ರಹಿಸಿ, ಹಾಳಾಗದಂತೆ ಲ್ಯಾಮಿನೇಷನ್ ಮಾಡಿಸಿ, ನೋಡುವವರಿಗೆ ಅನುಕೂಲವಾಗುವಂತೆ ಕಾಪಿಟ್ಟುಕೊಂಡಿದ್ದಾರೆ. ಅವರ ಸಂಗ್ರಹದಲ್ಲಿ ಸುಮಾರು ಇಪ್ಪತ್ತೈದು ಸಾವಿರಕ್ಕೂ ಹೆಚ್ಚು ರಂಗದಾಖಲೆಗಳಿವೆ. ಇಲ್ಲಿ ಪ್ರದರ್ಶಿಸಿದ್ದು ಕೇವಲ ನೂರರಲ್ಲಿ ಐದರಷ್ಟು ಮಾತ್ರ. ಈ ಕಾರ್ಯಕ್ರಮವನ್ನು ಹಿರಿಯ ನಿವೃತ್ತ ಲಲಿತ ಕಲಾ ಅಕಾಡೆಮಿಯ, ಗ್ರಂಥಪಾಲಕ-ಶ್ರೀ ಜಯಪ್ರಕಾಶ್ ಬೆಂಗೇರಿ ಅವರು ಉದ್ಘಾಟಿಸಿ ಮಾತನಾಡಿದರು. ಯಾವ ವಿಶ್ವವಿದ್ಯಾಲಯಗಳೂ ಮಾಡದ ಅಸಾಮಾನ್ಯ ಕೆಲಸವನ್ನು ಎ.ಎಸ್. ಕೃಷ್ಣಮೂರ್ತಿ ಅವರು ಮಾಡಿದ್ದಾರೆ ಎಂದು ಶ್ಲಾಘಿಸಿದರು. ನಂತರ ಮಾತನಾಡಿದ ಶ್ರಿ.ಎ.ಎಸ್. ಕೃಷ್ಣಮೂರ್ತಿ ಅವರು ತಾವು ಸುಮಾರು ನಲ್ವತ್ತು ವರ್ಷದಿಂದ ರಂಗಭೂಮಿಯಲ್ಲಿ ದುಡಿಯುತ್ತಿದ್ದು ಹಿಂದೊಮ್ಮೆ ಆಕಸ್ಮಿಕವಾಗಿ ಸಿಕ್ಕ ರಂಗ ದಾಖಲೆಯೊಂದನ್ನು ಕಾದಿರಿಸುವ ಮೂಲಕ ಪ್ರಾರಂಭವಾದ ಗೀಳು, ಈಗ ಹವ್ಯಾಸವಾಗಿ ಬೆಳೆದಿದೆ ಎಂದರು. ಲಕ್ಷಗಟ್ಟಲೇ ಹಣ ಕೊಟ್ಟರೂ ಸಿಗದ ಸುಖ ಈ ತಮ್ಮ ಸಂಗ್ರಹಿತ ರಂಗದಾಖಲಾತಿಗಳನ್ನು ಆಗಾಗ ಓದಿಕೊಳ್ಳುವುದರಿಂದ ಸಿಗುತ್ತದೆಂಬ ಮಾತನ್ನು ಆಡಿದರು. ಈ ಕೆಲಸದಲ್ಲಿ ಸಹಭಾಗಿಯಾಗುವ ಯೋಗೇಂದ್ರ ಸಿಂಗ್ ಮತ್ತು ತಾವು ಊಟ-ತಿಂಡಿಯ ಪರಿವೆ ಇಲ್ಲದೇ ಹುಚ್ಚರಂತೆ ದಿನಗಟ್ಟಲೇ ಈ ಕೆಲಸದಲ್ಲಿ ಕಳೆದದ್ದನ್ನು ಭಾವಪೂರ್ಣವಾಗಿ ನೆನೆದರು. ತಾವು ಯಾವುದೇ ಫಲಾಪೇಕ್ಷೆಯಿಲ್ಲದೇ ಈ ಕಾರ್ಯವನ್ನು ಸ್ವ ಇಚ್ಛೆಯಿಂದ ಮಾಡುತ್ತಿರುವುದಾಗಿ, ಈವರೆಗೆ ಅನೇಕ ರಂಗಾಸಕ್ತರು, ರಂಗ ಸಂಶೋಧನೆಯಲ್ಲಿ ಆಸಕ್ತ ವಿದ್ಯಾರ್ಥಿಗಳೂ ಈ ದಾಖಲಾತಿಯ ಪ್ರಯೋಜನವನ್ನು ಪಡೆದಿದ್ದಾರೆ ಎಂದು ತಿಳಿಸಿದರು. ಬೆಳಗಾವಿಯಲ್ಲಿ ನಡೆದ ವಿಶ್ವಕನ್ನಡ ಸಮ್ಮೇಳನದಲ್ಲಲ್ಲದೇ, ಧಾರವಾಡ, ಹುಬ್ಬಳ್ಳಿ, ಹುನಗುಂದ, ಬೆಂಗಳೂರು, ಸಾಣೇಹಳ್ಳಿ ಮುಂತಾಗಿ ನಾಡಿನ ಅನೇಕ ಸ್ಥಳಗಳಲ್ಲಿ ಪ್ರದರ್ಶನವನ್ನು ನೀಡಿದ್ದಾಗಿ ಹೇಳಿದರು. ಉದ್ಘಾಟನಾ ಕಾರ್ಯಕ್ರಮದ ಅಧ್ಯಕ್ಷತೆಯನ್ನು ವಹಿಸಿದ ಸಂಘದ ಅಧ್ಯಕ್ಷ ಡಾ.ವೆಂಕಟಾಚಲ ಹೆಗಡೆ ಅವರು ದೆಹಲಿ ಕರ್ನಾಟಕ ಸಂಘಕ್ಕೆ ಗಣ್ಯಾತಿಗಣ್ಯ ಕಲಾವಿದರು, ಸಾಹಿತಿಗಳು ಬರುತ್ತಲೇ ಇರುತ್ತಾರೆ, ಆದರೆ ಅಜ್ಜಂಪುರದಂಥ ಪುಟ್ಟ ಪುಟ್ಟ ಹಳ್ಳಿ, ಊರುಗಳಿಂದ ಕಲಾವಿದರು ಬರುವುದರಿಂದ ಅವರಿಗೂ ಈ ಮೂಲಕ ರಾಜಧಾನಿವರೆಗೂ ಬರುವ ಅವಕಾಶ ಸಿಕ್ಕಂತಾಗುತ್ತದೆ ಹಾಗೂ ಇಂಥ ಪ್ರತಿಭೆಗಳನ್ನು ಗುರುತಿಸಿ ಪ್ರೋತ್ಸಾಹಿಸುವುದರಿಂದ ಸಂಘದ ಘನತೆ, ಗೌರವಗಳು ವೃದ್ಧಿಯಾದಂತಾಗುತ್ತದೆಂಬ ಮಾತನ್ನು ಅರ್ಥಪೂರ್ಣವಾಗಿ ನುಡಿದರು ಹಾಗೂ ಎ.ಎಸ್.ಕೃಷ್ಣಮೂರ್ತಿಯವರ ಅಸಾಮಾನ್ಯ ಸಂಗ್ರಹಕ್ಕೆ ಮೆಚ್ಚುಗೆ ಸೂಸಿದರು. ಗಣೇಶ ಮಿತ್ರ ಮಂಡಳಿ ಹಾಗೂ ದಿನಕರ ತಂಡದಿಂದ ಶ್ರೀ.ಶಿವಾನಂದ ಇಂಗಳೇಶ್ವರ ಅವರು ಕಾರ್ಯಕ್ರಮ ನಿರ್ವಹಿಸಿದರು.

ಸಮಾರೋಪ : 12 ಫೆಬ್ರವರಿ , ರಂಗೋತ್ಸವದ ಸಂದರ್ಭದಲ್ಲಿ ಒಂದು ವಾರದವರೆಗೆ ನಡೆದ 'ರಂಗ ದಾಖಲಾತಿ ಪ್ರದರ್ಶನ'ದ ಸಮಾರೋಪದ ಪುಟ್ಟ ಸಮಾರಂಭ ನಡೆಯಿತು. ಅತಿಥಿಗಳಾಗಿ ಆಗಮಿಸಿದ್ದ ಶ್ರೀ ಅರವಿಂದ ಕೌಜಲಗಿ ಅವರು ಕೃಷ್ಣಮೂರ್ತಿ ಅವರ ರಂಗಾದಾಖಲಾತಿ ಪ್ರದರ್ಶನಕ್ಕೆ ಮೆಚ್ಚುಗೆ ವ್ಯಕ್ತಪಡಿಸುತ್ತ ರಂಗೋತ್ಸವದ ಶುಭಾರಂಭಕ್ಕೆ ಶುಭ ಹಾರೈಸಿದರು. ಅಧ್ಯಕ್ಷತೆ ವಹಿಸಿದ ಡಾ.ವೆಂಕಟಾಚಲ ಹೆಗಡೆ ಅವರು ರಂಗದಾಖಲಾತಿ ಪ್ರದರ್ಶನದ ಹಿನ್ನೆಲೆ ಮತ್ತು ಈಗಾಗಲೇ ಕರ್ನಾಟಕ ನಾಟಕ ಅಕಾಡೆಮಿ ಕೃಷ್ಣಮೂರ್ತಿ ಅವರ ಅಪಾರ ಸಂಗ್ರಹದ ಸಾಧನೆಯನ್ನು ಡಿಜಿಟಲೀಕರಿಸುವುದರ ಮೂಲಕ ಗುರುತಿಸಿದ್ದಾರೆಂಬ ಮಾತನ್ನು ಹೆಮ್ಮೆಯಿಂದ ಹೇಳಿ ಅವರಿಗೆ ಮತ್ತಷ್ಟು ಯಶಸ್ಸು ದೊರೆಯಲೆಂದು ಹಾರೈಸಿದರು. ಎ.ಎಸ್.ಕೃಷ್ಣಮೂರ್ತಿ ಹಾಗೂ ಬೆಳಕು ಸಂಯೋಜಕ ಶ್ರೀ ಯೋಗೇಂದ್ರ ಸಿಂಗ್ ಅವರನ್ನು ದೆಹಲಿ ಕರ್ನಾಟಕ ಸಂಘದ ಸ್ಮರಣಿಕೆ ಹಾಗೂ ಹೂಗುಚ್ಛ ನೀಡಿ ಸಂಘದ ಅಧ್ಯಕ್ಷ ಡಾ ಹೆಗಡೆ ಅವರು ಗೌರವಿಸಿದರು. ಹಿಂದೆ 'ಕನ್ನಡ ಭಾರತಿ' ತಂಡದ ಮೂಲಕ ಸಕ್ರಿಯರಾಗಿದ್ದ ಅರವಿಂದ ಕೌಜಲಗಿ ಅವರನ್ನು ಪುಷ್ಪಗುಚ್ಛ ನೀಡಿ ಸ್ವಾಗತಿಸಿದರು. ವೈ. ಅವನೀಂದ್ರನಾಥ್ ರಾವ್ ಕಾರ್ಯಕ್ರಮವನ್ನು ನಿರ್ವಹಿಸಿದರು. ಸಂಘದ ಸಹಕಾರ್ಯದರ್ಶಿ ರೇಣುಕಾ ನಿಡಗುಂದಿ ವಂದಿಸಿದರು.

● ರೇಣುಕಾ ನಿಡಗುಂದಿ

## ಜನಕಪುರಿ ಕನ್ನಡ ಕೂಟ ಕರ್ನಾಟಕ ರಾಜ್ಯೋತ್ಸವ ಕ್ರೀಡಾಮಹೋತ್ಸವ ಹಾಗೂ ಕೂಟರತ್ನ ಪ್ರಶಸ್ತಿ ವಿತರಣೆ




ಜನಕಪುರಿ ಕನ್ನಡ ಕೂಟವು ಪ್ರತಿವರ್ಷದಂತೆ ಈ ವರ್ಷವೂ ಕೂಡ ಕೂಟರತ್ನ ಪುರಸ್ಕಾರವನ್ನು ಕೂಟದ ಹಿರಿಯ ಸದಸ್ಯರಾದ ಶ್ರೀ ಧೀರೇಂದ್ರ ರಾವ್ ಹಾಗೂ ಶ್ರೀ ಬಿ.ಆರ್. ವಿಶ್ವನಾಥ್‌ರವರಿಗೆ ನೀಡಿ ಗೌರವಿಸಿತು.

ಜನಕಪುರಿಯ ಮಾಡರ್ನ್ ಇರಾ ಕಾನ್ವೆಂಟ್ ಸ್ಕೂಲ್‌ನಲ್ಲಿ ನಡೆದ ಕಾರ್ಯಕ್ರಮದಲ್ಲಿ ಶ್ರೀ ದೀರೇಂದ್ರ ರಾವ್ ಅವರಿಗೆ ಜನಕಪುರಿ ಕನ್ನಡ ಕೂಟಕ್ಕೆ ಸಲ್ಲಿಸಿದ ಸೇವೆಯನ್ನು ಸ್ಮರಿಸುತ್ತಾ ಕೂಟರತ್ನ ಪುರಸ್ಕಾರವನ್ನು ನೀಡಿ ಗೌರವಿಸಲಾಯಿತು. ಶ್ರೀ ಎಚ್.ಎಸ್. ಕುಲಕರ್ಣಿಯವರು ದೀರೇಂದ್ರ ರಾವ್ ದಂಪತಿಗಳಿಗೆ ಪುರಸ್ಕಾರ ನೀಡಿ ಗೌರವಿಸಿದರು. ಕಾರ್ಯದರ್ಶಿ ಎಂ.ವಿ. ವೆಂಕಟೇಶ್ ಅವರ ಸೇವೆಯನ್ನು ವಿವರಿಸುತ್ತ ಶ್ಲಾಘಿಸಿದರು.

ಬೆಂಗಳೂರಿನಲ್ಲಿ ವಾಸವಾಗಿರುವ ಶ್ರೀ ಬಿ.ಆರ್. ವಿಶ್ವನಾಥ್‌ರವರಿಗೆ ಕೂಟದ ಅಧ್ಯಕ್ಷರಾದ ಶ್ರೀ ಬಿ.ಎಸ್. ರಾಮಕೃಷ್ಣ ಫೆಬ್ರವರಿ 5ರಂದು ಬೆಂಗಳೂರಿನಲ್ಲಿಯೇ ಒಂದು ಕಾರ್ಯಕ್ರಮವನ್ನು ಆಯೋಜಿಸಿ, ಜನಕಪುರಿಯಿಂದ ಮರಳಿ ಬೆಂಗಳೂರಿನಲ್ಲಿ ವಾಸವಾಗಿರುವ ಸದಸ್ಯರುಗಳನ್ನು ಆಮಂತ್ರಿಸಿ ಶ್ರೀ ಎಚ್.ಎಸ್. ಕುಲಕರ್ಣಿಯವರ ಅಧ್ಯಕ್ಷತೆಯಲ್ಲಿ ಶ್ರೀ ಬಿ.ಆರ್. ವೆಂಕಟೇಶ್ ದಂಪತಿಗಳಿಗೆ ಕೂಟರತ್ನ ಪುರಸ್ಕಾರ ನೀಡಿ ಗೌರಿವಿಸಿದರು. ಇದೇ ಸಂದರ್ಭದಲ್ಲಿ ಕೂಟದ ಆಟೋಟ ಸ್ಪರ್ಧೆಗಳನ್ನು ಸಹ ಆಯೋಜಿಸಲಾಗಿತ್ತು.


● ವೆಂಕಟೇಶ್ ಎಂ.ವಿ.

**Statement of Ownership and other Particulars about Delhi Karnataka Sangha's ABHIMATA**
**FORM-IV (See Rule 8)**

| | | |
|---|---|---|
| **Place of Publication** | : | Delhi Karnataka Sangha New Delhi |
| **Periodicity of Pub** | : | Monthly |
| **Printers Name** | : | M/s Saujanya Printing Press C-97, Okhla Industrial Area, Phase-I, New Delhi-110020 |
| **Publishers Name** | : | C.M. Nagaraja |
| **Nationality** | : | Indian |
| **Address** | : | Delhi Karnataka Sangha Rao Tularam Marg, Sector-12 R.K. Puram, New Delhi - 22 |
| **Editor's Name** | : | Smt. Usha Bharatadri |
| **Nationality** | : | Indian |
| **Address** | : | As Above |
| **Name & Address** | : | Delhi Karnataka Sangha of Individual who Rao Tularam Marg, Sector-12 own the News Paper R.K. Puram, New Delhi-110022 |

**I, C.M. Nagaraja, hereby declare that the particulars given above are true to the best of my knowledge and belief.**

**Sd\-**
**Publisher**


# Saujanya Printing Press

**A HOUSE OF QUALITY PRINTING**

**C-95, Okhla Industrial Area, Phase-I,**
**New Delhi - 110 020**
**Phone : 26815778, 41611143**
**Mobile : 9811104398, 9811604398**
**e-mail : rvprintingpress@gmail.com / hpgp2006@gmail.com**

ರಾಷ್ಟ್ರದ ರಾಜಧಾನಿಯಲ್ಲಿ ಕನ್ನಡಿಗರೊಬ್ಬರ
ಬಹುವರ್ಣದ ಸುಸಜ್ಜಿತ ಮುದ್ರಣಾಲಯ

**ಸೌಜನ್ಯ ಪ್ರಿಂಟಿಂಗ್ ಪ್ರೆಸ್** ಮತ್ತು **ಎಚ್.ಪಿ. ಗ್ರಾಫಿಕ್ ಪ್ರಿಂಟರ್ಸ್**

ನಾವು ಎಲ್ಲಾ ಬಗೆಯ ಮುದ್ರಣ ಕಾರ್ಯಗಳನ್ನು, ಸಮಯಕ್ಕೆ ಸರಿಯಾಗಿ ಅಚ್ಚುಕಟ್ಟಾಗಿ ಮಾಡಿಕೊಡುತ್ತೇವೆ.

ಪ್ರೊಸೆಸಿಂಗ್, ಪ್ಲೇಟ್ ಮೇಕಿಂಗ್, ಪ್ರಿಂಟಿಂಗ್ ಮತ್ತು, ಬೈಂಡಿಂಗ್ ಕೆಲಸಗಳಿಗಾಗಿ ನಮ್ಮನ್ನು ದಯವಿಟ್ಟು ಸಂಪರ್ಕಿಸಿರಿ.

**ಮುದ್ರಣವೂ ಒಂದು ಕಲೆ, ಅದುವೇ ನಮ್ಮ ನೆಲೆ**

# ಕಗ್ಗತ್ತಲಲ್ಲಿ ಕಣ್ಮರೆಯಾದ (ಕರಿ) ಬಸವಯ್ಯ

ಜೀವನ ಒಂದು ಆಕಸ್ಮಿಕ, ಅದ್ಭುತ, ಆಶ್ಚರ್ಯ, ಅವಿಸ್ಮರಣೀಯ ಅನುಭವ ಅಂತ ಎಲ್ಲಾ ಕೇಳಿ ತಿಳ್ಕೊಂಡಿದ್ದೀವಿ. ಆದರೆ ಅದೇ ಜೀವನ ಎಷ್ಟೊಂದು ಕ್ಷಣಿಕ ಹಾಗು ಕ್ರೂರ? ನನ್ನ 40 ವರ್ಷಗಳ ಜೀವನದಲ್ಲಿ ಕಂಡಂತ ಅತ್ಯಂತ ಸರಳ, ಮುಗ್ಧ, ಸ್ನೇಹಜೀವಿ ಹಾಗೂ ಮಾನವೀಯತೆಯ ಸಾಕಾರಮೂರ್ತಿ ಸಹೃದಯಿ ಆತ್ಮ, ನನ್ನ ಗೆಳೆಯ ಕರಿಬಸವಯ್ಯ (ಪ್ರೀತಿಯಿಂದ ಕೆ.ಬಿ.)



9845398184 ಮೊಬೈಲ್ ನಂಬರ್ ಡಯಲ್ ಮಾಡಿದ್ರೆ ಸಾಕು! ನಟವರ ಗಂಗಾಧರ, ಉಮಾಶಂಕರ-ಹಾಡಿನ ಎರಡು ಸಾಲು ಮುಗೀತಾ ಇದ್ದಂಗೆ ಅದೇ ಹಾಡಿನ ತರ, ರೆಕಾರ್ಡ್ಡ್ ಮೆಸೇಜ್ ಏನೋ ಅನ್ನೋಹಾಗೆ, ಒಂದೇ ಉಸಿರಿನಲ್ಲಿ ಅಣ್ಣಯ್ಯ-ಯಾವಾಗ ಬಂದ್ರಿ ಬೆಂಗ್ಳೂರ್ಗೆ-ಎಷ್ಟು ದಿವಸ ಬೆಂಗಳೂರ್ನಲ್ಲಿ, ಸಂಜೆ ಎಲ್ಲರೂ ಸೇರ್ಕೊಳ್ಳೋಣ-ಕೇಳುತ್ತಿದ್ದವು ಈ ಮಾತುಗಳು. ಆದರೆ ಜನವರಿ 29ನೇ ತಾರೀಖಿನಿಂದೀಚೆಗೆ ಅದೇ ನಂಬರ್ ಡಯಲ್ ಮಾಡ್ತಾ ಇದ್ದೀನಿ, ಒಮ್ಮೆ ಸಹ ಆ ರೆಕಾರ್ಡೆಡ್ ಮತ್ತು ಸ್ಟ್ಯಾಂಡರ್ಡ್ ರೆಸ್ಪಾನ್ಸ್ ಬರ್ತಾನೆ ಇಲ್ಲಾರಿ !!!

ನನ್ನ ಮಿತ್ತ, ನಿಮ್ಮೆಲ್ಲರ ಮಿತ್ರ ಸಮಸ್ತ ಮನುಕುಲದ ಮಿತ್ರ ಕರಿಬಸವಯ್ಯ (ಕೆ.ಬಿ) ರಸ್ತೆ ಅಪಘಾತಕ್ಕೊಳಗಾಗಿ ಫೆಬ್ರವರಿ 3ನೇ ತಾರೀಖು ದೈವಾಧೀನರಾಗ್ಹೋದ್ರು. ಮೊದಲೇ ಸರಿಯಾಗಿ ತಿಳಿದಿದ್ರೆ, ಅವರು ಬದುಕಿದ್ದ 2 ದಿನದಲ್ಲಿ ಒಂದ್ಸರಿ ಮಾತ್ನಾಡ್ರೂ ಆಡಿಸ್ತಾ ಇದ್ದೆ. 29ನೇ ತಾರೀಖು ಮಧ್ಯಾಹ್ನ ನ್ಯೂಸ್ ಡೆಸ್ಕ್‌ನಿಂದ ಶ್ರೀನಿವಾಸ ಗೌಡರು, ವಿಷಯ ಗೊತ್ತಾಯ್ತಾ, ಕರಿಬಸವಯ್ಯನವರಿಗೆ ಆಕ್ಸಿಡೆಂಟ್ ಆಗಿದೆ ಅಂತ ಕೇಳಿದ್ರು. ತಕ್ಷಣ ಕೆ.ಬಿ. ಸ್ನೇಹಿತ ಸುಧೀರ್‌ಗೆ ಫೋನ್ ಮಾಡಿದ್ರೆ, ಹೌದು ಬ್ರದರ್, ಸೀರಿಯಸ್ ಏನೂ ಇಲ್ಲ. ಡಾಕ್ಟರ್ ನಾಳೆ ತನಕ ನೋಡೋಣ ಅಂತ ಹೇಳಿದ್ರು. ಆಮೇಲೆ ಗೊತ್ತಾಯ್ತು, ಆವತ್ತೇ ಬೆನ್ನಿನ ಮೂಳೆ ತುಂಡಾಗಿ ಜೀವಾಪಾಯ ಇತ್ತು ಅಂತ.

ನನ್ನ ಮತ್ತು ಕರಿಬಸವಯ್ಯನವರ ಸ್ನೇಹ ಸರಿಸುಮಾರು 8–9 ವರ್ಷಗಳದ್ದು. ಕರಿಬಸವಯ್ಯನವರಿಗೆ ದೆಹಲಿ ಕರ್ನಾಟಕ ಸಂಘದ ನಂಟು ಸುಮಾರು 20 ವರ್ಷದ್ದು. 2004–05ನೇ ವರ್ಷದಲ್ಲಿ ಸಂಘದ ನಾಟಕವೊಂದಕ್ಕೆ ಬಂದಿದ್ದ ಕರಿಬಸವಯ್ಯನನ್ನು ಕರೆ ತರುವ ಜವಾಬ್ದಾರಿ ನನಗೆ ವಹಿಸಿದ್ದರು. ಕನ್ನಡ ಚಲನಚಿತ್ರದ ಅತ್ಯುತ್ತಮ ಕಲಾವಿದರಾಗಿದ್ದ ಕರಿಬಸವಯ್ಯನವರನ್ನು ಕರ್ಕೊಂಡು ಬರೋ ಅವಕಾಶ ಸಿಕ್ಕಾಗ ಬಹಳ ಸಂತೋಷದಿಂದ ಒಪ್ಪಿ, ವಿಮಾನ ನಿಲ್ದಾಣದಿಂದ ಬರಮಾಡಿಕೊಂಡು ಬಂದೆ. ಕೆಲವೇ ಗಂಟೆಗಳಲ್ಲಿ ಆತನಲ್ಲಿದ್ದ ಸ್ನೇಹಜೀವಿ ನನ್ನ ಹೃದಯ ಗೆದ್ದು ಬಿಟ್ಟಿದ್ದ. ಆವತ್ತು ಮೊದಲ ಬಾರಿ ಹೇಳಿದ್ದ ಡೈಲಾಗ್ ಕೊನೇವರೆಗೂ ನಮ್ಮ ಪ್ರತೀ ಭೇಟೀಲೂ ಗುನುಗುನಾಯಿಸ್ತಾ ಇತ್ತು. "ಹ್ಞಾ ಹಸ ಕಟ್ಟದೆಯಾ! ಹಾಲು ಕರೆಯದೆಯಾ! ಬೆಣ್ಣೆ ಮಾಡದೆಯಾ! ತುಪ್ಪ ತಿನ್ನದೆಯಾ!"–ಉಂಡೂ ಹೋದ, ಕೊಂಡೂ ಹೋದ ಚಿತ್ರದಲ್ಲಿ ಅದ್ಭುತ ಅಭಿನಯ.

ಕರಿಬಸವಯ್ಯ–ಅಪಘಾತಕ್ಕೀಡಾಗೋ ಒಂದು ವಾರ ಮುಂಚೆ ತನ್ನ ಮೊಮ್ಮಗನ ಬರ್ತ್‌ಡೇ ನಂದಿನಿ ಲೇಔಟ್‌ನ ಛತ್ರವೊಂದರಲ್ಲಿ ಮಾಡಿದ್ರು. ಈ ವಿಚಾರವಾಗಿ ಆತ ಎಷ್ಟು ಸಂತೋಷಗೊಂಡಿದ್ರು ಅಂದ್ರೆ! ಹೇಗೆ ಹೇಳೋದು ಅಂತ ಅರ್ಥಾನೇ ಆಗ್ತಾ ಇಲ್ಲ. ವೈಯಕ್ತಿಕ ಜೀವನದಲ್ಲಿ ಅದರಲ್ಲೂ ತನ್ನ ಹಿರಿ ಮಗಳ ಅಕಾಲಿಕ ನಿಧನದ ನಂತರ ದುಃಖ ಮರೀಲಿಕ್ಕೆ ಅಂತ ದೇಹದಂಡನೆ ಮಾರ್ಗ ಹಿಡಿದಿದ್ದರೋ ಏನೋ? ಆತ ದಿನಕ್ಕೆ ಸುಮಾರು 16–18 ಗಂಟೆ ಕಾಲ ಕೆಲಸ ಮಾಡ್ತಾ ಇದ್ರು. ಟಿ.ವಿ. ಸೀರಿಯಲ್‌ಗೆ 12ಗಂಟೆಗಳ ಅವಧಿ, ನಂತರ ಹರಿಕಥೆ, ಸಾರ್ವಜನಿಕ ಕಾರ್ಯಕ್ರಮಗಳು, ಮದುವೆ, ಮುಂಜಿ, ಎಲ್ಲಕ್ಕಿಂತ ಜಾಸ್ತಿ–ಯಾರು ಎಲ್ಲೇ ಪ್ರೋಗ್ರಾಂ ಕೇಳಲಿ 8–10ಗಂಟೆಗಳ ಕಾಲ ಡ್ರೈವ್ ಮಾಡಬೇಕಂದ್ರೂ ಪರ್ವಾಗಿಲ್ಲ ಒಪ್ಕೊಳ್ತೋದು. ಈ ರೀತಿ ದೇಹದಂಡನೆಯ ಪರಾಕಾಷ್ಠತೆಯನ್ನು ತಲುಪಿದ್ರು ಈ ಬಸವಯ್ಯ. ಅವರ ಮೊಮ್ಮಗನ ಜನ್ಮ ದಿನ ಆ ಎಲ್ಲಾ ದಣಿವನ್ನು ಅರಿಸಿತ್ತೇನೋ ಅನ್ನೋ ರೀತಿ ಅಷ್ಟೊಂದು ಸಂತೋಷದಿಂದ ಇದ್ರು, ನೆರೆದಿದ್ದ ಸಾವಿರಾರು ಜನರನ್ನೂ ತನ್ನ ಟ್ರೇಡ್ ಮಾರ್ಕ್ ನಗು ಮುಖದಿಂದ ಸ್ವಾಗತಿಸಿದ ಕರಿಬಸವಯ್ಯ ನನ್ನೊಟ್ಟಿಗೆ ಊಟ ಮಾಡಲಿಕ್ಕಾಗ್ಲಿಲ್ಲ ಅಂತ "ಸಂಜೆ ಕೂತ್ಕೊಳ್ಳೋಣ ಅಣ್ಣಯ್ಯ. ಸುರೇಶನ್ನ, ಸುಧೀರನ್ನ, ಬ್ಯಾಂಕ್ ಜನಾರ್ಧನ್ನ ಕರೀತೀನಿ, ಆರ್ಮುಗಂ ಅನಿಲ್ ಕರ್ಕೊಂಡು 'RASA' ಗೆ ಬಾರಣ್ಣ" ಅಂದ್ರು. ಯಾವತ್ತೂ ಲೇಟಾಗಿ ಬರ್ತಿದ್ದ ಕರಿಬಸವಯ್ಯ ಅವತ್ತು ದೇವರಾಣೆ ಹೇಳ್ತೀನಿ, ನಾನು ಕಾರ್‌ಪಾರ್ಕ್ ಮಾಡಿ ಹೀಗೆ ತಿರುಗಿದ್ರೆ, ಪ್ರತ್ಯಕ್ಷವಾಗಿದ್ರು. ಅದೇ ನಮ್ಮ ಕೊನೇ ಭೇಟಿ ಅಂತ ಗೊತ್ತಿತ್ತೋ ಏನೋ? ಪ್ರತಿ ಬಾರಿ ಕರ್ಕೋರೆಲ್ಲಾ ಬರ್ತಿದ್ದ ಪಾರ್ಟಿಗೆ ಆವತ್ತು ಶಾಪ ಅಂದ್ಹಂಗೆ ಎಲ್ಲರೂ ನಾಪತ್ತೆ. ನಾನು, ಕರಿಬಸವಯ್ಯ ಮತ್ತೆ ಪದ್ಮನಾಭ ಮೂರೇ ಜನ ಊಟ ಮಾಡ್ತಾ ಸುಮಾರು 3ಗಂಟೆ ಕಳೆದ್ವಿ. ಆವತ್ತು ಕರಿಬಸವಯ್ಯನ ಮುಖದಲ್ಲಿ ಏನೋ ಒಂಥರಾ ತೃಪ್ತಿ, ಸಂತೋಷ ಎದ್ದು ಕಾಣ್ತಾ ಇತ್ತು. ರೆಸ್ಟೋರೆಂಟಿನ ಸಿಂಗಲ್ ಲೋ ಪಿಚ್‌ನಲ್ಲಿ ಅಣ್ಣಾವ್ರ ಹಾಡುಗಳನ್ನ ಹಾಡ್ತಾ ಇದ್ದಾಗ–ಸರಿ ಇಲ್ಲ ಅಂತಹೇಳಿ–ತಾವೂ ಹಾಡಿದ್ರು, ತಾಳ ಹಾಕಿದ್ರು. ರಾತ್ರಿ 12ರ ತನಕ ಜೊತೇಲಿದ್ವಿ. 8–9 ವರ್ಷದಲ್ಲಿ ಮೊದಲ ಬಾರಿ ನಮ್ಮ ಬಿಲ್ ಕೊಟ್ರು. ಮಾರನೇ ದಿನ ಬೆಳಿಗ್ಗೆ 6.15ಕ್ಕೆ ನನ್ನ ಫ್ಲೈಟ್ ಇತ್ತು. 5.30ಕ್ಕೆ ಫೋನ್ ಮಾಡಿದಾಗ ನಾನು ಫೋನ್ ತಗೊಳ್ಳದಿದ್ದ ಕಾರಣ ಮೆಸೇಜ್ ಕಳಿಸಿದ್ರು "ಶುಭೋದಯ–ಶುಭಪ್ರಯಾಣ" ಇದೇ ಅವರ ಕಡೇ ಮೆಸೇಜ್. ಎಂಥ ದುರ್ದೈವಿ ನಾನು! ನಂತರ ಅವರ ಹತ್ರ ಮಾತ್ನಾಡ್ಲಿಕ್ಕೇ ಆಗಿಲ್ಲ–ಎಂಥಾ ಮಿಸ್ಡ್ ಕಾಲ್ ಅಲ್ವಾ?

ಮನಸು ಹೇಳ ಬಯಸಿದೆ–ನೂರೊಂದು! ಆದರೆ–ಏನು ಹೇಳೋದು–Nothing was special about him, But everything was very special in him. ಜೀವಮಾನ ಎಲ್ಲಾ ಬೇರೆಯವರ್ನ ನಗಿಸ್ತಾ ಇದ್ದ ಕೆಬಿಗೆ, ಬೇರೆಯವರಿಂದ ಜೋಕ್ ಕೇಳೋದು ಅಂದ್ರೆ ಭಾಳ ಇಷ್ಟ. ಸುರೇಶ, ಆರ್ಮುಗಂನ ಜೋಕ್‌ಗೆ ಬಿದ್ದೂ ಬಿದ್ದು ನಗ್ತಾ ಇದ್ರು ಕೆಬಿ. "ರಸ" ರೆಸ್ಟೋರೆಂಟಿನ ನೀರ್ ದೋಸೆ, ಶಾವಿಗೆ, ಕಾಯಿ ಹಾಲು ಅಂದ್ರೆ ಅವರಿಗೆ ಪಂಚಪ್ರಾಣ.

ರೂಪಾಂತರ, ಜನಪದರು, ಮೊದಲಾದ ತಂಡಗಳ ಮುಖಾಂತರ ದೆಹಲಿಗೆ ಬಂದು ಕರ್ನಾಟಕ ಸಂಘದಲ್ಲಿ ನಾಟಕ ಮಾಡಿ, ಸಂತೋಷಪಟ್ಟು, ದೆಹಲಿ ಕನ್ನಡಿಗರ ಬಗ್ಗೆ ಬಹಳ ಪ್ರೀತಿ ಹೊಂದಿದ್ದ ಕರಿಬಸವಯ್ಯನವರಿಗೆ ಸಂಘದಲ್ಲಿ ಹರಿಕಥೇ ಮಾಡಬೇಕು ಅಂಥಾ ಬ್ಹಾಳ ಆಸೆ ಇತ್ತು. ಮುಂದಿನ ಯುಗಾದಿಯಂದು ನಿನ್ನ ಹರಿಕಥೆ ಮಾಡೋಣ ಅಂತ ಹೇಳಿದ್ದೆ, ಆದರೆ ವಿಧಿಯ ಆಣತಿ ಬೇರೇನೆ ಇತ್ತು. ಕನ್ನಡ ಚಿತ್ರರಂಗದ ಕಿರಿಯರಿಂದ ಹಿಡಿದು ಅತ್ಯಂತ ಹಿರಿಯರವರೆಗೆ ಕರಿಬಸವಯ್ಯನನ್ನು ಇಷ್ಟಪಡದ ವ್ಯಕ್ತಿ ಇಲ್ಲ. ಡಾ. ರಾಜ್, ಡಾ. ವಿಷ್ಣುವರ್ಧನ್ ಒಳಗೊಂಡಂತೆ ಎಲ್ಲ ಹಿರಿಯ ಕಲಾವಿದರೊಂದಿಗೆ ನಟಿಸಿರುವ ಕರಿಬಸವಯ್ಯ ಇನ್ನು ನೆನಪು ಮಾತ್ರ. ಇವರು ತಮ್ಮ ಪತ್ನಿ, ಪುತ್ರಿ, ಅಳಿಯ ಹಾಗೂ ಮೊಮ್ಮಗನೊಂದಿಗೆ, ನಮ್ಮಂಥ ಸಾವಿರಾರು ಸ್ನೇಹಿತರನ್ನು ಲಕ್ಷಾಂತರ ಅಭಿಮಾನಿಗಳನ್ನು ಬಿಟ್ಟು ಅಗಲಿದ್ದಾರೆ. ಬಸವಯ್ಯನವರ ಅಗಲಿಕೆಯನ್ನು ಭರಿಸುವ ಶಕ್ತಿಯನ್ನು ಅವರ ಕುಟುಂಬದವರಿಗೆ ಭಗವಂತ ಕಲ್ಪಿಸಲಿ.

ಕೊನೆಯದಾಗಿ ಮತ್ತೊಂದ್ಸಾರಿ ಹೇಳ್ತೀವಿ. ಮನುಷ್ಯ–ಸಂಘಜೀವಿ, ಸ್ನೇಹಜೀವಿ ಮತ್ತು ಕರುಣೆ, ಪ್ರೀತಿ, ಅವರ ಗೌರವ ಮಾನವೀಯತೆಯ ಮೂಲ ಮೌಲ್ಯಗಳು ಅಂತ ಅನ್ನೋದು ನಿಜವಾಗಿದ್ರೆ–ಕರಿಬಸವಯ್ಯ–ಅಕ್ಷರಶಃ ಈ ವ್ಯಾಖ್ಯೆಗೆ ಅತ್ಯಂತ ನಿಕರವಾದ ವ್ಯಕ್ತಿತ್ವರೀ.

ಕೇವಲ 10ದಿನಗಳ ಅವಧಿಯಲ್ಲಿ ನನ್ನ ಮಿತ್ರನ ಅತ್ಯಂತ ಸಂತೋಷದ ಹಾಗೂ ಅತ್ಯಂತ ದುಃಖದ ದಿನಗಳನ್ನು ಕಂಡ ನನಗೆ ನಿಜವಾಗ್ಯೂ ಇದರಿಂದ ಹೊರಬರಲಿಕ್ಕೆ 2–3ದಿವಸಾನೇ ಬೇಕಾಯ್ತು.

ನಿನ್ನ ಸಾಮೀಪ್ಯದಿಂದ ಸದಾ ಸಂತಸ ಹಂಚಿ, ಲಕ್ಷಾಂತರ ಜನರ ಮುಖದಲ್ಲಿ ಮುಗುಳ್ನಗೆ ತಂದ ನೀನು, ಸಾವಿನಲ್ಲೂ ಸಾರ್ಥಕತೆಯನ್ನು ಕಂಡೆ, ನಿನ್ನ ಕಣ್ಣುಗಳನ್ನು ದಾನ ಮಾಡಿ ದೃಷ್ಟಿ ಹೀನರಿಗೆ ದಾರಿದೀಪವಾದ ಕರಿಬಸವಯ್ಯ–ನಿನ್ನ ಮಿತ್ರ ಹಾಗೂ ನಿನ್ನ ಅಭಿಮಾನಿಗಳ ಹೃದಯದಲ್ಲಿ ಚಿರಂತವಾಗಿರು, ಶಾಶ್ವತವಾಗಿರು.

ನಿನ್ನ ಆತ್ಮೀಯ ಗೆಳೆಯ

● ಆರ್. ರೇಣುಕುಮಾರ್

## ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾಗಿ ಶ್ರೀ ಎಂ.ಎನ್ ಗೌಡ ಮತ್ತು ಡಾ. ಹೆಚ್. ಎಸ್ ರಾಜೇಂದ್ರಸಿಂಗ್, ಕೆ.ಎ.ಎಸ್



ದೆಹಲಿಯಲ್ಲಿ ಕೇಂದ್ರ ಸರ್ಕಾರದ ವಿವಿಧ ಇಲಾಖೆಯಲ್ಲಿ 35 ವರ್ಷಗಳ ಕಾಲ ಸೇವೆ ಸಲ್ಲಿಸಿ ಇತ್ತೀಚೆಗೆ ಗ್ರಾಮೀಣಾಭಿವೃದ್ಧಿ ಇಲಾಖೆಯಿಂದ ಹಿರಿಯ ಪ್ರಧಾನ ಆಪ್ತ ಕಾರ್ಯದರ್ಶಿ ಹುದ್ದೆಯಿಂದ ನಿವೃತ್ತಿ ಹೊಂದಿರುವ ಶ್ರೀ ಎಂ.ಎನ್ ಗೌಡ ಇವರನ್ನು ಕರ್ನಾಟಕ ಸರ್ಕಾರ ನವದೆಹಲಿಯಲ್ಲಿ ಉಪ ನಿವಾಸಿ ಆಯುಕ್ತರನ್ನಾಗಿ ನೇಮಕಾತಿ ಮಾಡಿದೆ.

ಕೇಂದ್ರ ಲೋಕ ಸೇವಾ ಆಯೋಗದ ಪರೀಕ್ಷೆಯ ಮೂಲಕ 1976 ರಲ್ಲಿ ಕೇಂದ್ರ ಸಚಿವಾಲಯ ಸೇವೆ ಸೇರಿದ ಇವರು ಆರೋಗ್ಯ, ಕೈಗಾರಿಕೆ, ಹಣಕಾಸು, ವಾಣಿಜ್ಯ, ಕ್ರೀಡೆ ಮತ್ತು ಯುವ ಜನ ಸೇವೆ, ಮಹಿಳಾ ಮತ್ತು ಮಕ್ಕಳ ಕಲ್ಯಾಣ, ಕಲ್ಲಿದ್ದಲು ಹಾಗೂ ಗ್ರಾಮೀಣಾಭಿವೃದ್ಧಿಯಂತಹ ಇಲಾಖೆಗಳಲ್ಲಿ ಹಾಗೂ 11 ನೇ ಹಣಕಾಸು ಆಯೋಗದಲ್ಲಿಯೂ ಸಹ ಸೇವೆಯನ್ನು ಸಲ್ಲಿಸಿರುತ್ತಾರೆ.

ಸರ್ಕಾರಿ ಸೇವೆಗೆ ಸೇರಿದ ಮೊದಲ ಹಂತದಲ್ಲಿ ಟೆಲಿಕಾಂ ಇಂಜಿನಿಯರಿಂಗ್ ಡಿವಿಷನ್ ಹುಬ್ಬಳ್ಳಿ, ಬೆಳಗಾಂ ಮತ್ತು ಮೈಸೂರುಗಳಲ್ಲಿ ಸೇವೆ ಸಲ್ಲಿಸಿರುವ ಶ್ರೀ ಎಂ.ಎನ್ ಗೌಡ ಮೂಲತ: ದಕ್ಷಿಣ ಕನ್ನಡ ಜಿಲ್ಲೆಯ ಪುತ್ತೂರು-ಸುಬ್ರಮಣ್ಯ ಮಾರ್ಗ ಮಧ್ಯದಲ್ಲಿರುವ ಕಾಣಿಯೂರಿನ ಪಕ್ಕದ ಚಾರ್ವಾಕ ಗ್ರಾಮದವರು.



ಡಾ. ಹೆಚ್.ಎಸ್ ರಾಜೇಂದ್ರಸಿಂಗ್, ದೆಹಲಿಯ ಕರ್ನಾಟಕ ಭವನದ ಉಪ ನಿವಾಸಿ ಆಯುಕ್ತರಾಗಿ ಇತ್ತೀಚೆಗೆ ನಿಯೋಜನೆಗೊಂಡಿರುತ್ತಾರೆ. 1984 ವೃಂದದ ಕೆ.ಎ.ಎಸ್ ಅಧಿಕಾರಿಯಾದ ಇವರು ಮೊದಲು ಅನೇಕ ತಾಲ್ಲೋಕುಗಳಲ್ಲಿ ತಹಸೀಲ್ದಾರ ಆಗಿ ಕರ್ತವ್ಯ ನಿರ್ವಹಿಸಿ ನಂತರ 1987ರಿಂದ ಸಹಾಯಕ ಆಯುಕ್ತರಾಗಿ ಅನೇಕ ಉಪ ವಿಭಾಗಗಳಲ್ಲಿಯೂ ಜನಪರ ಆಡಳಿತ ನೀಡಿರುತ್ತಾರೆ. ಪ್ರಸ್ತುತ ಕರ್ನಾಟಕ ರಾಜ್ಯದ ಕೆ.ಎ.ಎಸ್ ಹಿರಿಯ ಶ್ರೇಣಿಯ ಅಧಿಕಾರಿಯಾಗಿರುತ್ತಾರೆ.

ಮೈಸೂರಿನ ಮಾನಸ ಗಂಗೋತ್ರಿಯಲ್ಲಿ ಸ್ನಾತಕೋತ್ತರ ಪದವಿ ಪಡೆದನಂತರ ಅಲ್ಲಿಯೇ ಅಧ್ಯಾಪಕರಾಗಿ ಹಲವು ವರ್ಷಗಳ ಸೇವೆಯನ್ನು ಸಲ್ಲಿಸಿರುತ್ತಾರೆ. ಉನ್ನತ ವ್ಯಾಸಂಗದ ನಂತರ ಶೈಕ್ಷಣಿಕ ಮತ್ತು ಸಾಂಸ್ಕೃತಿಕ ಚಟುವಟಿಕೆಗಳ ನಿಮಿತ್ತ ಅಮೇರಿಕಾ, ಫ್ರಾನ್ಸ್, ಜರ್ಮನಿ, ಇಟಲಿ, ಹಾಲೆಂಡ್, ಬೆಲ್ಜಿಯಂ, ದಕ್ಷಿಣ ಆಫ್ರಿಕಾ, ಈಜಿಪ್ಟ್, ಚೀನಾ, ಇಂಗ್ಲೆಂಡ್ ಮುಂತಾದ ಅನೇಕ ದೇಶಗಳಿಗೆ ಭೇಟಿ ನೀಡಿ ಉನ್ನತ ತರಬೇತಿಗಳನ್ನು ಹೊಂದಿರುತ್ತಾರೆ. ವೃತ್ತಿಯಲ್ಲಿ ಉಪ ಆಯುಕ್ತರಾದ ಇವರು ಪ್ರವೃತ್ತಿಯಿಂದ ವಿದ್ಯಾರ್ಥಿ ದೆಸೆಯಿಂದಲೂ ಸಾಹಿತ್ಯ, ಹವ್ಯಾಸಿ ರಂಗಭೂಮಿ, ಸಿನಿಮಾ, ಪತ್ರಿಕೋದ್ಯಮ ಮುಂತಾದ ಕ್ಷೇತ್ರಗಳಲ್ಲಿ ಆಸಕ್ತಿ ಹೊಂದಿದ್ದು ಸಕ್ರಿಯವಾಗಿ ತೊಡಗಿಸಿಕೊಂಡಿದ್ದಾರೆ.

**ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾಗೂ ಸಮಸ್ತ ದೆಹಲಿ ಕನ್ನಡಿಗರ ಪರವಾಗಿ ಹಾರ್ದಿಕ ಅಭಿನಂದನೆಗಳು.**

## ಹಿರಿಯ ಸಾಹಿತಿ ನಾಡೋಜ ಡಾ. ಕಮಲಾ ಹಂಪನಾ ಅವರಿಗೆ 'ಚಾವುಂಡರಾಯ ಪ್ರಶಸ್ತಿ'



ಶ್ರವಣಬೆಳಗೊಳದ ಶ್ರೀ ಕ್ಷೇತ್ರವು ಕನ್ನಡ ಸಾಹಿತ್ಯ ಪರಿಷತ್ತಿನಲ್ಲಿ ಸ್ಥಾಪಿಸಿರುವ ಎರಡು ಲಕ್ಷ ರೂ.ಗಳ ದತ್ತಿ ನಿಧಿ ಅಡಿಯಲ್ಲಿ 'ಚಾವುಂಡರಾಯ ಪ್ರಶಸ್ತಿ'ಯನ್ನು ಈ ಬಾರಿ ಹಿರಿಯ ಸಾಹಿತಿ ನಾಡೋಜ ಡಾ. ಕಮಲಾ ಹಂಪನಾ ಅವರಿಗೆ ಪ್ರದಾನ ಮಾಡಲಾಗಿದೆ. ವಿದ್ವಾಂಸರಾಗಿ, ಉತ್ತಮ ಪ್ರಾಧ್ಯಾಪಕಿಯಾಗಿ, ಲೇಖಕಿಯರಲ್ಲೇ ವಿಶಿಷ್ಟ ಸಾಧನೆ ಮಾಡಿರುವ ಕಮಲಾರವರು ಪಡೆದ ಪ್ರಶಸ್ತಿಗಳಿಗೆ ಲೆಕ್ಕವಿಲ್ಲ. ರಾಜ್ಯೋತ್ಸವ ಪ್ರಶಸ್ತಿ, ದಾನ ಚಿಂತಾಮಣಿ ಪ್ರಶಸ್ತಿ, ಟೊರೆಂಟೋ, ವ್ಯಾಂಕೊವರ್, ಲಾಸ್ ಏಂಜಲೀಸ್, ಬ್ರಿಟನ್ ಮುಂತಾದ ವಿದೇಶಿ ಪುರಸ್ಕಾರ. 2003ರಲ್ಲಿ ಮೂಡಬಿದರೆಯಲ್ಲಿ ನಡೆದ 71ನೇ ಕನ್ನಡ ಸಾಹಿತ್ಯ ಸಮ್ಮೇಳನದ ಅಧ್ಯಕ್ಷತೆ ವಹಿಸಿದ್ದರು. ಬಿಂದಲಿ, ಬುಗುಡಿ, ಮುಡಿಮಲ್ಲಿಗೆ, ಬೆಳ್ಳಕ್ಕಿ, ಬಾನಾಡಿ, ನಕ್ಕಿತು ಹಾಲಿನ ಬಟ್ಟಲು, ರೆಕ್ಕೆ ಮುರಿದಿತ್ತು ಮೊದಲಾದ ಸುಮಾರು ಐವತ್ತಕ್ಕೂ ಹೆಚ್ಚು ಕೃತಿಗಳನ್ನು ಕನ್ನಡ ಸಾಹಿತ್ಯಕ್ಕೆ ನೀಡಿದ್ದಾರೆ.

## ಕಾದಂಬರಿಕಾರ್ತಿ ಡಾ. ಗೀತಾ ನಾಗಭೂಷಣ ಅವರಿಗೆ ರಚನಾ ಸಮಗ್ರ ಪುರಸ್ಕಾರ



ಕಾದಂಬರಿಕಾರ್ತಿ ಡಾ. ಗೀತಾ ನಾಗಭೂಷಣ ಅವರಿಗೆ ಕೋಲ್ಕತ್ತದಲ್ಲಿರುವ ಭಾರತೀಯ ಭಾಷಾ ಪರಿಷತ್ ನೀಡುವ ರಚನಾ ಸಮಗ್ರ ಪುರಸ್ಕಾರ- 2011- 12 ದೊರೆತಿದೆ. ಈ ಪ್ರಶಸ್ತಿ ಒಂದು ಲಕ್ಷ ರುಪಾಯಿ ನಗದು ಹಾಗೂ ಸ್ಮರಣಿಕೆ ಒಳಗೊಂಡಿರುತ್ತದೆ.

ಗೀತಾ ನಾಗಭೂಷಣ ಅವರು ಈ ರಾಷ್ಟ್ರೀಯ ಪುರಸ್ಕಾರಕ್ಕೆ ಪಾತ್ರರಾದ ಮೊದಲ ಕನ್ನಡಿಗರಾಗಿದ್ದಾರೆ. ಡಾ. ಗೀತಾ ನಾಗಭೂಷಣ 1968ರಲ್ಲಿ ಪ್ರಕಟಿಸಿದ ತಾವರೆಯ ಹೂವು ಕಾದಂಬರಿಯಿಂದ ಹಿಡಿದು ಈಚೆಗಿನ 'ಬದುಕು' ಕಾದಂಬರಿವರೆಗೂ ಸುಮಾರು 27ಕಾದಂಬರಿಗಳನ್ನು ಬರೆದಿದ್ದಾರೆ.ಅವರ 'ಬದುಕು' ಕಾದಂಬರಿಗೆ 2004ರಲ್ಲಿ ಕೇಂದ್ರ ಸಾಹಿತ್ಯ ಅಕಾಡೆಮಿ ಪುರಸ್ಕಾರ ದೊರೆತಿದೆ. ಗದಗದಲ್ಲಿ ನಡೆದ 76ನೇ ಅಖಿಲ ಭಾರತ ಕನ್ನಡ ಸಾಹಿತ್ಯ ಸಮ್ಮೇಳನಕ್ಕೆ ಅವರು ಅಧ್ಯಕ್ಷರಾಗಿದ್ದರು.

**ಇವರಿಗೆ ದೆಹಲಿ ಕರ್ನಾಟಕ ಸಂಘದ ಪರವಾಗಿ ಹಾರ್ದಿಕ ಅಭಿನಂದನೆ.**

## ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ಪಿಕ್‌ನಿಕ್

ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯು 19 ಫೆಬ್ರವರಿ 2012ರ ಭಾನುವಾರದಂದು ತಮ್ಮ ಸಂಘ ಆರಂಭವಾಗಿ 10ವರ್ಷಗಳು ಪೂರ್ತಿಯಾದ ನೆನಪಿನಲ್ಲಿ ದೆಹಲಿಯ ಪ್ರಸಿದ್ಧ ಇಂದ್ರಪ್ರಸ್ಥ ಪಾರ್ಕ್‌ನಲ್ಲಿ ಪಿಕ್‌ನಿಕ್ ಕಾರ್ಯಕ್ರಮವನ್ನು ಹಮ್ಮಿಕೊಂಡಿತ್ತು.

ದೆಹಲಿ ಪೋಲೀಸ್ ಕನ್ನಡಿಗರ ಬಳಗದ ಸಮೂಹವೇ ಸೇರಿದ್ದ ಈ ಕಾರ್ಯಕ್ರಮದ ಉದ್ಘಾಟನೆಯನ್ನು ಹಿರಿಯ ಕನ್ನಡ ಚಿತ್ರನಟ ಶ್ರೀಯುತ ಅಶೋಕ್‌ರವರು ಮಾಡಿದರು. ಅವರಿಗೆ ಪುಷ್ಪಗುಚ್ಛವನ್ನು ನೀಡಿ ಸನ್ಮಾನಿಸಲಾಯಿತು.

ಸಂಘದ ಅಧ್ಯಕ್ಷ ಶ್ರೀ ಸಿದ್ದಲಿಂಗಪ್ಪ ಅವರು ಸ್ವಾಗತ ಭಾಷಣ ಮಾಡಿ, ಆಟೋಟ ಸ್ಪರ್ಧೆಗಳನ್ನು ನಡೆಸಲು ಅನುಮತಿಸಿದರು. ದೆಹಲಿ ಕನ್ನಡಿಗರ ಕಲ್ಯಾಣ ಸಮಿತಿಯ ಸದಸ್ಯರು ಹಾಗೂ ಅವರ ಕುಟುಂಬದವರು ಮತ್ತು ಮಕ್ಕಳು ಎಲ್ಲಾ ಆಟೋಟ ಸ್ಪರ್ಧೆಗಳಲ್ಲಿ ಭಾಗವಹಿಸಿ, ಮಧ್ಯಾಹ್ನದ ಊಟದ ನಂತರ ಉಳಿದ ಆಟೋಟಗಳನ್ನು ಆಡಿ ಆಕರ್ಷಣೆಯ ಪ್ರಶಸ್ತಿಗಳನ್ನು ತಮ್ಮದಾಗಿಸಿಕೊಂಡರು. ಸಂಜೆ ಕಾಫಿಯ ನಂತರ ಸಂಘದ ಕಾರ್ಯದರ್ಶಿಗಳಾದ ಶ್ರೀ ಎಚ್.ಜಿ. ಶಿವರಾಮ್ ಅವರ ವಂದನಾರ್ಪಣೆಯೊಂದಿಗೆ ಪಿಕ್‌ನಿಕ್ ಕಾರ್ಯಕ್ರಮ ಮುಕ್ತಾಯಗೊಂಡಿತು.

**(ದೆಹಲಿ ಪೋಲೀಸ್ ಕನ್ನಡಿಗರ ಕಲ್ಯಾಣ ಸಮಿತಿಯ ಪ್ರಧಾನ ಕಾರ್ಯದರ್ಶಿಗಳಾಗಿ ಎಚ್.ಜಿ. ಶಿವರಾಮ್ ಅವರು ಆಯ್ಕೆಯಾಗಿದ್ದಾರೆ)**

● ಮಮತಾ ಶಿವರಾಮ್



Delhi Karnataka Sangha's Abhimatha Monthly,
March-2012, Price Rs.1/- RNI Regn. No. 53405/91, DL-SW-15/4016/10-11-12
Printout Date : March 8th / 9th, Postal Date :10th / 11th, Total Pages-24


# 5% p.a.

Interest on

## SB DEPOSIT

Interest calculated on daily balance
& CREDITED QUARTERLY

Upto

# 9.75% p.a

Interest on deposit for
General Public & NREs

Upto
10.25% p.a.
for Senior Citizens

Conditions apply

Step into your nearest branch for details

Karnataka Bank Ltd.
Your Family Bank. Across India.

Regd. & Head Office: Mangalore - 575 002
E-mail: info@ktkbank.com Visit us at: www.karnatakabank.com


Editor: Smt.Usha Bharatadri, Printed & Published by C.M. Nagaraja General Secretary on behalf of Delhi Karnataka Sangha (R), Rao Tularam Marg, Sector-12, R.K.Puram, New Delhi-110022, Tel: 26109615 and printed at Saujanya Printing Press, C-95, Okhla Industrial Area, Phase-I, New Delhi-110020, Tel: 26815778, 40520770